ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 5 ಗುರುವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 228 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಪ್ರತಿಯೊಬ್ಬರು ಕನ್ನಡದಲ್ಲಿ ಸಹಿ ಮಾಡುವ ಪರಿಪಾಠ ರೂಢಿಸಿಕೊಳ್ಳಿ

ಖ್ಯಾತ ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಸಲಹೆ



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಆಯೋಜಿಸಿದ್ದ ಕರುನಾಡ ಹಬ್ಬ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಖ್ಯಾತ ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಉದ್ಘಾಟಿಸಿದರು.

ಮೈಸೂರು, ಡಿ.4(ಬಿಎಲ್‌ಯು)– ಪ್ರತಿಯೊಬ್ಬರು ಕನ್ನಡದಲ್ಲಿ ಸಹಿ ಮಾಡುವ ಪರಿಪಾಠ ರೂಢಿಸಿಕೊಳ್ಳಬೇಕು ಎಂದು ಖ್ಯಾತ ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಸಲಹೆ ನೀಡಿದರು.

ಮೈಸೂರಿನ ಕಲಾಮಂದಿರದ ಕಿರು ರಂಗ ಮಂದಿರದಲ್ಲಿ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಆಯೋಜಿಸಿದ್ದ ಕರುನಾಡ ಹಬ್ಬ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾನು ಕನ್ನಡದಲ್ಲಿ ಸಹಿ ಮಾಡುತ್ತೇನೆ. ಇದರಿಂದ ನನಗೆ ರೋಮಾಂಚನಕಾರಿ ಅನುಭವವಾಗುತ್ತದೆ. ಅದೇ ರೀತಿ ಪ್ರತಿಯೊಬ್ಬರು ಕನ್ನಡದಲ್ಲಿ ಸಹಿ ಮಾಡುವ ಪರಿಪಾಠ ರೂಢಿಸಿಕೊಳ್ಳಬೇಕು ಎಂದು ಹೇಳಿದರು.

ಕನ್ನಡ ಭಾಷೆಯನ್ನು ಹೆಚ್ಚಾಗಿ ಬಳಸಬೇಕು. ಆಗ ಮಾತ್ರ ಕನ್ನಡ ಉಳಿಯುತ್ತದೆ. ಬೆಳೆಯುತ್ತದೆ ಎಂದು ಡಾ.ರಾಜಶೇಖರ್ ಅಭಿಪ್ರಾಯಪಟ್ಟರು.

ಈ ವೇಳೆ ಮಾತನಾಡಿದ ಪ್ರಾಧ್ಯಾಪಕ ಡಾ.ಎಂ.ಬಿ.ಮಂಜುನಾಥ್, ಕನ್ನಡ ಭಾಷೆಗೆ ಪ್ರಾಚೀನ ಇತಿಹಾಸವಿದೆ. ಡಾ.ಬಿ.ಜಿ.ಎಲ್ ಸ್ವಾಮಿ ಅವರಿಗೆ ಮಾತೃಭಾಷೆ ತಮಿಳು ಆಗಿದ್ದರೂ ಕನ್ನಡದ ಹಲವು ಶಾಸನಗಳ ವಿಶಾಲಾರ್ಥ ತಿಳಿಸುತ್ತಿದ್ದರು ಎಂದರು.

ಮೈಸೂರು ಆಕಾಶವಾಣಿಯ ಹಿರಿಯ ಉದ್ಘೋಷಕ ಡಾ.ಮೈಸೂರು ಉಮೇಶ್ ಮಾತನಾಡಿ, ನಮ್ಮ ದಿನ ನಿತ್ಯದಲ್ಲಿ ಕನ್ನಡ ಬಳಕೆ ನಿರಂತರವಾಗಿರಬೇಕು ಎಂದು ಸಲಹೆ ನೀಡಿದರು. ಇಲಾಖೆ ಅಪರ ನಿರ್ದೇಶಕ ಸಿದ್ದರಾಜು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಇದೇ ವೇಳೆ ಹಲವು ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಗೌತಮ್‌ಗೆ ಪಿಹೆಚ್.ಡಿ ಪದವಿ



ಮೈಸೂರು, ಡಿ.4–ಜ್ಯೋತಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್‌ನ ಆಂಗ್ಲ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಮೈಸೂರು ಜಿಲ್ಲೆಯ ಸಿ.ಗೌತಮ್ ಅವರು ಎಪಿಸ್ಟೆ ಮೊಲಾಜಿಕಲ್ ರೀಡಿಂಗ್ ಆಫ್ ದಲಿತ್ ಆಟೋಬಯಾಗ್ರಾಫೀಸ್: ಹಿಸ್ಟರಿ, ಲಿಟರೇಚರ್ ಅಂಡ್ ಪಾಲಿಟಿಕ್ಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಪ್ರಸಿಡೆನ್ಸಿ ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿ ನೀಡಿ ಗೌರವಿಸಿದೆ.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.4–ನಿರ್ವಹಣಾ ಕೆಲಸದ ನಿಮಿತ್ತ ಡಿ.5ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸರಸ್ವತಿಪುರಂ 1ರಿಂದ 5ನೇ ಮೇನ್, ನ್ಯೂ ಕಾಂತರಾಜ ಅರಸ್ ರಸ್ತೆ, ಕೆ.ಜಿ. ಕೊಪ್ಪಲು ಮುಖ್ಯ ರಸ್ತೆ, ಯುನಿವರ್ಸಿಟಿ ಕ್ವಾರ್ಟ್ರಸ್, ಮುಸ್ಲಿಂ ಹಾಸ್ಟೆಲ್, ವಿಶ್ವಮಾನವ ಜೋಡಿರಸ್ತೆ ಮುರುಗನ್ ಮೆಡಿಕಲ್ಸ್‌ಯಿಂದ ಕುಕ್ಕರಹಳ್ಳಿ ಕೆರೆ ರಸ್ತೆವರೆಗೆ, ಸರಸ್ವತಿಪುರಂ 5ರಿಂದ 16ನೇ ಮೇನ್, ಪಡುವಾರಹಳ್ಳಿ, ಡಿಸಿ ರೆಸಿಡೆನ್ಸಿ, ರೀಜನಲ್ ಕಮಿಷನರ್ ಆಫೀಸ್, ಸಿಎಫ್‌ಟಿಆರ್‌ಐ ಕ್ಯಾಂಪಸ್, ವಾಲ್ಮೀಕಿ ರಸ್ತೆ, ಜಡ್ಜ್ ಕ್ವಾರ್ಟ್ರಸ್, ಒಂಟಿಕೊಪ್ಪಲು, ಹುಣಸೂರು ಮುಖ್ಯ ರಸ್ತೆ, ವಾಗ್ದೇವಿ ನಗರ, ಜೆ.ಸಿ ಕಾಲೇಜು ಸುತ್ತಮುತ್ತ, ಚಾಮರಾಜಮೊಹಲ್ಲಾ, ಜಿಲ್ಲಾ ಪಂಚಾಯತ್ ಕಚೇರಿ, ಕೋರ್ಟ್, ಅರಸು ರಸ್ತೆ, ಜಿಲ್ಲಾಧಿಕಾರಿ ಕಚೇರಿ, ಮಹಾರಾಜ ಮತ್ತು ಯುವರಾಜ ಕಾಲೇಜು ಸುತ್ತಮುತ್ತ, ಶಿವರಾಂಪೇಟೆ, ದಿವಾನ್ಸ್ ರಸ್ತೆ, ಧನ್ವಂತರಿ ರಸ್ತೆ, ಜೆ.ಕೆ ಗ್ರೌಂಡ್ ಸುತ್ತಮುತ್ತಲಿನ ಪ್ರದೇಶ, ಮೆಟ್ರೋಪೋಲ್ ಸುತ್ತಮುತ್ತ, ಜೆ.ಎಲ್.ಬಿ ರಸ್ತೆ, ಜಯಲಕ್ಷ್ಮೀ ವಿಲಾಸ್, ಜಿಲ್ಲಾ ಪಂಚಾಯತ್ ಕಚೇರಿ, ನ್ಯಾಯಾಲಯದ ಆವರಣ, ಏರ್‌ಲೈನ್ಸ್ ಹೊಟೇಲ್ ರಸ್ತೆ, ಮಹಾರಾಜ ಹಾಸ್ಟೆಲ್ ಏರಿಯಾ, ಗೀತಾ ರಸ್ತೆ, ರಾಮಸ್ವಾಮಿ ವೃತ್ತ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಲಿದೆ. ಹಾಗೆಯೇ ಅಂದು ಬೆಳಗ್ಗೆ 10ರಿಂದ ಸಂಜೆ 5:30ರವರೆಗೆ ಮೊಹಮ್ಮದ್ ಸೇಠ್ ಬ್ಲಾಕ್, ಗಾಂಧಿನಗರ, ವೀರನಗೆರೆ, ಎ.ಜೆ.ಬ್ಲಾಕ್, ನಾರ್ಥ್–ಈಸ್ಟ್ ಆಫ್ ಎನ್.ಆರ್ ಮೊಹಲ್ಲಾ, ರಾಜೇಂದ್ರ ನಗರ, ಸುಭಾಷ್‌ನಗರ, ಬಡಾ ಮಕಾನ್, ಸೋನಿಯಾ ಗಾಧಂಇ ಬಡಾವಣೆ, ಕೆಸರೆ 3ನೇ ಹಂತ, ಶಿವಾಜಿ ರಸ್ತೆ ಎ ಬಡಾವಣೆ ಮತ್ತು ಬಿ ಬಡಾವಣೆ, ಬಿ.ಟಿಮಿಲ್, ಎಲ್‌ಐಸಿ ಮತ್ತು ಮೇದರ್ ಬ್ಲಾಕ್, ತಿಲಕ್‌ನಗರ, ನೆಲ್ಸನ್ ಮಂಡೇಲಾ ರಸ್ತೆ, ಸಯ್ಯಾಜಿ ರಾವ್ ರಸ್ತೆ, ಭಾವನಾ ಮಾರ್ಬಲ್, 2ನೇ ಈದ್ಗಾ, ಬಿಬಿ ಕೇರಿ, ಸಿ.ವಿ ರಸ್ತೆ, ಸೇಂಟ್ ಜೋಸೆಫ್ ಕಾಲೇಜು ಹಾಗೂ ಸುತ್ತಮುತ್ತ. ಜಲಪುರಿ, ಗಾಯತ್ರಿಪುರಂ, ಜ್ಯೋತಿನಗರ, ಉದಯಗಿರಿ, ಕ್ಯಾತಮಾರನಹಳ್ಳಿ, ಶಾಂತಿನಗರ 1 ಮತ್ತು 2ನೇ ಹಂತ, ಗಣೇಶ್ ನಗರ, ಸತ್ಯನಗರ, ಮಹದೇವಪುರ ರಸ್ತೆ, ಜರ್ಮನ್ ಪ್ರೆಸ್, ಉಸ್ಮಾನಿಯಾ ಬ್ಲಾಕ್, ಗೌಸಿಯಾನಗರ, ರಾಘವೇಂದ್ರನಗರ, ಗಿರಿಯಾಬೋವಿ ಪಾಳ್ಯ, ಯರಗನಹಳ್ಳಿ, ಬನ್ನೂರು ರಸ್ತೆ, ಸಿದ್ದಾರ್ಥನಗರ, ಆಲನಹಳ್ಳಿ ಬಡಾವಣೆ, ಕೆಎಸ್‌ಆರ್‌ಟಿಸಿ ಬಡಾವಣೆ, ಪೊಲೀಸ್ ಬಡಾವಣೆ 1ನೇ ಮತ್ತು 2ನೇ ಹಂತ, ಗಿರಿದರ್ಶಿನಿ ಬಡಾವಣೆ, ನಂದಿನ ಬಡಾವಣೆ 1ನೇ ಮತ್ತು 2ನೇ ಹಂತ, ನೇತಾಜಿ ಬಡಾವಣೆ ಹಾಗೂ ಸುತ್ತಮುತ್ತ ವಿದ್ಯುತ್ ನಿಲುಗಡೆಯಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.



ದೊಡ್ಡಮ್ಮತಾಯಿ ದೇವಸ್ಥಾನದ ವಾರ್ಷಿಕೋತ್ಸವ

ಮೈಸೂರು,ಡಿ.4–ಶ್ರೀ ದೊಡ್ಡಮ್ಮತಾಯಿ ಸೇವಾ ಟ್ರಸ್ಟ್ ವತಿಯಿಂದ ಡಿ.9ರಂದು ಶ್ರೀದೇವಿ ಪ್ರಸನ್ನ ದೊಡ್ಡಮ್ಮತಾಯಿ ದೇವಸ್ಥಾನದ 25ನೇ ವಾರ್ಷಿಕೋತ್ಸವ ಸಮಾರಂಭ ಹಾಗೂ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ. ಪಂಚಾಮೃತ ಅಭಿಷೇಕ, ಗಣಪತಿ ಹೋಮ, ನವಗ್ರಹ ಹೋಮ, ಪೂರ್ಣಾಹುತಿ, ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಲಿದೆ. ಅದೇ ದಿನ ಸಂಜೆ ಗವಿಮಠ ದೇವಸ್ಥಾನದಿಂದ ಶ್ರೀ ದೊಡ್ಡಮ್ಮತಾಯಿ ದೇವಸ್ಥಾನಕ್ಕೆ 25 ಕಳಸಗಳನ್ನು, ಹೆಣ್ಣು ಮಕ್ಕಳಿಂದ ತರಲಾಗುವುದು. ಸಂಜೆ 7 ಗಂಟೆಗೆ ದೇವಿಯ ಉತ್ಸವವನ್ನು ದತ್ತನಗರ, ಗವಿಮಠದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ನಡೆಸಲಾಗುವುದು. ಡಿ.10ರಂದು ಅನ್ನದಾನ ಏರ್ಪಡಿಸಲಾಗಿದೆ.

ಅರ್ಜುನನಿಗೆ ಭಾವಪೂರ್ಣ ಶ್ರದ್ಧಾಂಜಲಿ



ಮೈಸೂರಿನ ಅಗ್ರಹಾರ ವೃತ್ತದಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಕ್ಯಾಪ್ಟನ್ ಅರ್ಜುನನಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಪ್ಯಾಲೇಸ್ ಬಾಬು, ಮಾದಪ್ಪ, ನಿವೃತ್ತ ಶಿಕ್ಷಕ ಮನೋಹರ್, ಭವಾನಿ, ಸಿದ್ದಪ್ಪ ಎಲ್‌ಐಸಿ, ಗೋವಿಂದರಾಜ್, ಸ್ವಾಮಿ, ಹರೀಶ್, ರಮೇಶ್ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ತೈಲಚಿತ್ರ ಅನಾವರಣ

ಮೈಸೂರು,ಡಿ.4–ಮೈಸೂರಿನ ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ ವತಿಯಿಂದ ಡಿ.6ರಂದು ಮಧ್ಯಾಹ್ನ 12 ಗಂಟೆಗೆ ಜಯಲಕ್ಷ್ಮೀಪುರಂನಲ್ಲಿರುವ ತ್ರಯೀನ್ಯಾಸ್ ಶ್ರೀ ವಿದ್ಯಾ ಮಂದಿರದಲ್ಲಿ ಶ್ರೀ ಚಾಮುಂಡೇಶ್ವರಿ ದೇವಿಯ ತೈಲಚಿತ್ರ ಅನಾವರಣ ಕಾರ್ಯಕ್ರಮ ಆಯೋಜಿಸಲಾಗಿದೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತೈಲಚಿತ್ರ ಅನಾವರಣ ಮಾಡುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ ಭಾಗವಹಿಸಲಿದ್ದು, ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮೈಸೂರು ಜಿಲ್ಲಾ ರಾಜ್ಯೋತ್ಸವ ಪುರಸ್ಕೃತ ಪತ್ರಕರ್ತರಿಗೆ ಸನ್ಮಾನ

ಪ್ರಜಾಪ್ರಭುತ್ವ ವ್ಯವಸ್ಥೆ ಕ್ರಿಯಾಶೀಲವಾಗಿರಲು ಮಾಧ್ಯಮ ಬಲಿಷ್ಠವಾಗಿರಬೇಕು: ಹೆಚ್‌ಸಿಎಂ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ದಲಿತ ಮಹಾ ಸಭಾ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಸಕ್ತ ಸಾಲಿನ ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರ ಪಡೆದ ಪತ್ರಕರ್ತರನ್ನು ಅಭಿನಂದಿಸಲಾಯಿತು.

ಮೈಸೂರು, ಡಿ.4(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ದಲಿತ ಮಹಾಸಭಾ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಶಾಸಕ ತನ್ವೀರ್ ಸೇಠ್ ಅವರು ಪ್ರಸಕ್ತ ಸಾಲಿನ ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರ ಪಡೆದ ಪತ್ರಕರ್ತರನ್ನು ಅಭಿನಂದಿಸಿದರು.

ಈ ವೇಳೆ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಮೂಕನಾಯಕ, ಬಹಿಷ್ಕೃತ ಭಾರತ ಪತ್ರಿಕೆಯನ್ನು ಹೊರತರುವ ಮೂಲಕ ದೇಶದಲ್ಲಿ ಧ್ವನಿ ಇಲ್ಲದವರಿಗೆ ಧ್ವನಿ ನೀಡುವ ಕೆಲಸವನ್ನು ಸ್ವಾತಂತ್ರ್ಯಪೂರ್ವದಲ್ಲೇ ಮಾಡಿದ್ದರು ಎಂದು ಸ್ಮರಿಸಿ, ಪ್ರಜಾಪ್ರಭುತ್ವ ವ್ಯವಸ್ಥೆ ಕ್ರಿಯಾಶೀಲವಾಗಿರಲು ಮಾಧ್ಯಮ ಬಲಿಷ್ಠವಾಗಿರಬೇಕು ಎಂದರು.

ಶಾಸಕ ತನ್ವೀರ್ ಸೇಠ್ ಮಾತನಾಡಿ, ಇತ್ತೀಚೆಗೆ ನಡೆದ ಮುಡಾ ಸಭೆಯಲ್ಲಿ ಬಾಡೂಟ ವ್ಯವಸ್ಥೆ ಮಾಡಿದ್ದನ್ನು ಮಾಧ್ಯಮಗಳು ದೊಡ್ಡದಾಗಿ ಬಿಂಬಿಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿ, ಮುಡಾ ಸಭೆಯಲ್ಲಿ ಬಾಡೂಟ ಮಾಡಿದರು ಎನ್ನುವುದು ಚರ್ಚೆಯ ವಿಷಯವಲ್ಲ. ಬದಲಿಗೆ ಆ ಸಭೆಯಲ್ಲಿ ಏನೇನು ಚರ್ಚೆಯಾಯಿತು ಎಂಬುದು ಸಾರ್ವಜನಿಕವಾಗಿ ಚರ್ಚೆಯಾಗಬೇಕು ಎಂದು ತಿಳಿಸಿದರು.

ಜಿಲ್ಲಾ ಮಟ್ಟದ ಪ್ರಶಸ್ತಿ ಬಂದಿದ್ದಕ್ಕೆ ಖುಷಿಪಡುವುದಲ್ಲ. ಈ ಪ್ರಶಸ್ತಿ ಜವಾಬ್ದಾರಿಯನ್ನು ಹೆಚ್ಚಿಸಿದೆ. ಮತ್ತಷ್ಟು ಕ್ರಿಯಾಶೀಲರಾಗಿ ರಾಜ್ಯಮಟ್ಟದಲ್ಲಿ ಗುರುತಿಸುವಂತಹ ಕೆಲಸ ಮಾಡಿ, ನಿಮ್ಮ ವೃತ್ತಿಗೆ ಗೌರವ ಸಲ್ಲಿಸಿ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಜಿಲ್ಲಾಧಿಕಾರಿಗಳು ನಡೆಸುವ ಸಭೆ, ಮುಡಾ ಸಭೆಗಳಿಗೆ ಪತ್ರಕರ್ತರಿಗೆ ಮುಕ್ತ ಪ್ರವೇಶ ನೀಡಿ, ಸಭೆಗಳಲ್ಲಿ ಜನಪ್ರತಿನಿಧಿಗಳು ಛೀಮಾರಿ ಹಾಕಿದ್ದನ್ನು ಮಾಧ್ಯಮಗಳು ಬಿತ್ತರಿಸುತ್ತವೆ. ಪತ್ರಿಕೆಗಳಲ್ಲಿ ವರದಿಯಾಗುತ್ತದೆ ಎಂಬ ಸಂಕುಚಿತ ಭಾವನೆ ಅಧಿಕಾರಿ ವರ್ಗದಲ್ಲಿದ್ದರೆ, ಶಹಬ್ಬಾಸ್‌ಗಿರಿ ಪಡೆಯುವಂತಹ ಕೆಲಸ ಮಾಡಿ ಪತ್ರಿಕೆಗಳಲ್ಲಿ ಅದನ್ನೂ ಬರೆಯುತ್ತೇವೆ. ಅದ್ದರಿಂದ ಜಿಲ್ಲಾ ಉಸ್ತುವಾರಿ ಸಚಿವರು ಸಭೆಗಳಿಗೆ ಮಾಧ್ಯಮದವರಿಗೆ ಮುಕ್ತ ಪ್ರವೇಶ ನೀಡಿ ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಹಿರಿಯ ಛಾಯಾಗ್ರಾಹಕ ಎಲ್.ಎಂ.ಲಕ್ಷ್ಮೀನಾರಾಯಣ್ ಯಾದವ್, ಅನುರಾಗ್ ಬಸವರಾಜು, ಸುಬ್ರಮಣ್ಯ, ಗವಿಮಠ ರವಿ, ಎಂ.ಟಿ. ಮಹದೇವ್, ಸತೀಶ್, ನವೀನ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆಎಸ್.ಶಿವರಾಮು, ಪಾಲಿಕೆ ಮಾಜಿ ಸದಸ್ಯ ಧ್ರುವರಾಜ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಉಪಾಧ್ಯಕ್ಷ ಚಂದ್ರಶೇಖರ್, ದಲಿತ ಮಹಾಸಭಾದ ಅಧ್ಯಕ್ಷ ರಾಜೇಶ್, ಎಸ್.ಎ.ರಹೀಂ ಉಪಸ್ಥಿತರಿದ್ದರು.

ಅಂಬಾರಿ ಹೊರುತ್ತಿದ್ದ ಅರ್ಜುನನಿಗೆ ಹುತಾತ್ಮ ಪಟ್ಟದೊಂದಿಗೆ ಸ್ಮಾರಕ ನಿರ್ಮಿಸಬೇಕು

'ಅರ್ಜುನ ಮರೆವುದೆಂತು ನಿನ್ನ' ಕಾರ್ಯಕ್ರಮದಲ್ಲಿ ಸರ್ಕಾರಕ್ಕೆ ಆಗ್ರಹ



ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಬುಧವಾರ ಮೈಸೂರು ಕಲ್ಚರಲ್ ಅಸೋಸಿಯೇಷನ್ ಆಯೋಜಿಸಿದ್ದ 'ಅರ್ಜುನ ಮರೆವುದೆಂತು ನಿನ್ನ' ಕಾರ್ಯಕ್ರಮವನ್ನು ನಿವೃತ್ತ ಅರಣ್ಯಾಧಿಕಾರಿ ಟಿ.ಬಾಲಚಂದ್ರ ಉದ್ಘಾಟಿಸಿದರು.

ಮೈಸೂರು,ಡಿ.4 (ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊರುತ್ತಿದ್ದ ಅರ್ಜುನನ ಬಲಿದಾನದ ನೆನಪಿಗಾಗಿ ಮೈಸೂರಿನಲ್ಲಿ 'ಅರ್ಜುನ ಮರೆವುದೆಂತು ನಿನ್ನ' ಅರ್ಥಪೂರ್ಣ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಅರ್ಜುನನಿಗೆ ಹುತಾತ್ಮ ಪಟ್ಟ ನೀಡಿ ಮೈಸೂರಿನಲ್ಲಿ ಸ್ಮಾರಕ ನಿರ್ಮಾಣ ಮಾಡಬೇಕೆಂದು ಸರ್ಕಾರವನ್ನು ಆಗ್ರಹಿಸುವ ನಿರ್ಣಯವನ್ನು ಈ ವೇಳೆ ಕೈಗೊಳ್ಳಲಾಯಿತು.

ನಗರದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ಎ.ಪಿ.ನಾಗೇಶ್ ನೇತೃತ್ವದ ಮೈಸೂರು ಕಲ್ಚರಲ್ ಅಸೋಸಿಯೇಷನ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅರ್ಜುನನ ಸೇವೆಯನ್ನು ಸ್ಮರಿಸಲಾಯಿತು. ಇದೇ ದಿನ, ಕಳೆದ ವರ್ಷದ ಡಿಸೆಂಬರ್ 4ರಂದು ಕಾಡಾನೆ ದಾಳಿಗೆ ಅರ್ಜುನ ಬಲಿಯಾಗಿ ಒಂದು ವರ್ಷವಾಗಲಿದೆ. ದಸರಾದಲ್ಲಿ ಚಿನ್ನದ ಅಂಬಾರಿ ಹೊರುತ್ತಿದ್ದ ಅರ್ಜುನ ಕಾಡುಪ್ರಾಣಿಗಳನ್ನು ಸೆರೆ ಹಿಡಿಯುವ ಕಾರ್ಯಾಚರಣೆಯಲ್ಲಿ ನಿಸ್ಸೀಮನಾಗಿದ್ದ ಎಂದು ಈ ಸಂದರ್ಭದಲ್ಲಿ ಅವನ ಸೇವೆಯನ್ನು ಸ್ಮರಿಸಲಾಯಿತು.

ಅರ್ಜುನನ ಸೇವೆಯನ್ನು ಸ್ಮರಿಸಿ, ಹುತಾತ್ಮ ಪಟ್ಟ ನೀಡಬೇಕು. ಮೈಸೂರು ಅರಮನೆ ಒಂದು ಭಾಗಕ್ಕೆ ಅರ್ಜುನನ ಹೆಸರು ನಾಮಕರಣ ಮಾಡಬೇಕು. ಜೊತೆಗೆ ಮೈಸೂರಿನಲ್ಲಿ ಸ್ಮಾರಕ ಕೂಡ ನಿರ್ಮಾಣ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು.

ಈ ವೇಳೆ ಮಾತನಾಡಿದ ನಿವೃತ್ತ ಅರಣ್ಯಾಧಿಕಾರಿ ಟಿ.ಬಾಲಚಂದ್ರ, ಅರ್ಜುನನಿಗೆ ಹುತಾತ್ಮ ಪಟ್ಟ ನೀಡುವುದು ಸಮಂಜಸ ಎಂದು ಅಭಿಪ್ರಾಯಪಟ್ಟರು.

ಅರಣ್ಯ ಇಲಾಖೆ ಪಶು ವೈದ್ಯಾಧಿಕಾರಿ ಡಾ.ನಾಗರಾಜ್ ಮಾತನಾಡಿ, ನನ್ನ 21 ವರ್ಷದ ಸೇವೆಯಲ್ಲಿ 85 ಆನೆ ಸೆರೆ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದೇನೆ. ಇದರಲ್ಲಿ 2014ರಲ್ಲಿ ಹಾಸನ ಜಿಲ್ಲೆಯಲ್ಲಿ ಒಂದೇ ವರ್ಷದ ಕಾರ್ಯಾಚರಣೆಯಲ್ಲಿ 22 ಆನೆ ಸೆರೆ ಹಿಡಿಯಲಾಗಿದ್ದು, ಇದರಲ್ಲಿ ನಿರ್ಭಯವಾಗಿ ನಮಗೆ ಬೆನ್ನೆಲುಬಾಗಿ ಅರ್ಜುನ ನಿಂತಿದ್ದ ಎಂದು ಸ್ಮರಿಸಿದರು.

2012ರಲ್ಲಿ ಬಲರಾಮ ಬದಲಿಗೆ ಅರ್ಜುನನನ್ನು ಅಂಬಾರಿ ಆನೆಯಾಗಿ ಆಯ್ಕೆ ಮಾಡಿದ್ದು ಒಂದು ರೋಚಕ ಕಥೆಯಾಗಿದೆ. ಮುಂಗೋಪಿಯಾಗಿದ್ದ ಅರ್ಜುನನ ಮೈಕಟ್ಟು, ಹಣೆ, ರಾಜ ನಡಿಗೆಗೆ ಮಾರು ಹೋಗಿ ಆತನನ್ನು ಅಂಬಾರಿ ಆನೆಯಾಗಿ ಆಯ್ಕೆ ಮಾಡಲಾಯಿತು ಎಂದರು.

ಈ ವೇಳೆ ಡಾ.ನಾಗರಾಜ್, ಅರ್ಜುನನ ಮಾವುತನಾಗಿದ್ದ ದೊಡ್ಡ ಮಾಸ್ತಿ ಮಗ ಮಹೇಶ್ ಅವರನ್ನು ಸನ್ಮಾನಿಸಲಾಯಿತು. ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಎ.ಪಿ.ನಾಗೇಶ್, ಸಂಚಾಲಕ ಐತಿಚಂಡ ರಮೇಶ್ ಉತ್ತಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಾಳೆ ಸ್ತುತಿ ಹೆಗಡೆ ರಂಗಪ್ರವೇಶ


ಮೈಸೂರು, ಡಿ.4– ಕುಮಾರಿ ಸ್ತುತಿ ಹೆಗಡೆ ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮವನ್ನು ಕುವೆಂಪುನಗರದ ಗಾನ'ಭಾರತೀ ರಮಾಗೋವಿಂದ ಕಲಾವೇದಿಕೆಯಲ್ಲಿ ಡಿ.6ರಂದು ಸಂಜೆ 6ಕ್ಕೆ ಏರ್ಪಡಿಸಲಾಗಿದೆ. ನಿವೃತ್ತ ಸೇನಾನಿ ಮಹಾಬಲೇಶ್ವರ ಹೆಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಅಪೋಲೊ ಆಸ್ಪತ್ರೆಯ ಪ್ಲಾಸ್ಟಿಕ್ ಸರ್ಜನ್ ಡಾ. ನಾರಾಯಣ ಹೆಗಡೆ, ಅನನ್ಯ ಕಲಾನಿಕೇತನದ ಸಂಸ್ಥಾಪಕ ನಿರ್ದೇಶಕಿ ಶ್ರೀಮತಿ ಬೃಂದಾ ಅಯ್ಯಂಗಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.



ಕಾರ್ಯಕ್ರಮದಲ್ಲಿ ಸ್ತುತಿ ಹೆಗಡೆ, ತನ್ನ ಗುರು ವಿದುಷಿ ಡಾ.ಕೃಪಾ ಫಡ್ಕೆ ಅವರಿಗೆ ಗುರುವಂದನೆ ಸಮರ್ಪಿಸಲಿದ್ದಾರೆ. ಪೂಜಾ ಸುಗವ್(ನಟುವಾಂಗ), ವಿದ್ವಾನ್ ದೀಪು ಕರುಣಾಕರನ್(ಗಾಯನ), ವಿದ್ವಾನ್ ಶಿವಪ್ರಸಾದ್(ಮೃದಂಗ) ಹಾಗೂ ವಿದ್ವಾನ್ ಎ.ಪಿ.ಕೃಷ್ಣಪ್ರಸಾದ್ (ಕೊಳಲು) ಸಂಗೀತ ಸಹಕಾರ ನೀಡಲಿದ್ದಾರೆ.

ಮೂಲತಃ ಉತ್ತರಕನ್ನಡ ಜಿಲ್ಲೆ, ಶಿರಸಿಯ ನಾಗೇಂದ್ರ ಹೆಗಡೆ ಹಾಗೂ ರೂಪಾ ಹೆಗಡೆ ದಂಪತಿ ಪುತ್ರಿಯಾದ ಪ್ರತಿಭಾನ್ವಿತ ಕಲಾವಿದೆ ಸ್ತುತಿ ಹೆಗಡೆ, ಮೈಸೂರಿನ ಪ್ರಮತಿ ಹಿಲ್‌ವ್ಯೂ ಅಕಾಡೆಮಿ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

05.12.2024 ಗುರುವಾರ, ಮಳೆ ನಕ್ಷತ್ರ: ಜ್ಯೇಷ್ಠ, 02.12.2024 ರಿಂದ 15.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಉಷಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೆನ್ನು ನೋವಿನ ಕಾರಣಗಳು, ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ತಜ್ಞ ವೈದ್ಯರಿಂದ ಸಲಹೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಂಸ್ಮರಣಾ 21ನೇ ಸಂಗೀತ ಸಮ್ಮೇಳನ–2024, ಬೆಳಗ್ಗೆ 10ಕ್ಕೆ ವಿದ್ವತ್ ಗೋಷ್ಠಿ, ಪ್ರಾತ್ಯಕ್ಷಿಕೆ : ಕರ್ನಾಟಕ ಸಂಗೀತದಲ್ಲಿ ಗ್ರಹಭೇದ ಒಂದು ಒಳನೋಟ– ವಿದ್ವಾನ್ ರಾವ್ ಆರ್. ಶರತ್ ಅವರಿಂದ, ಪ್ರಾತ್ಯಕ್ಷಿಕೆ : ಇಂಟ್ರಿಕೇಸಿಯಸ್ ಅಂಡ್ ಸ್ಪೆಷಾಲಿಟೀಸ್ ಆಫ್ ಮೃದಂಗ ಪ್ಲೇಯಿಂಗ್ ಕುರಿತು ವಿದ್ವಾನ್ ಬಿ.ಸಿ. ಮಂಜುನಾಥ್ ಅವರಿಂದ, ಸಂಜೆ 5.30 ರಿಂದ ವಿದ್ವಾನ್ ಪ್ರಣವ್ ಅವರಿಂದ ಕೊಳಲು ವಾದನ, ವಿದ್ವಾನ್ ರತ್ನತೇಜ–ವಯೋಲಿನ್, ವಿದ್ವಾನ್ ಪ್ರಣವ್ ಸುಬ್ರಹ್ಮಣ್ಯ–ಮೃದಂಗ, ಸಂಜೆ 6.30 ರಿಂದ ವಿದ್ವಾನ್ ಎನ್. ರವಿಕಿರಣ್ ಅವರಿಂದ ಚಿತ್ರವೀಣಾ, ವಿದುಷಿ ಗಾಯತ್ರಿ ಶಿವಾನಿ–ವಯೋಲಿನ್, ವಿದ್ವಾನ್ ಎಚ್.ಎಸ್. ಸುಧೀಂದ್ರ–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ.

■ **ಕರ್ನಾಟಕ ರೋಲರ್ ಸ್ಕೇಟಿಂಗ್ ಸಂಸ್ಥೆ :** ರಾಷ್ಟ್ರ ಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್ ಪಂದ್ಯಾವಳಿ, ಸ್ಥಳ: ಉನ್ನತಿನಗರ ಬಡಾವಣೆ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಅಧ್ಯಯನ ಮತ್ತು ಪರಿಸರ ವಿಜ್ಞಾನ ಸಂಶೋಧನಾ ವಿಭಾಗ :** ಎನ್‌ವಿರಾನ್‌ಮೆಂಟಲ್ ಆಡಿಟಿಂಗ್ : ಬಿಲ್ಡಿಂಗ್ ಫಾರ್ ಎ ಗ್ರೀನರ್ ಫ್ಯೂಚರ್ ಕುರಿತು ಕಾರ್ಯಾಗಾರ, ಗೌರವ ಅತಿಥಿಗಳು : ಪಿಸಿಸಿಎಫ್ ಬಿ.ಪಿ. ರವಿ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಉಪಸ್ಥಿತರು : ಕರಾಮುವಿವಿ ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ, ಡೀನ್ ಪ್ರೊ. ಎನ್. ಲಕ್ಷ್ಮೀ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10.30ಕ್ಕೆ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ವೈದ್ಯಕೀಯ ಪ್ರಮಾಣ ಮತ್ತು ಒತ್ತಡವನ್ನು ನಿವಾರಿಸುವುದು ಹೇಗೆ ಕಾರ್ಯಕ್ರಮ, ಉಪಸ್ಥಿತರು : ಸಂಪನ್ಮೂಲ ವ್ಯಕ್ತಿ ಡಾ. ನಾರಾಯಣ ಹೆಗ್ಡೆ, ಡಾ. ಎನ್. ವೆಂಕಟ್ ರಾವ್, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ. ಹನುಮಂತಚಾರ್ ಜೋಶಿ, ಸ್ಥಳ: ಪ್ರೊ. ಎಸ್. ಚಿನ್ನಸ್ವಾಮಿ ಶೆಟ್ಟಿ ಸಮ್ಮೇಳನ ಸಭಾಂಗಣ, ಮಧ್ಯಾಹ್ನ 3ಕ್ಕೆ.

■ **ಅಧಿವಕ್ತ ಪರಿಷತ್, ಕರ್ನಾಟಕ ದಕ್ಷಿಣ, ಮೈಸೂರು ಘಟಕ, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ :** 75ನೇ ವರ್ಷದ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮ, ವಿಶೇಷ ಉಪನ್ಯಾಸ : ಹಿರಿಯ ನ್ಯಾಯವಾದಿ ಕೆ.ಆರ್. ಶಿವಶಂಕರ್ ಅವರಿಂದ, ಉಪಸ್ಥಿತರು :ಅಧಿವಕ್ತ ಪರಿಷತ್ ಅಧ್ಯಕ್ಷೆ ಶ್ರೀಮತಿ ವಿ. ಶಾರದಾ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ. ರವಿಕುಮಾರ್, ಸ್ಥಳ : ನೇಗಿಲಯೋಗಿ ಸಭಾ ಭವನ, ಜಯನಗರ, ಮಧ್ಯಾಹ್ನ 3.30ಕ್ಕೆ.

■ **ನೃತ್ಯ ವಿದ್ಯಾಪೀಠ, ಮೈಸೂರು, ಅಕಾಡೆಮಿ ಆಫ್ ಕ್ಲಾಸಿಕಲ್ ಡ್ಯಾನ್ಸ್ ಅಂಡ್ ಇಂಡಿಯನ್ ಆರ್ಟ್ಸ್ :** ನರ್ತನ ದೀಪ್ತಿ–2024, ನೃತ್ಯ ವಿದ್ಯಾಪೀಠದ ಸಬ್ ಜೂನಿಯರ್ ಹಾಗೂ ಸೀನಿಯರ್ ಹಂತದ ನೃತ್ಯ ವಿದ್ಯಾರ್ಥಿನಿಯರಿಂದ ಭರತನಾಟ್ಯ ಕಾರ್ಯಕ್ರಮ, ಧರ್ಮಬೋಧನೆ, ಉಪನ್ಯಾಸಕ ಕೃ.ಪಾ. ಮಂಜುನಾಥ್ ಅವರಿಂದ ದಿನನಿತ್ಯದಲ್ಲಿ ಭಾರತೀಯ ಸಂಸ್ಕೃತಿ ಮತ್ತು ಸಂಸ್ಕಾರ ಕುರಿತು ಪ್ರವಚನ, ಮುಖ್ಯ ಅತಿಥಿಗಳು : ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ನಿರ್ದೇಶಕರಾದ ವಿದುಷಿ ನಾಗಶ್ರೀ ಫಣೀಂದ್ರಕುಮಾರ್, ಉಪಸ್ಥಿತರು : ಸ್ವರ್ಣ ಶಿಕ್ಷಣ ಸಂಸ್ಥೆ ಪ್ರಿನ್ಸಿಪಾಲ್ ಶ್ರೀಮತಿ ಶೋಭಾ ಬಾಲಕೃಷ್ಣ, ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವೀಸಸ್ ವ್ಯವಸ್ಥಾಪಕರಾದ ಶ್ರೀಮತಿ ಜಿ.ಕೆ. ಕಮಲ, ನೃತ್ಯ ವಿದ್ಯಾಪೀಠ ಸಂಸ್ಥಾಪಕ ನಿರ್ದೇಶಕರಾದ ವಿದುಷಿ ಸಿ.ಎನ್. ಅನಿತಾ, ಸ್ಥಳ: ರಮಾಗೋವಿಂದ ಕಲಾ ವೇದಿಕೆ, ಗಾನಭಾರತಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5.45ಕ್ಕೆ.

■ **ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್, ದಿ ಫೌಂಡೇಷನ್ ಫಾರ್ ಇಂಡಿಯನ್ ಹಿಸ್ಟಾರಿಕಲ್ ಅಂಡ್ ಕಲ್ಚರಲ್ ರಿಸರ್ಚ್ ಹಾಗೂ ಎಸ್.ಎಲ್.ಭೈರಪ್ಪ ಸಾಹಿತ್ಯ ಪ್ರತಿಷ್ಠಾನ :** ಇತಿಹಾಸ ತಜ್ಞ ಡಾ.ವಿಕ್ರಂ ಸಂಪತ್ ರಚನೆಯ 'ಟಿಪ್ಪು ಸುಲ್ತಾನ್: ದಿ ಸಾಗಾ ಆಫ್ ಮೈಸೂರ್ಸ್ ಇಂಟೆರೆಗ್ನಮ್ (1761–1799)' ಪುಸ್ತಕ ಲೋಕಾರ್ಪಣೆ, ಪುಸ್ತಕ ಬಿಡುಗಡೆ: ಮೈಸೂರು ರಾಜವಂಶಸ್ಥೆ ಶ್ರೀಮತಿ ಪ್ರಮೋದಾದೇವಿ ಒಡೆಯರ್, ಲೇಖಕಿ ಮತ್ತು ರಂಗಕರ್ಮಿ ಪ್ರೀತಿ ನಾಗರಾಜ್ ಅವರು ಡಾ.ವಿಕ್ರಂ ಸಂಪತ್ ಅವರೊಂದಿಗೆ ಸಂವಾದ ನಡೆಸುವರು, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 6ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಸಂಚಲನ ಮೈಸೂರು ರಂಗ ಸಂಸ್ಥೆ:** ಮಹಿಳಾ ನಾಟಕೋತ್ಸವದ ಸಮಾರೋಪ ಸಮಾರಂಭ, ಉಪಸ್ಥಿತರು : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ನಾಟಕದ ಲೇಖಕ ಪ್ರಸನ್ನಕುಮಾರ್ ಕೆರಗೋಡು, ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಸಮಾಜ ಸೇವಕ ಸೈಯದ್ ಅಲ್ಲಾಹ್ ಬಕಾಶ್, ಡಾ.ಭುವನೇಶ್ವರಿ, ವಿದುಷಿ ಡಾ.ಶಾಂಭವಿಸ್ವಾಮಿ ಅವರಿಗೆ ರಂಗ ಗೌರವ, ರಂಗಬಂಡಿ ಮಳವಳ್ಳಿ ತಂಡದಿಂದ 'ಮಧುರ ಮಂಡೋದರಿ' ನಾಟಕ ಪ್ರದರ್ಶನ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ: ಜಯಶ್ರೀ ಹೆಗಡೆ, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಹೈದರಾಬಾದ್ ಸಹೋದರರು–ಯುಗಳ ಹಾಡುಗಾರಿಕೆ, 11.00ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಭಾಗವಹಿಸುವವರು–ಸಿದ್ಧರಾಜು, ವಲಯ ಅರಣ್ಯಾಧಿಕಾರಿ, ದಮ್ಮನಕಟ್ಟೆ ವಲಯ, ನಾಗರಹೊಳೆ ಹುಲಿ ಸಂರಕ್ಷಿತಾ ಪ್ರದೇಶ, ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ, 1.20 ಭಾವಗೀತೆಗಳು, 2.40 ಉರ್ದು ಕಾರ್ಯಕ್ರಮ, 4.00 ಜನಪದ ಸಂಗೀತ, 4.30 ಸಂಧ್ಯಾರಾಗ–ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕು ಕೊಡಗನಪುರದ ರಂಗ ಕಲಾವಿದ ಕೆ.ಎಸ್. ಮಹಾದೇವಪ್ಪ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಡಾ. ಮೈಸೂರು ಉಮೇಶ್, ಪ್ರಸ್ತುತಿ : ಜಿ. ಶಾಂತಕುಮಾರ್, 6.10 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ: ಜಯಶ್ರೀ ಹೆಗಡೆ, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ರೈತ ಉತ್ಪಾದಕ ಸಂಸ್ಥೆಗಳ ಮೂಲಕ ಉತ್ಪನ್ನಗಳ ಖರೀದಿ ಕುರಿತು ಸಂವಾದ. ಭಾಗವಹಿಸುತ್ತಾರೆ : ಮಂಡ್ಯದ ವಿಲ್‌ಕಾರ್ಟ್ ಸಂಸ್ಥೆಯ ನಿರ್ದೇಶಕರಾದ ಡಾ.ಕೆ.ಪಿ. ಹೇಮಂತ್ ಮತ್ತು ಮಾರುಕಟ್ಟೆ ಅಧಿಕಾರಿ ಎಂ.ವಿ. ಅನ್ವಿತ್, ಪ್ರಸ್ತುತಿ : ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ–ಯುವ ಪ್ರತಿಭೆ–ಘಟಂ ಕಲಾವಿದ ಮೈಸೂರಿನ ಶಮಿತ್. ಎಸ್. ಗೌಡ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 9.30 ಕನ್ನಡ ಭಾರತಿ, 10.00 ಪ್ರಾದೇಶಿಕ ಲಘು ಹಾಗೂ ಜನಪದ ಸಂಗೀತ ರಾಷ್ಟ್ರೀಯ ಕಾರ್ಯಕ್ರಮ, ಪಂಡಿತ್. ಅನಿಮೇಶ್ ದೇಬ್ –ಜನಪದ ಸಂಗೀತ, ನಾರಾಯಣ್ ಕಲಿತ–ಲೋಕ್ ಗೀತ್ ಕಾಮರೂಪಿ

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಡಿಸೆಂಬರ್ 5 ಗುರುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 228 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಅಧಿಕಾರ ಹಂಚಿಕೆ ಒಪ್ಪಂದ ಆಗಿದೆ; ಡಿಸಿಎಂ–ಆಗಿಲ್ಲ; ಸಿಎಂ

ಬೆಂಗಳೂರು, ಡಿ.4(ಕೆಎಂಶಿ)– ಅಧಿಕಾರ ಹಂಚಿಕೆ ವಿಷಯದಲ್ಲಿ ಯಾವುದೇ ಒಪ್ಪಂದ ಆಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಾಸಗಿ ಚಾನೆಲ್ ಒಂದಕ್ಕೆ ನೀಡಿದ ಸಂದರ್ಶನದಲ್ಲಿ ಅಧಿಕಾರ ಹಂಚಿಕೆ ಸೂತ್ರ ಇದೆ ಎಂದು ಬಹಿರಂಗಪಡಿಸಿದ್ದರು. ಮುಡಾಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ವಿರುದ್ಧ ರಾಜ್ಯ ಹೈಕೋರ್ಟ್‌ನಲ್ಲಿ ಪ್ರತ್ಯೇಕವಾಗಿ ಎರಡು ಪ್ರಕರಣಗಳು ವಿಚಾರಣೆಗೆ ಬರುತ್ತಿರುವ ಸಮಯದಲ್ಲೇ ಶಿವಕುಮಾರ್, ದೆಹಲಿಯಲ್ಲಿ ಈ ಬಾಂಬ್ ಸಿಡಿಸಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯುವ ಸಂದರ್ಭದಲ್ಲಿ ಗಾದಿಗೆ ಏರಲು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ನಡುವೆ ಪೈಪೋಟಿ ನಡೆದಿತ್ತು. ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿದ್ದ ಎಐಸಿಸಿ, ಅಧಿಕಾರ ಸೂತ್ರ ರೂಪಿಸಿತ್ತು ಎಂಬುದು ಜನಜನಿತವಾಗಿತ್ತು ಆದರೆ, ಈ ಬಗ್ಗೆ ಸಿದ್ದರಾಮಯ್ಯ ಅವರಾಗಲೀ, ಶಿವಕುಮಾರ್ ಅವರಾಗಲೀ ಬಹಿರಂಗವಾಗಿ ಪ್ರತಿಕ್ರಿಯಿಸಿರಲಿಲ್ಲ. ಆದರೆ, ಏಕಾಏಕಿ ಶಿವಕುಮಾರ್ ನೀಡಿರುವ ಹೇಳಿಕೆ ಮುಖ್ಯಮಂತ್ರಿ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಇಂದು ಸುದ್ದಿಗಾರರೊಂದಿಗೆ ಸಿಎಂ ಸಿದ್ದರಾಮಯ್ಯ ಮಾತನಾಡಿ, ಶಿವ ಕುಮಾರ್ ಹೇಳಿಕೆಯನ್ನು ಸಾರಾಸಗಟಾಗಿ ತಳ್ಳಿಹಾಕಿರುವುದಲ್ಲದೆ, ಯಾವುದೇ ಅಧಿಕಾರ ಹಂಚಿಕೆ ಸೂತ್ರ ಆಗಿಲ್ಲ. ಆದರೆ, ಕಾಂಗ್ರೆಸ್ ವರಿಷ್ಠರು ಯಾವುದೇ ನಿರ್ಧಾರ ಕೈಗೊಂಡರೂ ನಾನು ಅದಕ್ಕೆ ತಲೆಬಾಗುತ್ತೇನೆ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಪಕ್ಷದ ವರಿಷ್ಠರು ಇದುವರೆಗೂ ಅಧಿಕಾರ ಹಂಚಿಕೆ ಕುರಿತಂತೆ ಏನನ್ನೂ ಹೇಳಿಲ್ಲ. ಶಿವಕುಮಾರ್ ಯಾವ ರೀತಿಯಲ್ಲಿ ಅರ್ಥೈಸಿ ಮಾತನಾಡಿದ್ದಾರೋ ತಿಳಿಯದು ಎಂದಿದ್ದಾರೆ.


ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಮುಖ್ಯಮಂತ್ರಿ ಸ್ಥಾನದ ಬಗ್ಗೆ ಒಡಂಬಡಿಕೆ ಆಗಿದೆ: ಹಾಸನದಲ್ಲಿ ಅದ್ಧೂರಿಯಾಗಿ ಆಯೋಜಿಸಲು ನಿರ್ಧರಿಸಲಾಗಿರುವ ಜನಕಲ್ಯಾಣ ಸಮಾವೇಶ ಸಮಯದಲ್ಲೇ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಷ್ಟ್ರೀಯ ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ಮುಖ್ಯಮಂತ್ರಿ ಸ್ಥಾನ ಹಂಚಿಕೆ ಸಂಬಂಧ ಒಡಂಬಡಿಕೆ ಆಗಿದೆ ಎಂದು ಹೇಳುವ ಮೂಲಕ ಸಿಎಂ ಬದಲಾವಣೆ ವಿಷಯ ಮತ್ತೆ ಮುನ್ನಲೆಗೆ ತಂದಿದ್ದಾರೆ. ನನ್ನ ಬಲ ಮತ್ತು ವೀಕ್ನೆಸ್ ಏನು ಎನ್ನುವುದನ್ನು ನಾನು ಬಲ್ಲೆ ಎಂದು ಅವರು ಹೇಳಿದ್ದಾರೆ. ಮುಖ್ಯಮಂತ್ರಿ ಸ್ಥಾನಕ್ಕೆ ಸಂಬಂಧಿಸಿದಂತೆ ಒಡಂಬಡಿಕೆಯಾಗಿದೆ, ಅದು ಏನು ಎನ್ನುವುದನ್ನು ಸದ್ಯದ ಮಟ್ಟಿಗೆ ಬಹಿರಂಗಪಡಿಸಲು ಸಾಧ್ಯವಿಲ್ಲ. ಸಮಯ, ಸಂದರ್ಭ ಬಂದಾಗ ವಿವರಿಸುತ್ತೇನೆ. ಆ ಅವಕಾಶ ನನಗೆ ಸಿಗಬಹುದು ಎಂದು ನಾನು ನಂಬಿದ್ದೇನೆ. ಕೆಲವರು ಉಪ ಮುಖ್ಯಮಂತ್ರಿ ಹುದ್ದೆಯನ್ನು ಬಯಸುವುದು ತಪ್ಪಲ್ಲ. ಹೆಚ್ಚುವರಿ ಸ್ಥಾನವಿರುವುದೂ ತಪ್ಪಲ್ಲ. ಆದರೆ ಡಿಸಿಎಂ ಕುರ್ಚಿ ಈಗ ಖಾಲಿಯಿಲ್ಲ. ಕೆಲವೊಮ್ಮೆ ಅದಕ್ಕಾಗಿ ತಾಳ್ಮೆಯಿಂದ ಕಾಯಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ. ಪಕ್ಷ ಇದುವರೆಗೆ ನನಗೆ ನೀಡಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದೇನೆ ಎನ್ನುವುದು ನನ್ನ ಬಲ. ನಾನು ಯಾವತ್ತೂ ಯಾವ ವಿಚಾರಕ್ಕೂ ಹೈಕಮಾಂಡಿಗೆ ಬ್ಲ್ಯಾಕ್‌ಮೇಲ್ ಮಾಡಿಲ್ಲ, ಇದು ನನ್ನ ವೀಕ್ನೆಸ್. ನನ್ನ ಸಹೋದರನ ಸೋಲನ್ನು ಇನ್ನೂ ನನಗೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಎಲ್ಲರೂ ಒಟ್ಟಾಗಿ ನನ್ನ ತಮ್ಮನನ್ನು ಸೋಲಿಸಿದರು. ಆದರೂ ಈ ಸೋಲಿನ ಬಗ್ಗೆ ನನಗೆ ಸಂಶಯವಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಸೋಲು, ಗೆಲುವನ್ನು ಸಮಾನವಾಗಿ ತೆಗೆದುಕೊಳ್ಳಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಗಾಂಧಿ ಕುಟುಂಬಕ್ಕೆ ನನ್ನ ನಿಯತ್ತು : ನಾನು ಯಾವತ್ತೂ ಪಕ್ಷ ವಿರೋಧಿ ಕೆಲಸವನ್ನು ಮಾಡಿಲ್ಲ. ಗಾಂಧಿ ಕುಟುಂಬದ ಮೇಲೆ ನನಗೆ ವಿಶೇಷ ಪ್ರೀತಿಯಿದೆ. ಪಕ್ಷದ ಶಿಸ್ತಿನ ಚೌಕಟ್ಟನ್ನು ನಾನು ಮೀರುವುದಿಲ್ಲ, ಬೇರೆಯವರು ಮೀರಿದರೂ ನನಗೆ ಅರಗಿಸಿಕೊಳ್ಳಲು ಕಷ್ಟವಾಗುತ್ತದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ನಾನು ಗಾಂಧಿ ಕುಟುಂಬದ ಮೇಲೆ ನಿಯತ್ತನ್ನು ಇಟ್ಟಿದ್ದೇನೆ. ಆ ನಿಯತ್ತಿಗೆ ಇಂದಲ್ಲಾ ನಾಳೆ ಪಕ್ಷದಲ್ಲಿ ಬೆಲೆ ಸಿಗುತ್ತದೆ ಎಂದು ನಂಬಿದ್ದೇನೆ. ಅದಕ್ಕಾಗಿ ಕಾಯುತ್ತಿದ್ದೇನೆ. ಇವಿಎಂ ವಿಚಾರಕ್ಕೆ ಸಂಬಂಧಿಸಿದಂತೆ ಸದ್ಯ ಏನೂ ಮಾತನಾಡುವುದಿಲ್ಲ. ಕೇಂದ್ರ ಮಟ್ಟದಲ್ಲಿ ನಮ್ಮ ನಾಯಕರು ಈ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಬಿಜೆಪಿ ಸರ್ಕಾರವೇ ವಕ್ಫ್ ನೋಟೀಸ್ ನೀಡಿತ್ತು: ಯಾವತ್ತೂ ಮಾಧ್ಯಮಗಳ ಮುಂದೆ ಚರ್ಚೆಸಬಾರದು ಎಂದು ಕಾಂಗ್ರೆಸ್ ಪಕ್ಷದ ನಾಯಕರಲ್ಲಿ ಹಲವು ಬಾರಿ ಮನವಿ ಮಾಡಿದ್ದೇನೆ. ಮಾಧ್ಯಮಗಳು ಯಾವುದಕ್ಕೂ ಪರಿಹಾರವಲ್ಲ. ವಕ್ಫ್ ವಿಚಾರಕ್ಕೆ ಸಂಬಂಧಿಸಿದಂತೆ ಮೊದಲು ನೋಟೀಸ್ ಜಾರಿ ಮಾಡಿದ್ದೇ ಬಿಜೆಪಿ ಸರ್ಕಾರ ಎಂದು ಡಿ.ಕೆ.ಶಿವಕುಮಾರ್ ಸಂದರ್ಶನದಲ್ಲಿ ಹೇಳಿದ್ದಾರೆ.


ಕಾಂಗ್ರೆಸ್ ಜನಕಲ್ಯಾಣ ಸ್ವಾಭಿಮಾನಿ ಸಮಾವೇಶಕ್ಕೆ ಸಜ್ಜಾಗಿರುವ ಬೃಹತ್ ಪೆಂಡಾಲ್

ಗೌಡರ ನೆಲದಲ್ಲಿ ಸಿದ್ದರಾಮಯ್ಯ ಸದ್ದು

- ಹಾಸನದಲ್ಲಿ ಇಂದು ಬೃಹತ್ ಕಾಂಗ್ರೆಸ್ ಜನಕಲ್ಯಾಣ ಸ್ವಾಭಿಮಾನಿ ಸಮಾವೇಶ
- ಲಕ್ಷಾಂತರ ಜನರ ಸೇರಿಸಲು ಸಾವಿರಾರು ವಾಹನಗಳ ವ್ಯವಸ್ಥೆ
- ಫ್ಲೆಕ್ಸ್, ಕಟೌಟ್, ಬ್ಯಾನರ್‌ನಲ್ಲಿ ಮುಳುಗಿರುವ ಹಾಸನ ನಗರಿ

ಹಾಸನ, ಡಿ. 4– ರಾಜಕೀಯ ಎದುರಾಳಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಿಗೆ ಅವರದೇ ನೆಲದಲ್ಲಿ ಸೆಡ್ಡು ಹೊಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಜ್ಜಾಗಿದ್ದಾರೆ. ಈ ಮೂಲಕ ಅವರ ಶಕ್ತಿ ಪ್ರದರ್ಶನಕ್ಕಾಗಿ ಅಭಿಮಾನಿಗಳು ಆಯೋಜಿಸಿದ್ದ 'ಸ್ವಾಭಿಮಾನಿ' ಸಮಾವೇಶ ಇದೀಗ 'ಜನಕಲ್ಯಾಣ' ಸಮಾವೇಶ ಹೆಸರಿನಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದಲೇ ನಾಳೆ (ಡಿ.5) ನಡೆಯಲಿದ್ದು, ಹಾಸನ ನಗರ ರಾಜಕೀಯ ಜಿದ್ದಾಜಿದ್ದಿಗೆ ಕಣವಾಗಿ ಮಾರ್ಪಟ್ಟಿದೆ.

ರಾಜ್ಯದಲ್ಲಿ ಇತ್ತೀಚೆಗೆ ನಡೆದ ಮೂರೂ ಕ್ಷೇತ್ರಗಳ ಉಪ ಚುನಾವಣೆ ವೇಳೆ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವುದಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಚನ್ನಪಟ್ಟಣದಲ್ಲಿ ಆರ್ಭಟಿಸಿದ್ದ ಹಿನ್ನೆಲೆಯಲ್ಲಿ ಚುನಾವಣೆ ಗೆಲುವಿನ ನಂತರ ಜೆಡಿಎಸ್‌ನ ಭದ್ರಕೋಟೆ ಎಂದೇ ಕರೆಯಲ್ಪಡುವ ದೇವೇಗೌಡರ ತವರಿನಲ್ಲೇ ಶಕ್ತಿ ಪ್ರದರ್ಶನ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ತೀರ್ಮಾನಿಸಿದ್ದರು. ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಬಂದು ಶಾಸಕರಾಗಿರುವ ಶಿವಲಿಂಗೇಗೌಡರು ಈ ಸಮಾವೇಶ ಯಶಸ್ಸಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಮೊದಲಿಗೆ ಪಕ್ಷಾತೀತವಾಗಿ ಸ್ವಾಭಿಮಾನಿ ಒಕ್ಕೂಟಗಳ ಆಶ್ರಯದಲ್ಲಿ ಬೃಹತ್ ಸಮಾವೇಶ ನಡೆಸಿ, ಸಿದ್ದರಾಮಯ್ಯ ಹಾಸನದಲ್ಲಿ ಶಕ್ತಿ ಪ್ರದರ್ಶಿಸಲು ವೇದಿಕೆ ಸಿದ್ಧವಾಗಿತ್ತು. ಅದಕ್ಕಾಗಿ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್.ರಾಜಣ್ಣ ಸೇರಿದಂತೆ ಸಿದ್ದರಾಮಯ್ಯನವರ ಆಪ್ತ ಸಚಿವರೆಲ್ಲರೂ ಕೈ ಜೋಡಿಸಿದ್ದರು. ಆದರೆ, ಈ ಸಮಾವೇಶ ವ್ಯಕ್ತಿಪೂಜೆ ಆಗುತ್ತದೆ ಎಂಬ ಕಾರಣಕ್ಕಾಗಿ ಕಾಂಗ್ರೆಸ್ ಹೈಕಮಾಂಡ್ ಮಧ್ಯಪ್ರವೇಶಿಸಿ ನಂತರ 'ಸ್ವಾಭಿಮಾನಿ' ಸಮಾವೇಶವನ್ನು ಕಾಂಗ್ರೆಸ್ ನೇತೃತ್ವದಲ್ಲೇ ಸ್ವಾಭಿಮಾನಿ ಒಕ್ಕೂಟಗಳ ಸಂಯುಕ್ತಾಶ್ರಯದಲ್ಲಿ ನಡೆಸಲಾಗುತ್ತಿದೆ. ಈ ಹಿಂದೆ ಸಿದ್ದರಾಮಯ್ಯ ಜೆಡಿಎಸ್‌ನಲ್ಲಿದ್ದಾಗಲೇ ದೇವೇಗೌಡರಿಗೆ ಸೆಡ್ಡು ಹೊಡೆಯಲು ಹಾಸನದಲ್ಲಿ ಅಹಿಂದ ಸಮಾವೇಶವನ್ನು ನಡೆಸಿದ್ದರು. ಅದೇ ರೀತಿ ಈಗ ದೇವೇಗೌಡರ ತವರಿನಲ್ಲೇ ಶಕ್ತಿ ಪ್ರದರ್ಶನ ಮಾಡುವ ಮೂಲಕ ದೇವೇಗೌಡರಿಗೆ ಸೆಡ್ಡು ಹೊಡೆಯಲು ನಿರ್ಧರಿಸಿದ್ದಾರೆ. ಈ ಸಮಾವೇಶ ಕುರಿತು ಮಾಜಿ ಸಚಿವ, ಜೆಡಿಎಸ್‌ನ ಹೆಚ್.ಡಿ.ರೇವಣ್ಣ ■6ನೇ ಪುಟಕ್ಕೆ

ಕಾಂಗ್ರೆಸ್ ಪಕ್ಷ ಸಮಾವೇಶ ಮಾಡಿಕೊಳ್ಳಲಿ. ಕಳೆದ 50 ವರ್ಷಗಳಲ್ಲಿ ಕಾಂಗ್ರೆಸ್ ಹಾಸನ ಜಿಲ್ಲೆಯನ್ನಂತೂ ಉದ್ಧಾರ ಮಾಡಲಿಲ್ಲ, ಇನ್ನಾದರೂ ಮಾಡಲಿ. ಹೆಚ್.ಡಿ.ದೇವೇಗೌಡರ ಕುಟುಂಬವನ್ನು ಮುಗಿಸುವುದು ಸಾಧ್ಯವಿಲ್ಲ. ಲೋಕಸಭಾ ಚುನಾವಣೆಯಲ್ಲಿ ಏನು ನಡೆಯಿತು ಅಂತ ಎಲ್ಲರಿಗೂ ಗೊತ್ತಿದೆ. 6 ಬಾರಿ ಶಾಸಕನಾಗಿ ಆಯ್ಕೆಯಾಗಿರುವ ತಾನು ಇಂಥ ಹಲವಾರು ಸಮಾವೇಶಗಳನ್ನು ನೋಡಿದ್ದೇನೆ. ಇದಕ್ಕೆ 2028ಕ್ಕೆ ದೇವೇಗೌಡರು, ಕುಮಾರಣ್ಣ ಹಾಗೂ ನಾನು ಸೇರಿ ಉತ್ತರ ಕೊಡುತ್ತೇವೆ.



–ಹೆಚ್.ಡಿ.ರೇವಣ್ಣ, ಹೊಳೆನರಸೀಪುರ ಶಾಸಕ

ದೇವೇಂದ್ರ ಫಡ್ನವೀಸ್‌ಗೆ ಮಹಾರಾಷ್ಟ್ರ ಮುಖ್ಯಮಂತ್ರಿ ಗಾದಿ; ಇಂದು ಪ್ರಮಾಣವಚನ


ಮಹಾಯುತಿ ಮೈತ್ರಿಕೂಟ ನಾಯಕರು ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರನ್ನು ಭೇಟಿ ಮಾಡಿ, ದೇವೇಂದ್ರ ಫಡ್ನವೀಸ್ ನೇತೃತ್ವದಲ್ಲಿ ಸರ್ಕಾರ ರಚಿಸಲು ಹಕ್ಕು ಮಂಡಿಸಿದರು.

ಮುಂಬೈ, ಡಿ.4– ಮಹಾರಾಷ್ಟ್ರ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ದೇವೇಂದ್ರ ಫಡ್ನವೀಸ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಫಡ್ನವೀಸ್ ನಾಳೆ (ಡಿ.5) ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಗುರುವಾರ ಮುಂಬೈನ ಆಜಾದ್ ಮೈದಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ. ಶಾಸಕಾಂಗ ಪಕ್ಷದ ಸಭೆಗೂ ಮುನ್ನ ಇಲ್ಲಿ ನಡೆದ ಬಿಜೆಪಿಯ ಕೋರ್ ಕಮಿಟಿ ಸಭೆಯಲ್ಲಿ ದೇವೇಂದ್ರ ಫಡ್ನವೀಸ್ ಅವರ ಹೆಸರನ್ನು ಉನ್ನತ ಹುದ್ದೆಗೆ ಅಂತಿಮಗೊಳಿಸಲಾಯಿತು. ಬಿಜೆಪಿಯ ಕೋರ್ ಕಮಿಟಿ ಸಭೆಯಲ್ಲಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಗುಜರಾತ್ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಮತ್ತು ದೇವೇಂದ್ರ ಫಡ್ನವೀಸ್ ■6ನೇ ಪುಟಕ್ಕೆ

ಕೇಜ್ರಿವಾಲರಂತೆ ಜೈಲಿಗೆ ಹೋದರೂ ಸಿದ್ದರಾಮಯ್ಯ ಸಿಎಂ ಗಾದಿ ಬಿಡಲ್ಲ!

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಲೇವಡಿ


ವಿಜಯೇಂದ್ರ

ಬೆಂಗಳೂರು, ಡಿ.4– ದೇಶಾದ್ಯಂತ ಭಾರಿ ಸಂಚಲನವನ್ನು ಹುಟ್ಟುಹಾಕಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಕ್ರಮ ನಿವೇಶನ ಹಂಚಿಕೆ ಇನ್ನೊಂದು ಆಯಾಮಕ್ಕೆ ತಿರುಗಿದೆ. ಲೋಕಾಯುಕ್ತರ ಇಲಾಖೆಗೆ ಜಾರಿ ನಿರ್ದೇಶನಾಲಯ 1,095 ಪುಟಗಳ ವರದಿಯನ್ನು ನೀಡಿದೆ.

ಮುಖ್ಯಮಂತ್ರಿಗಳ ಪತ್ನಿಯ ಹೆಸರಿನ ನಿವೇಶನದಲ್ಲೂ ಅಕ್ರಮ ನಡೆದಿದೆ ಎನ್ನುವುದು ಇಡಿ ವರದಿಯಲ್ಲಿದೆ. ಸ್ಪಷ್ಟವಾಗಿ ಮುಡಾ ಮಾರ್ಗಸೂಚಿಯ ಉಲ್ಲಂಘನೆಯಾಗಿದೆ. ಫೋರ್ಜರಿ ನಡೆದಿರುವುದಕ್ಕೂ ಸಾಕ್ಷಿಯಿದೆ ಎಂಬ ಅಂಶವೂ ಉಲ್ಲೇಖವಾಗಿದೆ. ಇಡಿ ವರದಿಯನ್ನು ಆಧರಿಸಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಟ್ವೀಟ್ (ಎಕ್ಸ್) ಮಾಡಿದ್ದಾರೆ. ಸಿದ್ದರಾಮಯ್ಯನವರು ದೆಹಲಿಯ ಹಿಂದಿನ ಮುಖ್ಯಮಂತ್ರಿ ಕೇಜ್ರಿವಾಲರಂತೆ ಜೈಲಿಗೆ ಹೋದರೂ ಮುಖ್ಯಮಂತ್ರಿ ಗಾದಿ ಬಿಡುವುದಿಲ್ಲ ಎಂಬ ಶಪಥ ಕೈಗೊಂಡಂತಿದೆ. ನಿಶಕ್ತ ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯನವರ ಮುಂದೆ ಮಂಡಿಯೂರಿ ಕುಳಿತಿರುವುದು ಕರ್ನಾಟಕದ ದೌರ್ಭಾಗ್ಯವಲ್ಲದೇ ಬೇರೇನೂ ಅಲ್ಲ ಎಂದು ವಿಜಯೇಂದ್ರ ಲೇವಡಿ ಮಾಡಿದ್ದಾರೆ.

ಮುಡಾ ಅಕ್ರಮದಲ್ಲಿ ಮುಖ್ಯಮಂತ್ರಿಗಳ ಕುಟುಂಬಕ್ಕೆ ದೊರೆತಿದ್ದ 14 ನಿವೇಶನಗಳು ಹಾಗೂ ಸಾವಿರಾರು ನಿವೇಶನಗಳ ಲೂಟಿಕೋರತನದ ಹಗರಣದ ಹಿನ್ನೆಲೆಯಲ್ಲಿ ಈ ಹಿಂದೆಯೂ ದಾಖಲೆಗಳ ಆಧಾರದ ಮೇಲೆ ಸಿದ್ದರಾಮಯ್ಯನವರ ಪಾತ್ರವನ್ನು ■6ನೇ ಪುಟಕ್ಕೆ

ಸೈಟು ಲಪಟಾಯಿಸಿ ಸ್ವಾಭಿಮಾನಿ ಸಮಾವೇಶ ಮಾಡಿದರೆ ಪಾಪ ಕಳೆದುಹೋಗುತ್ತದೆಯೇ?


ಅಶೋಕ್

ಬೆಂಗಳೂರು, ಡಿ.4–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು (ಮುಡಾ) 14 ಬದಲಿ ನಿವೇಶನಗಳನ್ನು ಹಂಚಿಕೆ ಮಾಡುವಲ್ಲಿ ಹಲವು ಅಕ್ರಮಗಳು ನಡೆದಿವೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ)ದ ಹೇಳಿಕೆ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ವಾಗ್ದಾಳಿ ನಡೆಸಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸೈಟ್ ಲಪಟಾಯಿಸಿ ಸ್ವಾಭಿಮಾನಿ ಸಮಾವೇಶ ಮಾಡಿದರೆ ಪಾಪ ಕಳೆದುಹೋಗುತ್ತದೆಯೇ ಎಂದು ಪ್ರಶ್ನಿಸಿದ್ದಾರೆ. ಸಿಎಂ ಸಿದ್ದರಾಮಯ್ಯನವರ ಪತ್ನಿಯವರಿಗೆ 14 ನಿವೇಶನ ಹಂಚಿಕೆ ಮಾಡುವಲ್ಲಿ ಹಲವು ಅಕ್ರಮಗಳು ನಡೆದಿವೆ ಎಂದು ಇ.ಡಿ. ವರದಿಯಲ್ಲಿ ಬಯಲಾಗಿದ್ದು, ಮುಡಾ ಪ್ರಕರಣದಲ್ಲಿ ನನ್ನ ಪಾತ್ರವೇ ಇಲ್ಲ ಎನ್ನುತ್ತಿದ್ದ ಮುಖ್ಯಮಂತ್ರಿಗಳು ಈಗ ಅನೇಕ ಪ್ರಶ್ನೆಗಳಿಗೆ ಉತ್ತರಿಸಬೇಕಿದೆ. ಸಿಎಂ ಸಿದ್ದರಾಮಯ್ಯನವರೇ, ನಮ್ಮ ದೇಶದಲ್ಲಿ ಕಾನೂನು ಇನ್ನೂ ಗಟ್ಟಿಯಾಗಿದೆ. ತರಾತುರಿಯಲ್ಲಿ ಲೋಕಾಯುಕ್ತ ತನಿಖೆ ಮುಗಿಸಿ ಕ್ಲೀನ್ ಚಿಟ್ ಪಡೆದುಕೊಂಡು ಜನರ ಕಣ್ಣಿಗೆ ಮಣ್ಣೆರಚುವ ನಿಮ್ಮ ತಂತ್ರ ಫಲಿಸುವುದಿಲ್ಲ. ಉಪ್ಪು ತಿಂದವರು ನೀರು ಕುಡಿಯಲೇಬೇಕು. ಸತ್ಯಮೇವ ಜಯತೇ ಎಂದು ಬರೆದುಕೊಂಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಗೊಂಡ ಮುಡಾ ನಿವೇಶನ ಹಂಚಿಕೆ ಹಗರಣಕ್ಕೆ ಮಹತ್ವದ ತಿರುವು

ಮುಡಾದಲ್ಲಿ 1095 ನಿವೇಶನ ಅಕ್ರಮ ಹಂಚಿಕೆ; 700 ಕೋಟಿ ಅವ್ಯವಹಾರ


ಇಡಿ ತನಿಖಾ ಮಾಹಿತಿಯಿಂದ ಇಕ್ಕಟ್ಟಿಗೆ ಸಿಲುಕಿದ ಲೋಕಾಯುಕ್ತ!

ಬೆಂಗಳೂರು, ಡಿ.4(ಕೆಎಂಶಿ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಡೆದಿರುವ ನಿವೇಶನಗಳ ಹಂಚಿಕೆ ವಿವಾದ ತನಿಖೆ ವಿಷಯದಲ್ಲಿ ಲೋಕಾಯುಕ್ತವೇ ಇಕ್ಕಟ್ಟಿಗೆ ಸಿಲುಕುವ ಪರಿಸ್ಥಿತಿ ಎದುರಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬ ಮುಡಾದಿಂದ 14 ನಿವೇಶನಗಳನ್ನು ಪಡೆದ ಸಂಬಂಧ ನ್ಯಾಯಾಲಯದ ಆದೇಶದಂತೆ ಲೋಕಾಯುಕ್ತ ಬಹುತೇಕ ತನಿಖೆ ಪೂರ್ಣಗೊಳಿಸಿ ದಾಖಲೆ ಸಮೇತ ಹೈಕೋರ್ಟ್‌ಗೆ ವರದಿ ಸಲ್ಲಿಸಲು ಸಿದ್ಧತೆ ನಡೆಸಿತ್ತು.

ನಿವೇಶನಗಳ ಹಂಚಿಕೆ ಪ್ರಕರಣವನ್ನು ಸಿಬಿಐಗೆ ವಹಿಸುವ ಸಂಬಂಧ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠದ ಮುಂದೆ ಡಿಸೆಂಬರ್ 10ರಂದು ಅರ್ಜಿ ವಿಚಾರಣೆಗೆ ಬರಲಿದೆ.

ಅಂದೇ ತನಿಖಾ ವರದಿಯನ್ನೂ ಸಲ್ಲಿಸುವಂತೆ ಲೋಕಾಯುಕ್ತಕ್ಕೆ ನ್ಯಾಯಮೂರ್ತಿಗಳು ಹಿಂದಿನ ವಿಚಾರಣೆ ವೇಳೆ ಆದೇಶ ಮಾಡಿದ್ದರು. ಲೋಕಾಯುಕ್ತ ಎಲ್ಲಾ ಕೋನಗಳಿಂದಲೂ ತನಿಖೆ ನಡೆಸಿ, ಬಿಡಿ ನಿವೇಶನಗಳ ಹಂಚಿಕೆಯಲ್ಲಿ ಅಧಿಕಾರಿಗಳಿಂದಾದ ಲೋಪ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರ ಸಹೋದರ ಮಲ್ಲಿಕಾರ್ಜುನ ಸ್ವಾಮಿ ಅವರು ದೇವರಾಜು ಅವರಿಂದ 3.16 ಎಕರೆ ಭೂಮಿ ಖರೀದಿ ಸಂಬಂಧ ಆಗಿರುವ ಕಾನೂನು ತೊಡಕುಗಳು ಸೇರಿದಂತೆ ವಿವರವಾದ ವರದಿ ಸಿದ್ಧಪಡಿಸಿತ್ತು. ರಾಜ್ಯಪಾಲರ ಪ್ರಾಸಿಕ್ಯೂಷನ್ ಅನುಮತಿ ಹಾಗೂ ಲೋಕಾಯುಕ್ತ ತನಿಖೆ ಆದೇಶ ಪ್ರಶ್ನಿಸಿ ಸಿದ್ದರಾಮಯ್ಯ ಅವರು, ವಿಭಾಗೀಯ ಪೀಠದ ಮುಂದೆ ಸಲ್ಲಿಸಿರುವ ಅರ್ಜಿ ನಾಳೆ ವಿಚಾರಣೆಗೆ ಬರುತ್ತಿದೆ.

ಇದರ ಬೆನ್ನಲ್ಲೇ ಇ.ಡಿ., ಲೋಕಾಯುಕ್ತಕ್ಕೆ ಪತ್ರ ಬರೆದು, ಮುಡಾ ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ತಾನು ನಡೆಸಿರುವ ತನಿಖಾ ಮಾಹಿತಿಯನ್ನು ನೀಡಿದೆ. ಇದರಲ್ಲಿ ಮುಖ್ಯಮಂತ್ರಿ ಅವರ ಪತ್ನಿ ಪಾರ್ವತಿ ಅವರಿಗೆ ಹಂಚಿಕೆಯಾಗಿರುವ ನಿವೇಶನ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದಲ್ಲದೆ, ಸಿದ್ದರಾಮಯ್ಯ ಅವರಿಂದ ಈ ಹಿಂದೆ ಅಧಿಕಾರ ದುರ್ಬಳಕೆಗೆ ಸಂಬಂಧಿಸಿದಂತೆಯೂ ಕೆಲವು ಮಾಹಿತಿ ನೀಡಿದೆ.



ಸಿದ್ದರಾಮಯ್ಯ ಅವರ ಮೈಸೂರು ಕಚೇರಿಯಲ್ಲಿ ಆಪ್ತ ಸಹಾಯಕರಾಗಿರುವ ದಿನೇಶ್‌ಕುಮಾರ್ ಅಲಿಯಾಸ್ ಕುಮಾರ್, ನಿವೇಶನಗಳ ಹಂಚಿಕೆಯಲ್ಲಿ ಪ್ರಭಾವ ಬೀರಿದ್ದಾರೆ. ಅಷ್ಟೇ ಅಲ್ಲದೆ, ಪಾರ್ವತಿ ಅವರ ಹೆಸರು ಫೋರ್ಜರಿ ಮಾಡಿ, ಇವರೇ ಮುಡಾ ಕಚೇರಿಯಲ್ಲಿ ಅರ್ಜಿ ಸಲ್ಲಿಕೆ ಮತ್ತು ದಾಖಲೆಗಳನ್ನು ಪಡೆದುಕೊಳ್ಳುವಲ್ಲಿ ವ್ಯವಹರಿಸಿದ್ದಾರೆ ಎಂದು ಆರೋಪಿಸಿದೆ. ಒಟ್ಟಾರೆಯಾಗಿ 1095 ನಿವೇಶನಗಳನ್ನು ■6ನೇ ಪುಟಕ್ಕೆ

ಲೋಕಾಯುಕ್ತಕ್ಕೆ ಇಡಿ ಪತ್ರದ ಹಿಂದೆ ರಾಜಕೀಯ ದುರುದ್ದೇಶವಿದೆ...

ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿನುಡಿ


ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಮಂಡ್ಯ, ಡಿ.4– ಹೈಕೋರ್ಟ್‌ನಲ್ಲಿ ನಮ್ಮ ಅರ್ಜಿ ವಿಚಾರಣೆಗೆ ಬರುವ ಹಿಂದಿನ ದಿನ ಇಡಿಯವರು ಲೋಕಾಯುಕ್ತಕ್ಕೆ ಪತ್ರ ಬರೆದಿದ್ದೇ ನ್ಯಾಯಾಲಯದ ಮೇಲೆ ಪ್ರಭಾವ ಬೀರುವ ಉದ್ದೇಶವಾಗಿದ್ದು, ಈ ಬಗ್ಗೆ ಇಡಿಯವರು ತನಿಖೆ ನಡೆಸುತ್ತಿರುವುದೇ ಸರಿಯಲ್ಲ. ತನಿಖೆ ನಡೆಸಿದ ಮೇಲೆ ತನಿಖಾ ವರದಿಯನ್ನು ಲೋಕಾಯುಕ್ತಕ್ಕೆ ನೀಡಬಹುದಿತ್ತು. ಅದನ್ನು ಬಿಟ್ಟು, ಲೋಕಾಯುಕ್ತಕ್ಕೆ ಪತ್ರ ಬರೆಯುವುದು ಮತ್ತು ಮಾಧ್ಯಮಗಳಿಗೆ ಸೋರಿಕೆ ಮಾಡುವುದರ ಹಿಂದೆ ರಾಜಕೀಯ ದುರುದ್ದೇಶ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ಕೆ.ಆರ್.ಪೇಟೆಯಲ್ಲಿ ಖಾಸಗಿ ಕಾರ್ಯಕ್ರಮದಲ್ಲಿ ಭಾಗಿಯಾಗುವುದಕ್ಕೂ ಮುನ್ನ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾಳೆ (ಗುರುವಾರ) ನಮ್ಮ ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬರುತ್ತಿದೆ. ಇದಕ್ಕೆ ಒಂದು ದಿನ ಮೊದಲು ಮಾಧ್ಯಮಗಳಲ್ಲಿ ಪ್ರಚಾರ ಮಾಡಿರುವುದರ ಹಿಂದೆ ನ್ಯಾಯಾಲಯದ ಮೇಲೆ ಪ್ರಭಾವ ಬೀರುವ ಮತ್ತು ನ್ಯಾಯಾಲಯವನ್ನು ಪೂರ್ವಾಗ್ರಹದ ನಿಲುವಿಗೆ ತರುವ ದುರುದ್ದೇಶದ ರಾಜಕೀಯ ನಡೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಡಿ.24ರೊಳಗೆ ತನಿಖೆಯ ವರದಿ ನೀಡುವಂತೆ ನ್ಯಾಯಾಲಯ ಲೋಕಾಯುಕ್ತಕ್ಕೆ ಸೂಚನೆ ನೀಡಿದೆ. ಬೇಕಿದ್ದರೆ ಇಡಿಯವರು ಲೋಕಾಯುಕ್ತಕ್ಕೆ ವರದಿ ನೀಡಲು ಅವಕಾಶವಿತ್ತು. ಅದನ್ನು ಬಿಟ್ಟು ಈ ರೀತಿ ■6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಕಳ್ಳರಿಬ್ಬರು ದರೋಡೆ ಮಾಡಿ ಬಂದು ಒಂದು ಕಡೆ ಕುಳಿತರು.

ಒಬ್ಬ ಕಳ್ಳ : ಎಷ್ಟು ಹಣ ನೋಡೋಣವೇನೋ?

ಇನ್ನೊಬ್ಬ ಕಳ್ಳ : ನಂಗೆ ನಿದ್ದೆ ಬರುತ್ತಿದೆ. ಮನೆಗೆ ಹೋಗೋಣಪ್ಪ, ಹೇಗಿದ್ದರೂ ನಾಳೆ ಪೇಪರ್‌ನಲ್ಲಿ ಬರುತ್ತಲ್ಲ!!

ಮೈಸೂರು ಮಿತ್ರ

ಗುರುವಾರ, 5 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಶಕ್ತಿಯೇ ಜೀವನ ದೌರ್ಬಲ್ಯವೇ ಮರಣ. –ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿನ್ನಲ್ಲಿರುವ ಮಾನ ನಿನಗೆ ಕೊಡುವುದು ಬಹುಮಾನ.

ನಿಮ್ಮ ಪತ್ರಗಳು

■ ಕನ್ನಡ ಉಳಿಸುವ ಸಂಕಲ್ಪಕ್ಕೆ ಕೈಜೋಡಿಸಿ

ಮಾನ್ಯರೆ,

ಬಹುತೇಕ ಖಾಸಗಿ ಶಾಲಾ–ಕಾಲೇಜುಗಳ ಮತ್ತು ಅಲ್ಲಿನ ವಾಹನಗಳ ನಾಮ ಫಲಕಗಳು ಆಂಗ್ಲಮಯವಾಗಿದ್ದು, ಕನ್ನಡವನ್ನು ಹುಡುಕುವಂತಾಗಿದೆ. ಮಕ್ಕಳಿಗೆ ವಿದ್ಯೆ ಕಲಿಸುವ ಸಂಸ್ಥೆಗಳೇ ಹೀಗೆ ಕನ್ನಡದ ಬಗ್ಗೆ ಅಸಡ್ಡೆ ತೋರುತ್ತಿರುವುದು ವಿಷಾದನೀಯ. ಇನ್ನೂ ವಿಚಿತ್ರವೆಂದರೆ, ಕೆಲವು ಕಡೆ, ಹೋಗಲಿ ಪಾಪ ಕನ್ನಡವೂ ಸ್ವಲ್ಪ ಬದುಕಿಕೊಳ್ಳಲಿ ಎಂಬಂತೆ ಆಂಗ್ಲಭಾಷೆಯನ್ನು ದೊಡ್ಡದಾಗಿ ಬರೆಸಿ ಕನ್ನಡವನ್ನು ಒಂದು ಮೂಲೆಯಲ್ಲಿ ಸಣ್ಣದಾಗಿ ಬರೆಸಿದ್ದಾರೆ.

ಯಾವುದೇ ಒಂದು ಖಾಸಗೀ ಶಾಲಾ –ಕಾಲೇಜು ಅಥವಾ ವ್ಯಾಪಾರ ವಹಿವಾಟು ನಡೆಸುವ ಅಂಗಡಿ ಮುಂಗಟ್ಟುಗಳಿಗೆ ಪರವಾನಗಿ ನೀಡುವಾಗಲೇ ಕನ್ನಡಕ್ಕೆ ಮೊದಲ ಆದ್ಯತೆ ಎಂದು ಕಟ್ಟುನಿಟ್ಟಾಗಿ ಸೂಚಿಸಿ, ನಿಯಮ ಉಲ್ಲಂಘಿಸಿದವರಿಗೆ ಯಾವ ಮುಲಾಜಿಲ್ಲದೆ ಹೆಚ್ಚಿನ ದಂಡ ವಿಧಿಸುವ ಅಥವಾ ಪರವಾನಗಿ ರದ್ದುಗೊಳಿಸುವ ಧೈರ್ಯವನ್ನು ಅಧಿಕಾರಿಗಳು ತೋರಿದ್ದರೆ ಕರ್ನಾಟಕದಲ್ಲಿ ಕನ್ನಡಕ್ಕೆ ಇಂತಹ ಸ್ಥಿತಿ ಬರುತ್ತಿರಲಿಲ್ಲ. ಇನ್ನಾದರು, ಇಂತಹ ಹಲವಾರು ರೀತಿಯ ಲೋಪ–ದೋಷವಿರುವ ನಾಮಫಲಕಗಳನ್ನು ಗುರುತಿಸಿ, ಅದರ ವ್ಯಾಪಾರಸ್ಥ–ಮಾಲೀಕರಿಗೆ ಆಯಾ ಭಾಗದ ಅಧಿಕಾರಿಗಳು ಕನ್ನಡದ ನಾಮಫಲಕವನ್ನು ಇಂತಿಷ್ಟು ದಿನದೊಳಗೆ ಅಳವಡಿಸುವಂತೆ ಕಟ್ಟುನಿಟ್ಟಾಗಿ ಸೂಚಿಸಿ, ಕನ್ನಡವನ್ನು ಬಳಸುವ, ಬೆಳೆಸುವ, ಉಳಿಸುವ ಸಂಕಲ್ಪಕ್ಕೆ ಪ್ರತಿಯೊಬ್ಬರು ಕೈ ಜೋಡಿಸಿ, ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ ಎಂಬುದನ್ನು ಸಾಬೀತುಪಡಿಸಬೇಕಿದೆ.

–ಬಿ. ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

■ ಬಣ ಬಣ!!

ಮಾನ್ಯರೆ,

ಬ್ರಿಟಿಷರ 'ವಿಭಜಿಸಿ ಆಳು' ಎಂಬ ನೀತಿಯಿಂದ ಪ್ರಭಾವಿತರಾದಂತೆ ಕಾಣುತ್ತಿವೆ ನಮ್ಮ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ! ಹಾಗಾಗಿಯೇ ಆಡಳಿತ ಪಕ್ಷದಲ್ಲಿ ಸಿದ್ದು ಬಣ ಮತ್ತು ಡಿಕೆಶಿ ಬಣ! ವಿರೋಧ ಪಕ್ಷದಲ್ಲಿ ವಿಜಯೇಂದ್ರ ಬಣ ಮತ್ತು ಯತ್ನಾಳ್ ಬಣ! ಹಾಗಾಗಿ ರಾಜ್ಯದ ರಾಜಕೀಯವೇ ಬಣ ಬಣ!!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

■ ಗರಡಿ ಮನೆಗಳನ್ನು ಪುನಶ್ಚೇತನಗೊಳಿಸಿ

ಮಾನ್ಯರೆ,

ಭಾರಿ ಮಳೆಯಿಂದಾಗಿ ದ್ವಿ ಶತಮಾನದ ಗರಡಿ ಮನೆ ಕುಸಿದಿರುವುದು ಬೇಸರದ ಸಂಗತಿ. ದೇಸಿ ಕ್ರೀಡೆಯಾದ ನಾಡಕುಸ್ತಿ ಕೂಡ ನಮ್ಮೆಲ್ಲರ ಅಸ್ಮಿತೆ ಹಾಗೂ ನಗರದ ಪಾರಂಪರಿಕ ಒಂದು ಕ್ರೀಡೆ.

ಈ ದೇಸಿ ಕ್ರೀಡೆಯ ಕುಸ್ತಿಯ ಗರಡಿ ಮನೆಗಳು ಸುಸಜ್ಜಿತ ಮತ್ತು ಸಂರಕ್ಷಣೆ ಇಲ್ಲ ಎನ್ನುವುದಕ್ಕೆ ಈ ದ್ವಿಶತಮಾನದ ಗರಡಿ ಮನೆ ಕುಸಿದಿರುವುದೇ ಸಾಕ್ಷಿ. ನಗರದಲ್ಲಿ ಹಲವು ಗರಡಿ ಮನೆಗಳಿದ್ದು, ಹಲವು ಗರಡಿ ಮನೆಗಳು ನೆಪ ಮಾತ್ರಕ್ಕೆ ಅನ್ನುವಂತಿವೆ. ಇಂತಹ ಗರಡಿ ಮನೆಗಳನ್ನು ಗುರುತಿಸಿ ದೇಸಿ ಕ್ರೀಡೆ ಕುಸ್ತಿಯನ್ನು ಉಳಿಸುವ ನಿಟ್ಟಿನಲ್ಲಿ ಎಲ್ಲಾ ಗರಡಿಗಳಿಗೂ ಪುನಶ್ಚೇತನ ಕಲ್ಪಿಸಬೇಕಿದೆ.

– ಪಿ.ಸಿ.ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ, ಮೈಸೂರು

■ ಬಸ್ ತಂಗುದಾಣ ನಿರ್ಮಿಸಲು ಮನವಿ

ಮಾನ್ಯರೆ,

ಚಾಮರಾಜನಗರ ತಾಲೂಕಿನ ಸಂತೆಮರಳ್ಳಿಯಲ್ಲಿ ಬಸ್ ತಂಗುದಾಣವಿಲ್ಲದೆ ಜನರು ರಸ್ತೆ ಬದಿಯಲ್ಲೇ ನಿಲ್ಲಬೇಕಾಗಿದೆ. ಪ್ರತಿದಿನ ನೂರಾರು ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಹಾಗೂ ಮಹಿಳೆಯರು, ಗರ್ಭಿಣಿಯರು, ರಸ್ತೆ ಬದಿಯಲ್ಲಿ ನಿಲ್ಲುವಂತಾಗಿದೆ. ಈ ಸ್ಥಳದಿಂದ ಚಾಮರಾಜನಗರ, ಮೈಸೂರು, ಟಿ.ನರಸೀಪುರ, ಕೊಳ್ಳೇಗಾಲ ಹಾಗೂ ಇತರ ಕಡೆಗೆ ಪ್ರತಿನಿತ್ಯ ಪ್ರಯಾಣಿಕರು ಸಂಚರಿಸುತ್ತಾರೆ. ತಂಗುದಾಣ ಇಲ್ಲದೆ ಪ್ರತಿನಿತ್ಯ ಬಿಸಿಲು, ಮಳೆಯಲ್ಲಿ ನಿಲ್ಲುವ ಪರಿಸ್ಥಿತಿ ಎದುರಾಗಿದೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಮೂರು ದಿನಗಳಿಂದ ಫಂಗಲ್ ಚಂಡಮಾರುತ ಅಪ್ಪಳಿಸಿರುವುದರಿಂದ ವಿಪರೀತ ಮಳೆಯಾಗುತ್ತಿದ್ದು ಈ ಸ್ಥಳದಲ್ಲಿ ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಈ ಭಾಗದಲ್ಲಿ ಬಸ್ ತಂಗುದಾಣವನ್ನು ನಿರ್ಮಿಸಬೇಕಾಗಿ ಮನವಿ.

–ಕುಮಾರ ಎಸ್. ಮಾವಿನಹಳ್ಳಿ, ಮೈಸೂರು

■ ಸೆನ್ ಪೊಲೀಸ್ ಠಾಣೆ ಕಾರ್ಯವೈಖರಿ ಶ್ಲಾಘನೀಯ

ಮಾನ್ಯರೆ,

ಇತ್ತೀಚೆಗೆ ದೇಶಾದ್ಯಂತ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕಕಾರಿಯಾಗಿದೆ. ಪ್ರತಿನಿತ್ಯ ಒಂದಲ್ಲಾ ಒಂದು ಕಡೆ ಸೈಬರ್ ಅಪರಾಧಗಳು ವರದಿಯಾಗುತ್ತಲೇ ಇದ್ದು, ಅಮಾಯಕರು ಲಕ್ಷಾಂತರ ರೂಪಾಯಿಗಳನ್ನು ಕಳೆದುಕೊಳ್ಳುತ್ತಿದ್ದಾರೆ. ವಂಚಕರು, ಬೇರೆ ಬೇರೆ ಹೆಸರಿನಲ್ಲಿ ಕರೆ ಮಾಡಿ, ವಿವಿಧ ರೀತಿಯ ಆಮಿಷಗಳನ್ನು ಒಡ್ಡುತ್ತಿದ್ದಾರೆ. ಇದರ ಜೊತೆಗೆ ಬೆದರಿಕೆಯ ಕರೆಗಳು ಕೂಡ ಬರುವುದುಂಟು. ತಾವು ದೊಡ್ಡ ಮಟ್ಟದ ಅಧಿಕಾರಿಯೆಂದು ಹೇಳಿಕೊಂಡು, ನಿಮ್ಮ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಿ, ಅವುಗಳಿಂದ ಹೊರ ಬರಲು ಹಣದ ಬೇಡಿಕೆ ಇಡುತ್ತಾರೆ. ಕೆಲವು ಮುಗ್ಧ ನಾಗರಿಕರು ಇವುಗಳಿಂದ ಹೆದರಿ, ವಂಚಕರು ಹೇಳಿದ ಹಾಗೆ ಮಾಡಿ ಲಕ್ಷಾಂತರ ರೂಪಾಯಿಗಳನ್ನು ಕಳೆದುಕೊಳ್ಳುತ್ತಿರುವ ಪ್ರಕರಣಗಳು ಹೆಚ್ಚುತ್ತಾ ಹೋಗುತ್ತಿವೆ. ಈ ರೀತಿ ಅನಾಮಧೇಯ ವ್ಯಕ್ತಿಗಳು ಕರೆ ಮಾಡಿದಾಗ, ಸಾರ್ವಜನಿಕರು, ಆತಂಕಕ್ಕೆ ಒಳಗಾಗದೇ, ಅಂತಹ ನಂಬರ್‌ಗಳನ್ನು ಬ್ಲಾಕ್ ಮಾಡುವುದು ಒಳ್ಳೆಯದು. ಜೊತೆಗೆ ಇಂತಹ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸ್ಥಾಪಿಸಲಾಗಿರುವ ಸೆನ್ ಪೊಲೀಸ್ ಠಾಣೆಗೆ ದೂರನ್ನು ನೀಡುವುದರ ಮೂಲಕ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ಪಡೆಯಬಹುದು. ಇಲ್ಲಿಯ ಸಿಬ್ಬಂದಿ ತುಂಬಾ ತಾಳ್ಮೆಯಿಂದ ನಿಮ್ಮ ದೂರನ್ನು ಆಲಿಸಿ, ನಿಮಗೆ ಸೂಕ್ತ ಸಲಹೆ ನೀಡುತ್ತಾರೆ. ಈ ಠಾಣೆಯ ದೂರವಾಣಿ ಸಂಖ್ಯೆ 0821–2418598 (ಮೈಸೂರು).

– ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ಮಾತೃ ಹೃದಯದ ಮಹಾ ಸ್ವಾಮೀಜಿ ಡಾ.ರಾಜೇಂದ್ರ ಶ್ರೀ



**ಮನುಷ್ಯತ್ವದಿಂದ ದೈವತ್ವಕ್ಕೇರಿದ ಸಂತ
ಮಹಾಮೇರು ಮಾತೃಗುಣದ ಹೃದಯವಂತ
ಮಹಾದಾಸೋಹಿ ಅಕ್ಷರಾನ್ನ ಆರೋಗ್ಯಧಾತ
ಮರಣಿಸುವವರೆಗೂ ಸಮಾಜ ಪೊರೆಧಾತ
ಮಹಾಸ್ವಾಮೀಜಿ ರಾಜೇಂದ್ರಶ್ರೀ ಮಹಿಮಾನ್ವಿತ!**

ಡಿ.6, ಜಗದ್ಗುರು ಶ್ರೀಶಿವರಾತ್ರಿ ರಾಜೇಂದ್ರ ಮಹಾ ಸ್ವಾಮಿಗಳ ಸಂಸ್ಮರಣೆಯ ದಿನ. ತನ್ನಿಮಿತ್ತ ಈ ಲೇಖನ

ಮಹಾಗುರುವಾಗಿ ನೂರಾರು, ಸಾವಿರಾರು ಬಡ ಮಕ್ಕಳಿಗೆ ಅನ್ನವಿಟ್ಟು ಅಕ್ಷರ ಕಲಿಸಿ ಎಲ್ಲರ ಬಾಳು ಬೆಳಗಿ ಬದುಕಿದ್ದಾಗಲೇ ದಂತಕಥೆಯಾಗಿದ್ದವರು ತ್ರಿವಿಧ ದಾಸೋಹಿ ಸಂತ, ರಾಜಗುರು ತಿಲಕ, ಸುತ್ತೂರು ಶ್ರೀ ಮಠದ 23ನೆಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು.

ಇವರಿಂದಾಗಿ ಕಲಿತವರು, ಕಲಿತು ಬದುಕು ಕಟ್ಟಿಕೊಂಡವರು, ಬದುಕಿನಾಚೆಗೂ ಹೋಗಿ ನಾಡು ಕಟ್ಟಿದವರು, ನಾಡಿನಾಚೆಗೂ ಜಿಗಿದು ದೇಶಕಟ್ಟಿದವರು, ದೇಶದಿಂದಾಚೆಗೂ ಹಾರಿ ಜಗತ್ತು ಕಟ್ಟಿದವರು ಬಹಳಷ್ಟಿದ್ದಾರೆ. ಅವರೆಲ್ಲರಿಗೂ ಜೀವಧಾತು ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳು. ಇವತ್ತು ಜಗದಗಲ, ಮುಗಿಲಗಲ, ಭುವಿಯಗಲ, ಬಾನಗಲ ಬೆಳೆದು ಹರಡಿ ನಿಂತಿರುವ ಜಗದ್ವಿಖ್ಯಾತ ಸುತ್ತೂರು ಶ್ರೀ ಮಠದ ಸರ್ವಾಂಗೀಣ ಅಭ್ಯುದಯದ ತಾಯಿ ಬೇರು ಸಹ ಇವರೇ ಎಂಬುದು ಸತ್ಯಸ್ಯ ಸತ್ಯ. ಇದೆಲ್ಲಕ್ಕೂ ಮೂಲಧಾತು ರಾಜೇಂದ್ರ ಮಹಾಸ್ವಾಮಿಗಳಲ್ಲಿದ್ದ ದೂರದೃಷ್ಟಿ ಹಾಗೂ ಕ್ರಿಯಾ ಶೀಲತೆ ಮತ್ತು ಧೀಶಕ್ತಿ. ಎಲ್ಲಕ್ಕಿಂತ ಮಿಗಿಲಾಗಿ ಎಲ್ಲರಲ್ಲೂ ತನ್ನ ವರನ್ನು ಕಾಣುವ ಅವರೊಳಗಿದ್ದ ಮಹಾಮಾನವೀಯತೆ. ಅದಕ್ಕೆ ಪ್ರತ್ಯಕ್ಷ ಸಾಕ್ಷಿ ಅವರು ಸ್ಥಾಪಿಸಿದ ಉಚಿತ ವಿದ್ಯಾರ್ಥಿನಿಲಯಗಳು. ಎಂಥಾ ಸಂಕಷ್ಟ ಪರಿಸ್ಥಿತಿಯಲ್ಲೂ ವಿದ್ಯಾರ್ಥಿಗಳಿಗೆ ತೊಂದರೆ ಯಾಗದಂತೆ ಗುರುದೇವರಾಗಿ ಕಾಪಾಡುತ್ತಿದ್ದರು. ಅದಕ್ಕೇ ಅವರನ್ನು ನಂಬಿ ಬಂದವರಿಗೆ ಕಲಿಯುಗದ ಕಾಮಧೇನು ಎಂತಲೂ, ಬೇಡಿ ಬಂದವರನ್ನು ಕೈಬಿಡದ ಕಲ್ಪವೃಕ್ಷ ಎಂತಲೂ ಜನ ಭಕ್ತಿಯಿಂದ ಕರೆಯುತ್ತಿದ್ದರು. ಅಪರಿಮಿತ ಅಭಿಮಾನದಿಂದ ಪೂಜಿಸುತ್ತಿದ್ದರು.

ಲೋಕಸೇವೆ ಮಾಡಲೆಂದೇ ಉದಯಿಸಿದ ಸೇವಾ ಸೂರ್ಯನಂತೆ ಜಗದ ಬೆಳಕಾಗಿ ಸೇವೆ ಮಾಡಿದ ಕಾಯಕಯೋಗಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಕಾಲಮಾನ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಂಸ್ಥೆ (ಜೆ.ಎಸ್.ಎಸ್.)ಯ ಪಾಲಿಗೆ ಸುವರ್ಣ ಕಾಲವೇ ಆಗಿತ್ತು. ಅಷ್ಟೇ ಅಲ್ಲ. ಕನ್ನಡ ನಾಡಿಗೆ ಅದರಲ್ಲೂ ವಿಶೇಷವಾಗಿ ನಮ್ಮ ಮೈಸೂರು ಭಾಗದ ಜನತೆಗೆ ಬಂಗಾರದ ಯುಗವಾಗಿತ್ತು. ಅಂಥಾ ಬಂಗಾರದ ಮನುಷ್ಯ ಈ ಸಂತ ಸಾಮ್ರಾಟ.

ಸಾವಿರಾರು ಬಡ ಮಕ್ಕಳಿಗೆ ಉಚಿತವಾಗಿ ಶಿಕ್ಷಣ, ಊಟ, ವಸತಿ ಕಲ್ಪಿಸಿ ಅನಕ್ಷರಸ್ಥರೋ, ಅಲ್ಪ ವಿದ್ಯಾವಂತರೋ ಆಗಿಯೇ ಉಳಿಯುತ್ತಿದ್ದ ಅನೇಕಾನೇಕ ಮಂದಿಗೆ ಪೂರ್ಣ ವಿದ್ಯಾವಂತರನ್ನಾಗಿ ಮಾಡಿದ ಅವರು ಮಠಾಧೀಶರ ಸಾಲಿನಲ್ಲಿ ಅಗ್ರಪಂಕ್ತಿಯಲ್ಲಿದ್ದು ಮಾತೃಹೃದಯಿ ಆಗಿದ್ದರು. ತಮ್ಮ ಚಿಕಿತ್ಸಕ ಗುಣ, ಸೌಜನ್ಯ, ಸರಳತೆ ಮತ್ತು ಸಮಾಜಮುಖಿ ಚಿಂತನೆಗಳಿಂದಲೇ ಇಡೀ ನಾಡಿನ ಹೃನ್ಮನವನ್ನು ಗೆದ್ದಿದ್ದರು. ಹಾಗೆಯೇ ಇಡೀ ಜಗದ ದೃಷ್ಟಿ ತಮ್ಮತ್ತ ಬೀಳುವಂತೆ ಸಾರ್ಥಕತೆ ಮೆರೆದಿದ್ದರು.

ಶ್ರೀಮತ್ಸುತ್ತೂರು ವೀರ ಸಿಂಹಾಸನ ಮಹಾಸಂಸ್ಥಾನ ಮಠಕ್ಕೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವುಂಟು. ಯುದ್ಧಾಸಕ್ತನಾಗಿ ಯುದ್ಧೋನ್ಮಾದದಿಂದ ಬಂದಿದ್ದ ತಮಿಳುನಾಡಿನ ಚಕ್ರಾಧಿಪತಿ ರಾಜೇಂದ್ರ ಚೋಳ ಮತ್ತು ತಲಕಾಡಿನ ಗಂಗರ ದೊರೆ ರಾಚಮಲ್ಲರ ನಡುವೆ ಯುದ್ಧ ನಿಲ್ಲಿಸಿ, ಶಾಂತಿ–ಸಾಮರಸ್ಯಗಳನ್ನು ಮೂಡಿಸಿ ಅವರಿಂದ ಪೂಜನೀಯ ಗೌರವಕ್ಕೆ ಭಾಜನರಾದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರಿಂದ ಸಾವಿರ ವರ್ಷಗಳ ಹಿಂದೆಯೇ ಸಮಾಜಮುಖಿ ಚಿಂತನೆಗಳ ಆಶಯದಿಂದ ಶಾಂತಿಯ ಸಂಕೇತವಾಗಿ ಸಂಸ್ಥಾಪಿಸಿದ ಧರ್ಮ ಪೀಠವಿದು. ಇವತ್ತಿಗೂ ಈ ಪೀಠಕ್ಕೆ ಜಗದ್ಗೌರವವಿದೆ. ಇದನ್ನು ಅಲಂಕರಿಸಿದ ಜಗದ್ಗುರುಗಳಿಗೂ ಅಷ್ಟೇ ಮಹತ್ವದ ಸ್ಥಾನವಿದೆ. ಈ ಪೀಠದ ಜಗದ್ಗುರುಗಳ ದಿವ್ಯ ಪರಂಪರೆಯ ಪಥದಲ್ಲಿ ಮಹಾನ್ ಸಂತ ಶ್ರೇಷ್ಠರು, ಆಧ್ಯಾತ್ಮಿಕ ಸಾಧಕರು, ಸಮಾಜಮುಖಿ ಚಿಂತಕರು, ಅನುಭವಿಗಳು, ವಚನಕಾರರು, ದಾರ್ಶನಿಕರು, ದ್ರಷ್ಟಾರರು, ಗ್ರಂಥಕರ್ತರು, ಪರಿವ್ರಾಜಕರು ಆಗಿ ಹೋಗಿದ್ದು ಅವರವರ ಕಾಲಘಟ್ಟಗಳಲ್ಲಿ ಆರೋಗ್ಯಕರ ಸಮಾಜ ಕಟ್ಟುವಲ್ಲಿ ತೋರು ಮಾರ್ಗವಾಗಿದ್ದಾರೆ. ಅವರುಗಳೆಲ್ಲರ ತತ್ವ ಸಿದ್ಧಾಂತ ಹಾಗೂ ಆಶೋತ್ತರಗಳ ಒಟ್ಟು ಮೊತ್ತದಂತಿದ್ದವರು ಶ್ರೀಮಠದ ಇಪ್ಪತ್ಮೂರನೇ ಪೀಠಾಧಿಪತಿಗಳಾಗಿದ್ದ ಶ್ರೀಮನ್ಮಹಾರಾಜ ರಾಜಗುರು ತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು.

ಸುತ್ತೂರು ಶ್ರೀ ಮಠಕ್ಕೆ ಒಂದು ಬಹುಮುಖಿ ಆಯಾಮವನ್ನು ನೀಡಿ ಅದು ಜಗದ್ವಿಖ್ಯಾತಿಯಾಗಲು ಬಹುಮುಖ್ಯ ಕಾರಣಿಕ ಶಕ್ತಿಯಾದ ಇಂಥಾ ಸಂತಲೋಕದ ಮಹಾಬೆಳಕು ಈ ಭುವಿಯಲ್ಲಿ ಅವತರಿಸಿದ್ದೇ ಒಂದು ಪವಾಡಸದೃಶ. "ಸ್ವಾಮಿಗಳನ್ನು ಮಾಡಬಾರದು, ಸ್ವಾಮಿಗಳು ಆಗಬೇಕು" ಎಂಬ ಅರ್ಥಪೂರ್ಣ ನುಡಿಮುತ್ತಿಗೆ ಅನ್ವರ್ಥವಾಗಿ ಒಂದು ರೀತಿ ಹುಟ್ಟಿನಿಂದಲೇ ಸ್ವಾಮಿತ್ವ ಪಡೆದುಕೊಂಡು ಲೋಕಕ್ಕೆ ಬಂದವರಿವರು. ಪೂರ್ವಾಶ್ರಮ ಎಂಬ ಮಾತೇ ಇಲ್ಲದೆ ಹುಟ್ಟುತ್ತಲೇ 'ಶಿವರಾತ್ರಿ ರಾಜೇಂದ್ರ' ಎಂಬ ನಾಮಾಂಕಿತವನ್ನು ಪಡೆದ ಬಹು ಅಪರೂಪದ ಸ್ವಾಮಿಗಳಿವರು. ಇವರು ಜನಿಸಿದ್ದು 1916 ಆಗಸ್ಟ್ 29. ಪ್ರಕೃತಿ ಪ್ರಸನ್ನವಾಗಿ ತನ್ನ ತೇಜೋ ಕಾಂತಿಯನ್ನು ಚೆಲ್ಲುತ್ತಿದ್ದ ಶಾಲಿವಾಹನಶಕ 1838ನೇ ನಳನಾಮ ಸಂವತ್ಸರದ ಭಾದ್ರಪದ ಮಾಸ ಶುದ್ಧ ಪಾಡ್ಯದ ಸುಮುಹೂರ್ತ ಕಾಲವದು. ಜನ್ಮಸ್ಥಳ ಶ್ರೀಮಠದ ನೆಲೆ ಬೀಡಾದ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರು ಗ್ರಾಮ. ಜನ್ಮವಿತ್ತ ಪುಣ್ಯಾತ್ಮರು ತಾಯಿ ಶರಣೆ ಶಂಕರಮ್ಮ. ಇವರಿಗೆ ಮರಮ್ಮಣ್ಣಿ ಎಂಬ ಮತ್ತೊಂದು ಹೆಸರೂ ಉಂಟು. ತಂದೆ ಶರಣ ಮಲ್ಲಿಕಾರ್ಜುನ ದೇವರು. ಸುತ್ತೂರು ಶ್ರೀ ಮಠಕ್ಕೆ ಸಂಪೂರ್ಣವಾಗಿ ತಮ್ಮನ್ನು ಸಮರ್ಪಿಸಿಕೊಂಡಿದ್ದ ಶ್ರೀ ಶಿವರಾತ್ರೀಶ್ವರರ ಪರಮ ಭಕ್ತರಿವರು. ಇಂಥಾ ಶರಣ ದಂಪತಿಗಳ ಶಿಶು ಎಂದರೆ ಕೇಳಬೇಕೆ? ಸುಸಂಸ್ಕಾರವೆಂಬುದು ಜನ್ಮತಃ ಮೈಗೂಡಿಕೊಂಡಿತ್ತು. ಬಾಲಕ ಶಿವರಾತ್ರಿ ರಾಜೇಂದ್ರರ ಬೆಳೆಯುವಿಕೆಯಲ್ಲಿ ಇಬ್ಬರು ಅಜ್ಜಿಯರ ಪಾತ್ರ ಬಹಳ ಮುಖ್ಯವಾಗಿತ್ತು. ಒಬ್ಬ ಅಜ್ಜಿ ಇವರ ತಾಯಿಯ ತಾಯಿ ಮಲ್ಲಮ್ಮಯ್ಯ. ಇವರು ಜ್ಯೋತಿಷ್ಯದಲ್ಲಿ ಬಹಳ ಪರಿಣತಿ ಹೊಂದಿದ್ದರು. ಮತ್ತೊಬ್ಬ ಅಜ್ಜಿ ತಂದೆಯ ತಾಯಿ ಚಿಕ್ಕಬಸಮಯ್ಯ. ಇವರೂ ಸಹ ಹಸ್ತ ಸಾಮುದ್ರಿಕೆಯಲ್ಲಿ ಪ್ರಸಿದ್ಧರಾಗಿದ್ದರು.

ತಂದೆ–ತಾಯಿಯ ಮಮತೆ, ಇಬ್ಬರು ಅಜ್ಜಿಯರ ಅಗಾಧ ಪ್ರೀತಿಯಿಂದ ಐದು ವರ್ಷಗಳವರೆಗೆ ತನ್ನ ಕುಟುಂಬದ ವಾತ್ಸಲ್ಯದ ಹಾರೈಕೆಯಲ್ಲಿ ಬೆಳೆದ ಶಿಶು ಶಿವರಾತ್ರಿ ರಾಜೇಂದ್ರರನ್ನು ಆನಂತರ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸ್ವಾಮಿಗಳಿಗೆ ಕೊಟ್ಟ ಮಾತಿನಂತೆ ಶ್ರೀ ಮಠಕ್ಕೆ ಒಪ್ಪಿಸಲಾಯಿತು. ಅಂದಿನಿಂದ ಬಾಲಕ ಶಿವರಾತ್ರಿ ರಾಜೇಂದ್ರರ ಸಂಪೂರ್ಣ ಹೊಣೆ ನೇರವಾಗಿ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳದಾಯಿತು. ದಿನದಿಂದ ದಿನಕ್ಕೆ ಬಾಲಕ ಶಿವರಾತ್ರಿ ರಾಜೇಂದ್ರ ಭವ್ಯವಾಗಿ ಬೆಳೆದು ದಿವ್ಯವಾಗಿ ಎಲ್ಲರನ್ನೂ, ಎಲ್ಲವನ್ನೂ ತನ್ನತ್ತ ಸೆಳೆದುಕೊಂಡರು. ಶ್ರೀ ಮಠದ ಉತ್ತರಾಧಿಕಾರಿಯಾದ ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬಾಲಕ ಶಿವರಾತ್ರಿ ರಾಜೇಂದ್ರರು ಸುತ್ತೂರಿನಿಂದ ಮೈಸೂರು ನಗರದತ್ತ ಪಯಣಿಸಿದರು. ಅಲ್ಲಿ ಸಕಲ ವಿದ್ಯಾಪಾರಂಗತರಾಗಿ ರೂಪುಗೊಳ್ಳತೊಡಗಿದ ಅವರು ಶ್ರೀ ಮಠದಲ್ಲಿ ಹೊಸ ಇತಿಹಾಸವೊಂದನ್ನು ಬರೆಯುವತ್ತ ಚಿಕ್ಕ ವಯಸ್ಸಿನಲ್ಲೇ ಮುಂದಾಗಿ ಬೆಳೆದು ನಿಂತರು. ಇನ್ನೂ ವಿದ್ಯಾರ್ಥಿಯಾಗಿದ್ದಾಗಲೇ 1928 ಫೆಬ್ರವರಿ 24ರಂದು ಕೇವಲ 12ನೇ ವಯಸ್ಸಿಗೇ ಬಾಲಕ ಶಿವರಾತ್ರಿ ರಾಜೇಂದ್ರರು ಐತಿಹಾಸಿಕ ಸುತ್ತೂರು ವೀರ ಸಿಂಹಾಸನ ಮಹಾಸಂಸ್ಥಾನ ಮಠದ ಪೀಠಾರೋಹಣ ಮಾಡಿ ಜಗದ್ಗುರು ಸ್ಥಾನದಲ್ಲಿ ಕುಳಿತರು. ಅಂದಿನಿಂದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಚಾರಿತ್ರಿಕ ಹೊಸ ಯುಗವೊಂದು ಪ್ರಗತಿಯ ಮಹಾಚಕ್ರದೊಡನೆ ಸೇವಾ ಪಥದಲ್ಲಿ ಆರಂಭಗೊಂಡಿದ್ದು ಈಗ ಇತಿಹಾಸ!.

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಎಣೆಯಿಲ್ಲದ ತ್ರಿವಿಧ ದಾಸೋಹವನ್ನು ಕಣ್ಣಾರೆ ಕಂಡು ವಿಸ್ಮಯಗೊಂಡಿದ್ದ ಮಹಾಕವಿ ರಸಋಷಿ ಕುವೆಂಪು ಅವರು 'ಸಾಮಾನ್ಯರ ಮನೆ ಬಾಗಿಲಿಗೆ ಅಪೂರ್ವವೂ ಅವ್ಯಕ್ತವೂ ಆದ ಜ್ಞಾನವನ್ನು ಪ್ರವಹಿಸಿ, ಅವರ ಹೃದಯವನ್ನು ತಿದ್ದಿ ಉದ್ಧರಿಸುವ ಕಾಯಕ ಮಾಡಿದ ಅಪೂರ್ವ ತೇಜೋಮಯ ದಾರ್ಶನಿಕ ವ್ಯಕ್ತಿ' ಎಂದು ಶ್ರೀಗಳನ್ನು ಶ್ಲಾಘಿಸಿ ಅವರ ನಿಸ್ವಾರ್ಥ ಸೇವಾ ಕೈಂಕರ್ಯಕ್ಕೆ ಚಿನ್ನದ ಪ್ರಭಾವಳಿ ತೊಡಿಸಿದ್ದರು. ಅನ್ನ, ಅಕ್ಷರ, ಆರೋಗ್ಯವೆಂಬ ತ್ರಿವಿಧ ದಾಸೋಹದ ಸಾರ್ಥಕ ಸೇವೆಯಲ್ಲಿ ಇಂದು ಜಗದಗಲಕೂ, ಮುಗಿಲೆತ್ತರಕೂ ಬೆಳೆದು ನಿಂತಿರುವ ಶ್ರೀಮತ್ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಸೇವಾ ಕೈಂಕರ್ಯಗಳ ಹಿಮಾಲಯವನ್ನು ಯಾವ ದಿಕ್ಕಿನಿಂದ ಇಣುಕಿ ನೋಡಿದರೂ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳೇ ಕಾಣುತ್ತಾರೆ. 1986 ಡಿಸೆಂಬರ್ 6ರಂದು ಶ್ರೀಗಳು ಲಿಂಗೈಕ್ಯರಾಗಿ ಭೌತಿಕವಾಗಿ ನಮ್ಮಿಂದ ಕಣ್ಮರೆಯಾಗಿದ್ದರೂ ಅವರೆಂದೆಂದಿಗೂ ಮರೆಯಲಾಗದ ಮಹಾಚೇತನವಾಗಿದ್ದಾರೆ. ಅಂತೆಯೇ ಇವರು ತಮ್ಮ ಉತ್ತರಾಧಿಕಾರಿಯಾಗಿ ಸೇವಾ ಕೈಂಕರ್ಯದಲ್ಲಿ ತಮ್ಮಷ್ಟೇ ಪ್ರಭಾವಶಾಲಿಯಾದ ಸಂತ ಪ್ರಭೆಯಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯಂತಹ ಅಪೂರ್ವ ಸಂತರತ್ನವನ್ನು ತಮ್ಮ ಅಮೋಘ ಕೊಡುಗೆಯಾಗಿ ನಾಡಿಗೆ ನೀಡಿ ಹೋಗಿದ್ದಾರೆ.

ಯುವಕರ ಪ್ರತಿಭೆ ಅನಾವರಣಕ್ಕೆ ಉತ್ತೇಜನವೂ ಅಗತ್ಯ

ಯುವ ಜನೋತ್ಸವಕ್ಕೆ ಚಾಲನೆ ನೀಡಿದ ಹಿರಿಯ ಶಾಸಕ ತನ್ವೀರ್ ಸೇಠ್ ಅಭಿಮತ

ಮೈಸೂರು, ಡಿ.4(ಆರ್‌ಕೆ)– ಯುವ ಸಮುದಾಯದ ಪ್ರತಿಭೆಯನ್ನು ಅನಾವರಣಗೊಳಿಸಲು ಸಮಾಜದ ಎಲ್ಲರೂ ಉತ್ತೇಜನ ನೀಡುವ ಅಗತ್ಯವಿದೆ ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ, ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿಶ್ವವಿದ್ಯಾನಿಲಯ, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಮೈಸೂರು, ಯುವಕ ಸಂಘ ಮತ್ತು ಯುವತಿ ಮಂಡಳಿಗಳು, ಮೈಸೂರು ಸಹಯೋಗದಲ್ಲಿ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಮೈಸೂರು ಜಿಲ್ಲಾ ಮಟ್ಟದ ಯುವ ಜನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸೂಕ್ತ ಅವಕಾಶ ಕಲ್ಪಿಸಬೇಕು: ಯುವ ಜನೋತ್ಸವದ ಅಂಗವಾಗಿ ಕಲೆ, ಸಾಹಿತ್ಯ, ಸಂಗೀತ, ನೃತ್ಯ ಸೇರಿದಂತೆ ಇತರ ಜನಪದ ಕಲೆಗಳನ್ನು ಆಯೋಜಿಸಿ, ಪ್ರಜ್ಞಾವಂತ ಯುವ ಕಲಾ ಪ್ರತಿಭೆಗಳನ್ನು ಗುರುತಿಸುವ ಉದ್ದೇಶದಿಂದ ಅವರ ಪ್ರತಿಭೆಗಳನ್ನು ಗ್ರಾಮ ಮಟ್ಟದಿಂದ ರಾಜ್ಯ, ರಾಷ್ಟ್ರಮಟ್ಟದವರೆಗೆ ಅನಾವರಣಗೊಳಿಸುವುದೇ ಯುವಜನೋತ್ಸವದ ಮುಖ್ಯ ಉದ್ದೇಶವಾಗಿದೆ. ಯುವಕರು ಹೆಚ್ಚಾಗಿ ಇದರಲ್ಲಿ ಪಾಲ್ಗೊಂಡು ತಮ್ಮ ಪ್ರತಿಭೆ ಪ್ರದರ್ಶಿಸಿ, ರಾಜ್ಯ, ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆಯಬೇಕು. ಜಗತ್ತಿನಲ್ಲಿ ಭಾರತದಲ್ಲಿರುವ ಯುವಕ–ಯುವತಿಯರ ಸಂಖ್ಯೆ ಬೇರೆ ಯಾವುದೇ ದೇಶದಲ್ಲಿ ಇಲ್ಲ. ದೇಶದ ಯುವಶಕ್ತಿಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತಿಸಬೇಕು. ಯುವಕರಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಲ್ಲಿ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಯುವಕ–ಯುವತಿಯರ ಮನಸ್ಸಿನಲ್ಲಿರುವ ಭಾವನೆಗಳನ್ನು ಅರ್ಥೈಸಿಕೊಂಡು, ಅದಕ್ಕೆ ಪೂರಕವಾದ ಸ್ಪರ್ಧಾತ್ಮಕ ಅವಕಾಶಗಳನ್ನು ಕಲ್ಪಿಸಿಕೊಟ್ಟಲ್ಲಿ ಅವರನ್ನು ಈ ರಾಷ್ಟ್ರದ ಸಂಪತ್ತನ್ನಾಗಿ ಪರಿವರ್ತಿಸಬಹುದು ಎಂದರು.



ಮೈಸೂರು ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ಬುಧವಾರ ಶಾಸಕ ತನ್ವೀರ್ ಸೇಠ್ ಉದ್ಘಾಟಿಸಿದರು.

ಯುವಜನತೆಗೆ ದೇಶದ ಬಹು ಸಂಸ್ಕೃತಿಯ ನೈಜತೆ ಪರಿಚಯದ ಕೊರತೆ ಇದೆ. ಅವರಿಗೆ ಸಂಸ್ಕೃತಿಯ ಅರಿವು ಮೂಡಿಸಬೇಕು. ಆಗ ಮಾತ್ರ ಅವರನ್ನು ಸಂಕುಚಿತ ಮನೋಭಾವನೆಯಿಂದ ಹೊರ ತರಬಹುದು. ಅದಕ್ಕೆ ಪೂರಕವೆಂಬಂತೆ ಯುವಜನೋತ್ಸವದಂತಹ ಕಾರ್ಯಕ್ರಮಗಳನ್ನು ರೂಪಿಸಬೇಕು. ಯುವಜನರು ತಂತ್ರಜ್ಞಾನದ ಪ್ರಭಾವದಿಂದ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಕಡೆಗೆ ಹೆಚ್ಚು ಆಸಕ್ತಿ ತೋರುತ್ತಿಲ್ಲ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಅನುಕೂಲವಾಗಲು ಶೈಕ್ಷಣಿಕ ಕಲಿಕೆಗಳ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹೆಚ್ಚು ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ಶಿಕ್ಷಣ ಕೇವಲ ಅಂಕಗಳಿಗಲ್ಲ. ಶಿಕ್ಷಣದ ಜೊತೆಯಲ್ಲಿ ಇತರೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಳ್ಳಬೇಕು. ಎನ್‌ಎಸ್‌ಎಸ್, ಎನ್‌ಸಿಸಿ ಹಾಗೂ ಸ್ಕೌಟ್ಸ್ ಅಂಡ್ ಗೈಡ್ಸ್ ಇವುಗಳು ವಿದ್ಯಾರ್ಥಿಗಳಲ್ಲಿ ಶಿಸ್ತು–ಸಂಯಮ ಮತ್ತು ದೇಶಾಭಿಮಾನ ಮೂಡಿಸುವ ಕೆಲಸ ನಿರ್ವಹಿಸುತ್ತಿವೆ. ಪ್ರತೀ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಸಂಘದಲ್ಲಿ ವಿದ್ಯಾರ್ಥಿಗಳು ಕಡ್ಡಾಯವಾಗಿ ಸೇರ್ಪಡೆಯಾಗುವ ಮೂಲಕ ಸೇವಾ ಮನೋಭಾವನೆಯನ್ನು ರೂಢಿಸಿಕೊಳ್ಳಬೇಕು. ಈ ಮೂಲಕ ಒಳ್ಳೆಯ ನಾಗರಿಕರಾಗಿ ರಾಷ್ಟ್ರ ನಿರ್ಮಾಣಕ್ಕೆ ಪೂರಕವಾಗಿ ನಿಲ್ಲಬೇಕು ಎಂದು ಹೇಳಿದರು.



ಯುವಜನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಯುವ ಸಮುದಾಯ.

ಕಾರ್ಯಕ್ರಮದಲ್ಲಿ ನೆಹರು ಯುವ ಕೇಂದ್ರದ ಜಿಲ್ಲಾ ಯುವಜನ ಅಧಿಕಾರಿ ಅಭಿಷೇಕ್ ಎಸ್.ಜವರೆ, ಮೈಸೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮದ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಪ್ರೊ.ಅಬ್ದುಲ್ ರಹಿಮಾನ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ರಾಷ್ಟ್ರ ಪ್ರಶಸ್ತಿ ವಿಜೇತ ಇಮ್ರಾನ್ ಬೇಗ್, ವಿವಿಧ ಕಾಲೇಜಿನ ಸ್ಪರ್ಧಾರ್ಥಿಗಳು, ವಿದ್ಯಾರ್ಥಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> “ಪ್ರತಿಯೊಬ್ಬರೂ ಜೀವನದಲ್ಲಿ ಸಮಯ ಪ್ರಜ್ಞೆ ರೂಢಿಸಿಕೊಳ್ಳಬೇಕು. ಮುಖ್ಯವಾಗಿ ವಿದ್ಯಾರ್ಥಿಗಳು ಸಮಯ ಪಾಲನೆ ಮಾಡಬೇಕು. ಸಾಧನೆ ಇಲ್ಲದೆ ಬದುಕು ಕಟ್ಟಿಕೊಳ್ಳುವುದು ಸಾರ್ಥಕತೆಯಲ್ಲ. ಪ್ರತಿಯೊಬ್ಬರಲ್ಲೂ ಯಾವುದಾದರೊಂದು ಪ್ರತಿಭೆ ಇದ್ದೇ ಇರುತ್ತದೆ. ಸ್ಪರ್ಧೆಯಲ್ಲಿ ಸೋಲು–ಗೆಲುವು ಎಂಬುದು ಮುಖ್ಯವಲ್ಲ, ಭಾಗವಹಿಸುವಿಕೆ ಬಹಳ ಮುಖ್ಯ. ಸ್ಪರ್ಧೆಯಲ್ಲಿ ಗೆದ್ದವರಿಗೆ ಯಶಸ್ಸು ಸಿಗುತ್ತದೆ. ಸೋತವರಿಗೆ ಮತ್ತೆ ಗೆಲ್ಲುವಂತಹ ಧೈರ್ಯ ಬರುತ್ತದೆ. –ತನ್ವೀರ್ ಸೇಠ್

ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಸುಮಾರು 500 ಮಂದಿ ಯುವಕ–ಯುವತಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ.

ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ವತಿಯಿಂದ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಆಧುನಿಕ ವಿಷಯ ಕುರಿತಂತೆ ವಿಜ್ಞಾನ ಮೇಳ ಆಯೋಜಿಸಲಾಗಿದೆ. ಅದೇ ರೀತಿ ಸಾಂಸ್ಕೃತಿಕ ಸ್ಪರ್ಧೆ, ಜಾನಪದ ನೃತ್ಯ ಸ್ಪರ್ಧೆ, ಜೀವನ ಕೌಶಲ ಸ್ಪರ್ಧೆ, ಕವಿತೆ ಬರೆಯುವುದು, ಕಥೆ ಬರೆಯುವುದು, ಚಿತ್ರಕಲೆ, ವೈಯಕ್ತಿಕ ಭಾಷಣ, ಯುವಕೃತಿ, ಛಾಯಾಗ್ರಹಣ ಕುರಿತಂತೆ ವಿವಿಧ ಸ್ಪರ್ಧೆಗಳನ್ನು ಯುವಜನೋತ್ಸವದಲ್ಲಿ ಆಯೋಜಿಸಲಾಗಿತ್ತು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಿ, ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಯುವಕರನ್ನು ರಾಜ್ಯ ಮಟ್ಟದ ಯುವ ಜನೋತ್ಸವಕ್ಕೆ ಆಯ್ಕೆ ಮಾಡಲಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಲೋಕಾಯುಕ್ತ ವಿಚಾರಣೆಗೆ ಹಾಜರಾದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್: ಅಧಿಕಾರಿಗಳ ವಿಷಯ ಮಂಡನೆ ಆಧರಿಸಿ ಎಲ್ಲಾ ತೀರ್ಮಾನ

ಮೈಸೂರು, ಡಿ.4(ಎಸ್‌ಬಿಡಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ಲೋಕಾಯುಕ್ತ ಕಚೇರಿಯಲ್ಲಿ ಬುಧವಾರ ವಿಚಾರಣೆಗೆ ಹಾಜರಾಗಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಧರ್ಮಪತ್ನಿ ಪಾರ್ವತಿ ಅವರಿಗೆ ಶೇ.50:50ರ ಅನುಪಾತದಲ್ಲಿ 14 ನಿವೇಶನಗಳನ್ನು ಮಂಜೂರು ಮಾಡಿದಾಗ ಪ್ರಾಧಿಕಾರದ ಸಭೆಯ ಅಧ್ಯಕ್ಷರಾಗಿದ್ದ ಹೆಚ್.ವಿ. ರಾಜೀವ್, ಇಂದು ಸಂಜೆ 4 ಗಂಟೆ ಸುಮಾರಿಗೆ ಆಗಮಿಸಿದರು. ಮೈಸೂರು ಲೋಕಾಯುಕ್ತ ಎಸ್‌ಪಿ ಟಿ.ಜೆ.ಉದೇಶ್ ವಿಚಾರಣೆ ನಡೆಸಿದರು. ಸಂಜೆ 7.10ರ ಸುಮಾರಿಗೆ ರಾಜೀವ್ ಹೊರಬಂದರು.



ವಿಚಾರಣೆ ನಂತರ ಮೈಸೂರು ಲೋಕಾಯುಕ್ತ ಕಚೇರಿಯಿಂದ ಹೊರಬಂದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್.

ಸಭೆಯ ನಿರ್ಣಯ: ಮೂರು ಗಂಟೆಗೂ ಹೆಚ್ಚು ಕಾಲ ವಿಚಾರಣೆ ಎದುರಿಸಿದ ಹೆಚ್.ವಿ.ರಾಜೀವ್ ಮಾಧ್ಯಮಗಳೊಂದಿಗೆ ಮಾತನಾಡಿ, ಲೋಕಾಯುಕ್ತ ಅಧಿಕಾರಿಗಳ ಪ್ರಶ್ನಾವಳಿಗೆ ಸ್ಪಷ್ಟವಾಗಿ ಉತ್ತರಿಸಿದ್ದೇನೆ. ಪರಿಹಾರವಾಗಿ ಶೇ.50:50 ಅನುಪಾತದಲ್ಲಿ ನಿವೇಶನ ನೀಡುವ ಸಂಬಂಧ ಪ್ರಾಧಿಕಾರದ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆಯೇ ಹೊರತು, ಅದು ಸುಮೊಟೊ(ಸ್ವಯಂ) ನಿರ್ಣಯವಲ್ಲ ಎಂದು ಸ್ಪಷ್ಟಪಡಿಸಿದ್ದೇನೆ. ಹಿಂದೆ ಶೇ.100ರಷ್ಟು ನಿವೇಶನ ನೀಡಲಾಗಿದೆ. ಹಿಂದಿನ ಯಾವುದೋ ಸಭೆಯಲ್ಲಿ ಶೇ.50:50ರ ಅನುಪಾತದಲ್ಲಿ ನಿವೇಶನ ನೀಡಿರುವ ಪ್ರಕರಣಗಳ ನಿದರ್ಶನದೊಂದಿಗೆ ಅಧಿಕಾರಿಗಳು ಲಿಖಿತವಾಗಿ ವಿಷಯ ಮಂಡಿಸಿದ್ದರ ಮೇರೆಗೆ ಪ್ರಾಧಿಕಾರದ ಸಭೆಯಲ್ಲಿ ಸಾಮಾನ್ಯ ವಿಷಯವಾಗಿ ಚರ್ಚಿಸಿ, ನಿರ್ಣಯ ಕೈಗೊಳ್ಳಲಾಗಿದೆ. ಸರ್ಕಾರದ ಸುತ್ತೋಲೆ ಪ್ರಕಾರ ಶೇ.50:50 ಅನುಪಾತದಡಿ ಪರಿಹಾರ ನೀಡಬಹುದು ಎಂದು ಅಧಿಕಾರಿಗಳು ಸ್ಪಷ್ಟವಾಗಿ ಶಿಫಾರಸು ಮಾಡಿದ್ದರಿಂದಲೇ ಪರಿಣಾಮ, ನಷ್ಟ, ಸಾಂದರ್ಭಿಕ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಒಮ್ಮತದಿಂದ ನಿರ್ಧಾರ ಮಾಡಲಾಗಿದೆ ಎಂದು ಲೋಕಾಯುಕ್ತರಿಗೆ ಹೇಳಿದ್ದೇನೆ ಎಂದರು.

ಯಾವ ತನಿಖೆಗೂ ಸಿದ್ಧ: ಹಲವು ಪ್ರಕರಣಗಳಲ್ಲಿ ಒಂದು ಹಂತದ ನ್ಯಾಯಾಲಯಗಳು ನೀಡುವ ತೀರ್ಪಿಗೆ ವ್ಯತಿರಿಕ್ತವಾಗಿ ಮೇಲಿನ ಹಂತದ ನ್ಯಾಯಾಲಯಗಳು ತೀರ್ಪು ನೀಡುತ್ತವೆ. ಪರಮಾರ್ಶೆ, ಸಂದರ್ಭ, ಕಾಯ್ದೆಗಳು, ನೋಟ್‌ಗಳ ಮೇಲೆ ತೀರ್ಮಾನ ಮಾಡಲಾಗುತ್ತದೆ. ಆದರೆ ಯಾವ ನ್ಯಾಯಾಲಯದ ತೀರ್ಪು ಸರಿ–ತಪ್ಪು ಎಂದು ವಿಶ್ಲೇಷಣೆ ಮಾಡಲಾಗದು. ಈ ಪ್ರಕರಣದಲ್ಲೂ ಇಂದಿನ ಅಭಿಪ್ರಾಯದ ಮೇಲೆ ಚರ್ಚೆ ಆಗುತ್ತಿದೆ. ಆದರೆ ಅಂತಿಮವಾಗಿ ನ್ಯಾಯಾಲಯ ತೀರ್ಮಾನಿಸುತ್ತದೆ. ಈವರೆಗೆ ನನಗೆ ಇಡಿ ನೋಟೀಸ್ ಬಂದಿಲ್ಲ. ಯಾವುದೇ ತನಿಖಾ ಸಂಸ್ಥೆ ವಿಚಾರಣೆಗೆ ಕರೆದರೂ ಆರಾಮವಾಗಿ ಹೋಗಿ ಏನಿದೆಯೋ ಅದನ್ನು ಹೇಳಿ ಬರುತ್ತೇನೆ. ಯಾವತ್ತಿದ್ದರೂ ಸತ್ಯ ಸತ್ಯವೇ ಆಗಿರುತ್ತದೆ ಎಂದರು.

ನನಗೆ ಗೊತ್ತಿಲ್ಲ: ಮುಡಾದಲ್ಲಿ ಶೇ.50:50 ಅನುಪಾತದಡಿ ನಿವೇಶನ ನೀಡಿರುವುದರಲ್ಲಿ ಲೋಪವಾಗಿದೆ ಎಂಬ ಶಾಸಕರುಗಳ ಹೇಳಿಕೆಗೆ ಪ್ರತಿಕ್ರಿಯಿಸಿದ ರಾಜೀವ್, ಇಂದು ಯಾರು, ಏನು ಹೇಳಿದ್ದಾರೆ ಎನ್ನುವುದರ ಬಗ್ಗೆ ಮಾತನಾಡುವುದಿಲ್ಲ. ನಾನು ಅಧ್ಯಕ್ಷನಾಗಿದ್ದಾಗ ಸಾಮಾನ್ಯ ಸಭೆಯ ವಿಷಯ ಏನಾಗಿತ್ತು ಎನ್ನುವುದನ್ನಷ್ಟೇ ಸ್ಪಷ್ಟಪಡಿಸುತ್ತಿದ್ದೇನೆ. ಅಂತಿಮವಾಗಿ ತೀರ್ಮಾನ ಮಾಡಬೇಕಿರುವುದು ನ್ಯಾಯಾಲಯವೇ ಹೊರತು ನೀವು–ನಾವಲ್ಲ. ಎಲ್ಲರ ಅಭಿಪ್ರಾಯವನ್ನೂ ನಿರ್ಧಾರ ಎನ್ನಲಾಗದು. ಅಂದು ಅಧಿಕಾರಿಗಳು ಕಾನೂನು ಪರವಾಗಿದೆ ಎಂದೇ ವಿಷಯ ಮಂಡಿಸಿರುವುದು. ಅಧಿಕಾರಿಗಳ ಸ್ಪಷ್ಟನೆ ಲಿಖಿತ ರೂಪದಲ್ಲಿದ್ದ ಕಾರಣ ಸಭೆಯಲ್ಲಿದ್ದವರೆಲ್ಲಾ ಒಮ್ಮತ ನೀಡಿರಬಹುದು. ಲವಲೇಶದಷ್ಟೂ ಕಾಯ್ದೆಗೆ ವಿರುದ್ಧವಾಗಿ ನಿರ್ಣಯ ತೆಗೆದುಕೊಳ್ಳಬೇಕೆಂಬುದು ಯಾವ ಸದಸ್ಯರ ಅಭಿಪ್ರಾಯವೂ ಆಗಿರಲಿಲ್ಲ. ಮಾಧ್ಯಮದಲ್ಲಿ ಪ್ರಸಾರವಾಗುವುದು, ತನಿಖಾ ಸಂಸ್ಥೆಗಳ ವರದಿ ಅಂತಿಮವಲ್ಲ. ಯಾವುದಾದರೂ ಪ್ರಕರಣಗಳಲ್ಲಿ ಕಾನೂನು ವ್ಯಾಪ್ತಿಯನ್ನು ಮೀರಿ, ಕಾಯ್ದೆಗೆ ವಿರುದ್ಧವಾಗಿ ನಿರ್ಣಯ ತೆಗೆದುಕೊಂಡಿದ್ದರೆ ಅದು ವ್ಯತಿರಿಕ್ತವಾಗುತ್ತದೆ. ಲೋಪದೋಷಗಳ ಬಗ್ಗೆ ಗೊತ್ತಿರುವವರು ಹೇಳಿರಬಹುದು, ನನಗೆ ಗೊತ್ತಿಲ್ಲ. ನಾನ್ಯಾಕೆ ಹೇಳಲಿ. ಹಾಗೆ ಹೇಳಿದರೆ ಸಮಾಜಕ್ಕೆ ತಪ್ಪು ಸಂದೇಶ ಕೊಟ್ಟಂತಾಗುತ್ತದೆ ಎಂದು ಹೇಳಿದರು.

ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಕ್ಕೆ ಈ ಪ್ರಕರಣವನ್ನು ತಳುಕು ಹಾಕುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಹಾದಿ–ಬೀದಿ ಚರ್ಚೆಗಳು ಒಬ್ಬ ರಾಜಕೀಯ ವ್ಯಕ್ತಿಯ ರಾಜಕಾರಣವನ್ನು ತೀರ್ಮಾನ ಮಾಡುವುದಿಲ್ಲ ಎಂದರು.

ಮುಖ್ಯಮಂತ್ರಿ ಪತ್ನಿ ಎನ್ನುವುದೇ ತಿಳಿದಿರಲಿಲ್ಲ

ನಾನು ಪ್ರಾಧಿಕಾರದ ಸಭೆಯ ಅಧ್ಯಕ್ಷನಾಗಿದ್ದಾಗ ಆ ವಿಚಾರಕ್ಕೆ ಸಂಬಂಧಪಟ್ಟಂತೆ ಅಂದಿನ ವಿರೋಧ ಪಕ್ಷದ ನಾಯಕ, ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದೂರವಾಣಿ ಅಥವಾ ಬೇರೆ ಯಾವುದೇ ರೀತಿಯಲ್ಲಿ ನಮ್ಮೊಂದಿಗೆ ಮಾತನಾಡಿಲ್ಲ. ಪಾರ್ವತಿ ಅವರು ಅವರ ಮಡದಿ ಎನ್ನುವುದೇ ನಮ್ಮಗ್ಯಾರಿಗೂ ಗೊತ್ತಿರಲಿಲ್ಲ. ಹೀಗಿರುವಾಗ ಊಹಾತ್ಮಕವಾಗಿ ಆರೋಪ ಮಾಡಿದರೆ ಸಮಾಜದಲ್ಲಿ ತಪ್ಪು ಕಲ್ಪನೆ ಮೂಡುತ್ತದೆ. ಯಾರದೋ ಲೋಪಕ್ಕೆ ಮತ್ಯಾರಿಗೋ ಬರೆ ಹಾಕಲಾಗದು. ಆ ಸ್ಥಾನದಲ್ಲಿರುವವರಿಗೆ ನೋವಾಗುತ್ತದೆ. ಅವರನ್ನು ತೇಜೋವಧೆ ಮಾಡಲು, ಸ್ಥಾನದಿಂದ ಇಳಿಸಲು ಹೋರಾಟ ನಡೆಯುತ್ತಿದೆಯಾ ಅನ್ನಿಸುತ್ತದೆ. ಸಮಾಜದಲ್ಲಿ ತಪ್ಪು ಕಲ್ಪನೆ ಮೂಡದಂತೆ ನಡೆದುಕೊಳ್ಳುವುದು ಎಲ್ಲರ ಜವಾಬ್ದಾರಿ. ನ್ಯಾಯಾಲಯದ ತೀರ್ಪಿನ ನಂತರ ಎಲ್ಲವೂ ಗೊತ್ತಾಗುತ್ತದೆ ಎಂದು ಹೇಳಿದರು.



ಬಾಂಗ್ಲಾ ಹಿಂದೂಗಳ ರಕ್ಷಣೆಗೆ ಒತ್ತಾಯಿಸಿ ವಕೀಲರ ಪ್ರತಿಭಟನೆ



ಮೈಸೂರಿನ ನ್ಯಾಯಾಲಯದ ಎದುರಿನ ಗಾಂಧಿ ಪುತ್ಥಳಿ ಬಳಿ ಬುಧವಾರ ವಕೀಲರು ಪ್ರತಿಭಟನೆ ನಡೆಸಿದರು.

ಮೈಸೂರು, ಡಿ.4(ಪಿಎಂ)– ಬಾಂಗ್ಲಾ ದೇಶದಲ್ಲಿ ಹಿಂದೂಗಳಿಗೆ ರಕ್ಷಣೆ ನೀಡಬೇಕೆಂದು ಒತ್ತಾಯಿಸಿ ಮೈಸೂರು ವಕೀಲರ ಸಂಘದ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ನ್ಯಾಯಾಲಯದ ಎದುರಿನ ಗಾಂಧಿ ಪುತ್ಥಳಿ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಬಾಂಗ್ಲಾದ ಢಾಕಾದಲ್ಲಿ ಹಿಂದೂಗಳ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಗಿದೆ. ಕೇಂದ್ರ ಸರ್ಕಾರವು ಈ ಕೂಡಲೇ ಬಾಂಗ್ಲಾದಲ್ಲಿರುವ ನಮ್ಮ ದೇಶದ ರಾಯಭಾರಿಗಳ ಮೂಲಕ ಅಲ್ಲಿನ ಹಿಂದೂಗಳ ರಕ್ಷಣೆಗೆ ತ್ವರಿತ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ಹಿಂಸಾಚಾರ ನಡೆಸುತ್ತಿರುವವರನ್ನು ಬಂಧಿಸಿ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಬಾಂಗ್ಲಾದಲ್ಲಿ ಹಿಂದೂಗಳ ರಕ್ಷಣೆಗಾಗಿ ವಿಶ್ವ ಸಂಸ್ಥೆ ಮೇಲೆ ಒತ್ತಡ ಹೇರಬೇಕು ಎಂದು ಆಗ್ರಹಿಸಿದರು.

ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಉಪಾಧ್ಯಕ್ಷ ಚಂದ್ರಶೇಖರ್, ಮಾಜಿ ಅಧ್ಯಕ್ಷ ಎಸ್.ಆನಂದ್ ಕುಮಾರ್, ಮಾಜಿ ಕಾರ್ಯದರ್ಶಿ ಬಿ.ಶಿವಣ್ಣ, ಸಂಘದ ಹಿರಿಯ ಸದಸ್ಯರಾದ ಪ್ರದೀಪ್ ಬೆಡ್ಡನ್, ಶಿವಸ್ವಾಮಿ, ಮಹಿಳಾ ಜಂಟಿ ಕಾರ್ಯದರ್ಶಿ ವಿನೋದಾ, ವಕೀಲರಾದ ಜಗದೀಶ್, ಬಸವರಾಜು, ಗಂಗಾಧರ್‌ಗೌಡ, ಎ.ಜಿ.ತಮ್ಮಯ್ಯ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘಕ್ಕೆ ಅರುಣ್ ಕುಮಾರ್ ಅಧ್ಯಕ್ಷ



ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಶಾಲಾ ಶಿಕ್ಷಣ ಇಲಾಖೆಯ ಸಿ.ಬಿ.ಅರುಣ್‌ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.4(ಎಸ್‌ಪಿಎನ್)– 2024–29ನೇ ಸಾಲಿಗೆ ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ನೂತನ ಅಧ್ಯಕ್ಷರಾಗಿ ಶಾಲಾ ಶಿಕ್ಷಣ ಇಲಾಖೆಯ ಸಿ.ಬಿ.ಅರುಣ್‌ಕುಮಾರ್ 2 ಮತದ ಅಂತರದಿಂದ ರೋಚಕ ಗೆಲುವು ಸಾಧಿಸಿದ್ದಾರೆ.

2024ರಿಂದ 29ನೇ ಸಾಲಿಗೆ ರಾಜ್ಯ ಪರಿಷತ್ ಸ್ಥಾನಕ್ಕೆ ಮಾಲೇಗೌಡ ಆಯ್ಕೆಯಾಗಿದ್ದು, ಖಜಾಂಚಿ ಸ್ಥಾನಕ್ಕೆ ರೇಷ್ಮೆ ಇಲಾಖೆಯ ರವಿ ಆಯ್ಕೆಯಾಗಿದ್ದಾರೆ. ಮೈಸೂರು ನಗರ ಸೇರಿದಂತೆ ಎಲ್ಲಾ ತಾಲೂಕು ಅಧ್ಯಕ್ಷರು, ನಿರ್ದೇಶಕರು ಬೆಳಗ್ಗೆ 9ರಿಂದ ಸಂಜೆ 4ವರೆಗೆ 73 ಮಂದಿ ಮತದಾರರು ಮತ ಚಲಾಯಿಸಿದ್ದಾರೆ. 4 ಗಂಟೆಯಿಂದ ಮತ ಎಣಿಕೆ ನಡೆದು 5 ಗಂಟೆ ವೇಳೆ ಫಲಿತಾಂಶ ಹೊರಬಿದ್ದಿದೆ ಎಂದು ಜಿಲ್ಲಾ ಕಾರ್ಯದರ್ಶಿ ರೇವಣ್ಣ ಮೈಸೂರು ಮಿತ್ರನಿಗೆ ಮಾಹಿತಿ ನೀಡಿದರು.

ಜಯಪುರ ಸಮುದಾಯ ಆರೋಗ್ಯ ಕೇಂದ್ರದ ಪರಿಶೀಲನೆ



ಜಿಲ್ಲಾ ಆರೋಗ್ಯ ಇಲಾಖೆಯ ಡಾ.ಉಮೇಶ್, ಡಾ. ಉಜ್ಮಾ ಫಾತಿಮಾ, ನರ್ಸಿಂಗ್ ಆಫೀಸರ್ ಸುನೀತಾ ಅವರನ್ನೊಳಗೊಂಡ ತಂಡ ಬುಧವಾರ ಮೈಸೂರು ತಾಲೂಕು ಜಯಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಆಸ್ಪತ್ರೆಯ ಸ್ವಚ್ಛತೆ ಹಾಗೂ ಸಿಬ್ಬಂದಿಗಳ ಕಾರ್ಯವೈಖರಿಯನ್ನು ಪರಿಶೀಲನೆ ನಡೆಸಿತು. ಜಯಪುರ ಸಮುದಾಯ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಡಾ.ಜಿ ಗಾಯತ್ರಿ, ವೈದ್ಯರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಮೈಸೂರು, ಡಿ.4(ಎಸ್‌ಬಿಡಿ)– ಖದೀಮರು ಮನೆಯ ಬೀಗ ಮುರಿದು ಚಿನ್ನಾಭರಣ ಕಳವು ಮಾಡಿರುವ ಘಟನೆ ಮೈಸೂರಿನ ಇಲವಾಲದಲ್ಲಿ ನಡೆದಿದೆ.

ಇಲ್ಲಿನ ಬಿಜಿಎಸ್ ಬಡಾವಣೆ ನಿವಾಸಿ ಸುಶೀಲ ಅವರ ಮನೆಗೆ ನುಗ್ಗಿರುವ ಖದೀಮರು, ಸುಮಾರು 1.45 ಲಕ್ಷ ರೂ. ಬೆಲೆಯ 35 ಗ್ರಾಂ ಚಿನ್ನಾಭರಣವನ್ನು ಕಳವು ಮಾಡಿದ್ದಾರೆ. ಈ ಸಂಬಂಧ ಅವರ ಪುತ್ರ ಇಲವಾಲ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ. ನನ್ನ ತಾಯಿ ಸುಶೀಲ ಅವರಿಗೆ ವಾರದ ಹಿಂದೆ ಅಪಘಾತವಾಗಿ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಡಿ.2ರಂದು ಬೆಳಗ್ಗೆ ಮನೆಗೆ ಹೋಗಿ ಲೈಟ್‌ಗಳನ್ನು ಆಫ್ ಮಾಡಿಕೊಂಡು ನಾನು ಕುಟುಂಬದೊಂದಿಗೆ ವಾಸವಿರುವ ಕುವೆಂಪು ಬಡಾವಣೆ ನಿವಾಸಕ್ಕೆ ಹೋಗಿದ್ದೆ. ಮರುದಿನ ಬೆಳಗ್ಗೆ ತಾಯಿ ವಾಸವಿರುವ ಮನೆಗೆ ಬಂದಾಗ ಬಾಗಿಲು ಪಕ್ಕದ ಕಿಟಕಿ ಗಾಜು ಚೂರಾಗಿ ಬಿದ್ದಿತ್ತು. ಸೇಫ್ಟಿ ಡೋರ್ ಬೀಗವನ್ನು ಒಡೆದು, ಬಾಗಿಲನ್ನು ಮೀಟಲಾಗಿತ್ತು. ಒಳಹೋಗಿ ನೋಡಿದಾಗ ವಸ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿದ್ದವು. ಈ ಬಗ್ಗೆ ತಾಯಿಗೆ ತಿಳಿಸಿದಾಗ ಬೀರುವಿನಲ್ಲಿ ಚಿನ್ನಾಭರಣ ಇಟ್ಟಿದ್ದಾಗಿ ಹೇಳಿದರು. ಮತ್ತೆ ಮನೆಗೆ ಹೋಗಿ ಪರಿಶೀಲಿಸಿದಾಗ ಅವರಿಟ್ಟಿದ್ದ ಚಿನ್ನಾಭರಣ ಇರಲಿಲ್ಲ ಎಂದು ದೂರಿನಲ್ಲಿ ತಿಳಿಸಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ https://kppp.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2024-25/ IND1114	ಒಕ್ಕೂಟಕ್ಕೆ ಅಗತ್ಯವಿರುವ ಜಿ.ಡಿ.ಎಲ್, ಗೀ ಪೆಟ್ ಜಾರ್ ಲೇಬಲ್ಸ್ ಇನ್ ರೋಲ್ಸ್ ಮತ್ತು ಬ್ಯಾರಿಯರ್ ಫಿಲ್ಮ್ ರೋಲ್ಸ್‌ಗಳನ್ನು ಖರೀದಿಸುವ ಬಗ್ಗೆ.	18.12.2024 ಸಂಜೆ 5.00 ಗಂಟೆಯವರೆಗೆ
2	KMF/2024-25/ SE2963	ಮೆಗಾ ಡೇರಿಯ SCADA PLC ಉನ್ನತೀಕರಣ ಮತ್ತು ಕರ್ಡ್ ಪ್ಯಾಕಿಂಗ್ ಲೈನ್ ವಿಸ್ತರಣೆಯನ್ನು ಎಲ್ಲಾ ಪರಿಕರಗಳೊಂದಿಗೆ ಟರ್ನ್‌ಕೀ ಆಧಾರದಲ್ಲಿ ಸೇವೆ ಪಡೆಯುವ ಬಗ್ಗೆ.	18.12.2024 ಸಂಜೆ 5.00 ಗಂಟೆಯವರೆಗೆ
3	KMF/2024-25/ IND1113	ಒಕ್ಕೂಟಕ್ಕೆ ಅಗತ್ಯವಿರುವ ದಿನಸಿ ಸಾಮಗ್ರಿಗಳನ್ನು ಅರ್ಧ ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ, ಹರಳುಪ್ಪನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಮತ್ತು ಇಂಕ್ ಕನ್ಸ್ಯೂಮೆಬಲ್ಸ್‌ಗಳನ್ನು ದ್ವೈವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	18.12.2024 ಸಂಜೆ 5.00 ಗಂಟೆಯವರೆಗೆ
4	KMF/2024-25/ IND1133	ಒಕ್ಕೂಟಕ್ಕೆ ಅಗತ್ಯವಿರುವ ಕಾಸ್ಟಿಕ್ ಸೋಡಾ ಲೈ ಅನ್ನು ದ್ವೈವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಮತ್ತು ಟ್ಯಾಂಕರ್ ಸೀಲ್‌ಗಳನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	18.12.2024 ಸಂಜೆ 5.00 ಗಂಟೆಯವರೆಗೆ
5	KMF/2024-25/ IND1122	ಒಕ್ಕೂಟಕ್ಕೆ ಅಗತ್ಯವಿರುವ ಕಡಲೆಬೇಳೆ ಮತ್ತು ಸ್ಟಾಟಿಕ್–50 ಅನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸಲು ಹಾಗೂ ಮೈಸೂರ್ ಪಾಕ್ ವ್ಯಾಟ್ ಅನ್ನು ಖರೀದಿಸಿ ಅಳವಡಿಸುವ ಬಗ್ಗೆ.	18.12.2024 ಸಂಜೆ 5.00 ಗಂಟೆಯವರೆಗೆ
6	KMF/2024-25/ IND1137	ಗೋಡೆ ಜಾಹಿರಾತು ಮತ್ತು ನಂದಿನಿ ಕ್ಷೀರ ಕೇಂದ್ರ/ ಫ್ರಾಂಚೈಸಿ ಮಳಿಗೆಗಳಿಗೆ ಬ್ರಾಂಡಿಂಗ್ ಕೆಲಸವನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ವಹಿಸಿಕೊಡುವ ಬಗ್ಗೆ.	18.12.2024 ಸಂಜೆ 5.00 ಗಂಟೆಯವರೆಗೆ
7	KMF/2024-25/ IND1135	ಒಕ್ಕೂಟಕ್ಕೆ ಅಗತ್ಯವಿರುವ ಗೀ ಕರ್ಟನ್ಸ್‌ಗಳನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	18.12.2024 ಸಂಜೆ 5.00 ಗಂಟೆಯವರೆಗೆ
8	KMF/2024-25/ IND1136	ಒಕ್ಕೂಟಕ್ಕೆ ಅಗತ್ಯವಿರುವ ಪನ್ನೀರ್ ಕರ್ಟನ್ಸ್ ಮತ್ತು ಗೀ ಪೆಟ್ ಜಾರ್ ವ್ಯಾಡ್ಸ್‌ಗಳನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	18.12.2024 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು, (7411654265) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಸಹಕಾರ ಕ್ಷೇತ್ರದ ಅಭಿವೃದ್ಧಿಯಿಂದ ರೈತರ ಅಭಿವೃದ್ಧಿ

ಕೆ.ಆರ್.ಪೇಟೆಯಲ್ಲಿ ಕೆ.ಎನ್.ಕೆಂಗೇಗೌಡ ಸಹಕಾರ ಭವನ, ಗೋದಾಮು ಉದ್ಘಾಟಿಸಿದ ಸಿಎಂ ಸಿದ್ದರಾಮಯ್ಯ

● ಬಡವರ ಅಭಿವೃದ್ಧಿಯೂ ಕೂಡ ಅಭಿವೃದ್ಧಿಯೇ ● ಜೆಡಿಪಿಯಲ್ಲಿ ಕರ್ನಾಟಕ ನಂಬರ್ ಒನ್ ● ಸಹಕಾರ ಸಂಘದಲ್ಲಿ ಹೆಗ್ಗಣಗಳಿದ್ದರೆ ಅಭಿವೃದ್ಧಿ ಅಸಾಧ್ಯ

ಕೆ.ಆರ್.ಪೇಟೆ,ಡಿ.4– ದೇಶದಲ್ಲಿ ಸಹಕಾರ ಕ್ಷೇತ್ರ ಅಭಿವೃದ್ಧಿ ಹೊಂದಿದರೆ ರೈತರ ಅಭಿವೃದ್ಧಿ ಸಾಧ್ಯ ಎಂದು ಪ್ರತಿಪಾದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರೈತರಿಗೆ ತಾವೇ ಬೆಳೆದ ಕೃಷಿ ಉತ್ಪನ್ನಗಳಿಗೆ ತಾವೇ ಬೆಲೆ ನಿಗದಿಪಡಿಸುವಂತಹ ಸಾಮರ್ಥ್ಯ ಬರಬೇಕು. ರೈತರು ಈ ನಿಟ್ಟಿನಲ್ಲಿ ಸಾಗಬೇಕು ಎಂದರು.

ಪಟ್ಟಣದ ಹೇಮಾವತಿ ಬಡಾವಣೆಯಲ್ಲಿ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ನೂತನವಾಗಿ ನಿರ್ಮಿಸಿರುವ ಕೆ.ಎನ್.ಕೆಂಗೇಗೌಡ ಸಹಕಾರ ಭವನ ಹಾಗೂ ಪಡಿತರ ದಾಸ್ತಾನು ಗೋದಾಮನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ನೂತನವಾಗಿ ನಿರ್ಮಿಸಿರುವ ಕೆ.ಎನ್.ಕೆಂಗೇಗೌಡ ಸಹಕಾರ ಭವನ ಹಾಗೂ ಪಡಿತರ ದಾಸ್ತಾನು ಗೋದಾಮನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಒಬ್ಬ ಮುಖ್ಯಮಂತ್ರಿ ಜವಾಬ್ದಾರಿಯುತವಾಗಿ ಕೆಲಸವನ್ನು ಮಾಡಿದರೆ ಬಡಜನರು ನೆಮ್ಮದಿಯಿಂದ ಇರಲು ಸಾಧ್ಯ. ಬಡವರಿಗೆ ನೀಡುವ ಸವಲತ್ತುಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ ಟೀಕಿಸಬಾರದು. ಬಡವರ ಅಭಿವೃದ್ಧಿಯೂ ಕೂಡಾ ರಾಜ್ಯದ ಅಭಿವೃದ್ಧಿಯೆ. ಒಂದು ಕುಟುಂಬಕ್ಕೆ ನಮ್ಮ ಸರಕಾರ ಅನ್ನಭಾಗ್ಯ, ಶಕ್ತಿ, ಗೃಹಲಕ್ಷ್ಮಿ, ಯುವನಿಧಿ, ಗೃಹಜ್ಯೋತಿ ಕಾರ್ಯಕ್ರಮಗಳ ಮೂಲಕ ಸಾವಿರಾರು ರೂಪಾಯಿಗಳು ನೇರವಾಗಿ ಯಾವುದೆ ಮಧ್ಯವರ್ತಿಯ ನೆರವಿಲ್ಲದೆ ತಲುಪುತ್ತಿದೆ ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯ ಜಿಡಿಪಿಯಲ್ಲಿ ನಂಬರ್ ಒನ್ ಸ್ಥಾನದಲ್ಲಿದೆ. ನಮ್ಮ ಸರಕಾರದಲ್ಲಿ ಅಭಿವೃದ್ಧಿಗೆ ಹಣವಿಲ್ಲ ಎಂದು ಟೀಕಿಸುವ ವಿರೋಧ ಪಕ್ಷಗಳಿಗೆ ನಮ್ಮ ಪ್ರಗತಿಯಿಂದಲೇ ಉತ್ತರವನ್ನು ನೀಡಿದ್ದೇವೆ. ರಾಜ್ಯದಲ್ಲಿ ಎಲ್ಲಾ ಭಾಗಗಳಲ್ಲಿಯೂ ಉತ್ತಮವಾಗಿ ಮಳೆ ಬಂದಿದೆ. ಇದರಿಂದಾಗಿ ರಸ್ತೆಗಳು ಹಾಳಾಗಿವೆ ಎಂಬ ದೂರುಗಳಿವೆ. ಕೆ.ಆರ್.ಪೇಟೆ ತಾಲೂಕಿನ ರಸ್ತೆ ಅವಸ್ಥೆಗಳ ಬಗೆಗೂ ಶಾಸಕ ಮಂಜು ಮಾತನಾಡಿದ್ದಾರೆ. ಕೆ.ಆರ್.ಪೇಟೆ ತಾಲೂಕಿನ ರಸ್ತೆಗಳು ಮತ್ತು ಒಡೆದು ಹೋಗಿರುವ ಕೆರೆಗಳ ಅಭಿವೃದ್ಧಿಗೆ ಅಗತ್ಯ ಅನುದಾನ ನೀಡುವ ಭರವಸೆ ನೀಡಿದರು.

ಜೊತೆಗೆ ರಾಜ್ಯದ ಎಲ್ಲಾ ಭಾಗಗಳಿಗೂ ರಸ್ತೆಯ ಅಭಿವೃದ್ಧಿಗೆ ಹಣಕಾಸು ನೆರವನ್ನು ಒದಗಿಸುತ್ತೇನೆ. ನನಗೆ ಪಕ್ಷಭೇದವಿಲ್ಲ. ರಾಜ್ಯದ ಜನರು ನೆಮ್ಮದಿಯಿಂದ ಇರಬೇಕು ಅಷ್ಟೆ ನಮ್ಮ ಪಕ್ಷದ ಅಭಿವೃದ್ಧಿಯ ಅಜೆಂಡಾವನ್ನು ವಿರೋಧಿಗಳು ಟೀಕಿಸುವುದನ್ನು ಬಿಟ್ಟು ಸಕಾರಾತ್ಮಕವಾಗಿ ಸ್ಪಂದಿಸಬೇಕು ಎಂದು ಮುಖ್ಯಮಂತ್ರಿಗಳು ಮನವಿ ಮಾಡಿದರು.

ರೈತರು ಬೆಳೆದ ಬೆಳೆಗಳಿಗೆ ರೈತನೇ ಬೆಲೆ ನಿಗದಿಪಡಿಸುವಂತಾಗಬೇಕು. ಪಡಿತರ ಚೀಟಿ ಬಡವರಿಗೆ ಮಾತ್ರ ಸಿಗಬೇಕು. ಅರ್ಹರಲ್ಲದವರಿಗೆ ಬಿಪಿಎಲ್ ಕಾರ್ಡ್ ಸಿಗಬಾರದು. ಶ್ರೀಮಂತರಿಗೆ, ಟ್ಯಾಕ್ಸ್ ಕಟ್ಟುವವರಿಗೆ ಇರುವ ಬಿಪಿಎಲ್ ಕಾರ್ಡ್ ಇದ್ದರೆ ವಾಪಸ್ ಪಡೆಯುವಂತೆ ಮಾತ್ರ ಆದೇಶ ನೀಡಲಾಗಿದೆ ಎಂದು ಬಿಪಿಎಲ್ ಕಾರ್ಡ್ ರದ್ದು ವಿವಾದಕ್ಕೆ ಸ್ಪಷ್ಟನೆ ನೀಡಿದರು.

ತಾಲೂಕಿನ ಸಹಕಾರ ಸಂಘಗಳಲ್ಲಿ ಒಳ್ಳೆಯ ನಾಯಕತ್ವ ಇರುವುದು ಕಾಣುತ್ತಿದೆ. ಕಿಕ್ಕೇರಿ ಸಹಕಾರ ಸಂಘವು 26ಕೋಟಿಯಷ್ಟು ಸ್ವಂತ ಬಂಡವಾಳವನ್ನು ಹೊಂದಿದೆ ಎಂದು ತಿಳಿದು ಸಂತೋಷವಾಯಿತು. ಕೆ.ಆರ್.ಪೇಟೆಯ ಕಸಬಾ ಹಾಗೂ ಹೊಸಹೊಳಲು ಸಹಕಾರ ಸಂಘಗಳು ಕೂಡಾ ಉತ್ತಮವಾಗಿ ಕೆಲಸ ಮಾಡುತ್ತಿವೆ. ಇದರಿಂದಾಗಿ ಮೂರು ಸಂಘಗಳು ಅಭಿವೃದ್ಧಿಯ ದಿಕ್ಕಿನಲ್ಲಿ ಸಾಗುತ್ತಿವೆ. ಸಹಕಾರ ಸಂಘಗಳು ಅಭಿವೃದ್ಧಿ ಹೊಂದಬೇಕು. ಹೆಗ್ಗಣಗಳು ಸೇರಿಕೊಂಡರೆ ಅಭಿವೃದ್ಧಿ ಕಷ್ಟ ಎಂದು ಅವರು ಮಾರ್ಮಿಕವಾಗಿ ನುಡಿದರು.

ಮನ್‌ಮುಲ್ ಕೂಡಾ ಪ್ರಾತಿಯ ಹಾದಿಯಲ್ಲಿದೆ ಇಲ್ಲಿನ ಹಾಲನ್ನು ದೆಹಲಿಯಲ್ಲಿ ಮಾರಾಟ ಮಾಡಲು ಯೋಜನೆ ರೂಪಿಸಲಾಗಿದೆ. ಇದು ಯಶಸ್ವಿಯಾದರೆ ಹೈನುಗಾರಿಕೆ ನಿರತ ಲಕ್ಷಾಂತರ ರೈತರಿಗೆ ಅನುಕೂಲವಾಗಲಿದೆ. 5ಲಕ್ಷದವರೆಗೆ ಶೂನ್ಯ ಬಡ್ಡಿ ಸಾಲ ನೀಡಲಾಗುತ್ತಿದೆ. 5ಲಕ್ಷದಿಂದ 15ಲಕ್ಷದವರೆಗೆ ಶೇ3 ಬಡ್ಡಿ ದರದಲ್ಲಿ ಸಾಲ ನೀಡುತ್ತಿದ್ದೇವೆ. ಇದು ರೈತಪರವಾದ ಆಡಳಿತವನ್ನು ನೀಡುತ್ತಿರುವ ಸರಕಾರ. ಅದಕ್ಕೆ ವಿರೋಧ ಪಕ್ಷಗಳಿಗೆ ಭಯ ಬಂದಿರುವುದು ಎಂದು ಸಿದ್ದರಾಮಯ್ಯ ಛೇಡಿಸಿದರು.

ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಒಂದು ಸಹಕಾರಿ ಸಂಸ್ಥೆ ಸುಮಾರು 50 ವರ್ಷಗಳ ಕಾಲ ಸೇವೆ ಸಲ್ಲಿಸಿರುವುದೇ ದೊಡ್ಡ ಸಾಧನೆ, ಈ ನಗರದಲ್ಲಿ 50ರ ಹಿಂದೆಯೇ ಸ್ಥಾಪಿತವಾದ ಸಹಕಾರಿ ಸಂಸ್ಥೆಯು ತನ್ನ ಸ್ವಂತ ಹಣದಿಂದಲೇ ನಿವೇಶನವನ್ನು ಖರೀದಿಸಿ ಕೊಟ್ಟು ಹೋಗಿರೋ ಕೆಂಗೇಗೌಡರ ಸ್ಮರಣಾರ್ಥವಾಗಿ ಕಟ್ಟಡ ನಿರ್ಮಿಸಿರೋದು ಸಹಕಾರಿ ಸಂಸ್ಥೆಗಳು ಅವರಿಗೆ ನೀಡಿರುವ ಗೌರವ ಎಂದರು.

ಸಹಕಾರ ಸಚಿವ ಕೆ.ಎನ್.ರಾಜಣ್ಣ ಮಾತನಾಡಿ, 50 ವರ್ಷದ ಹಿಂದೆ ಸ್ಥಾಪಿತವಾದ ಸಹಕಾರ ಸಂಸ್ಥೆ ಸ್ವಂತ ಹಣದಲ್ಲಿ ನಿವೇಶನ ಖರೀದಿಸಿದೆ. ಒಂದು ಸಹಕಾರಿ ಸಂಸ್ಥೆ 50 ವರ್ಷದ ಸೇವೆಯೇ ದೊಡ್ಡ ಸಾಧನೆ ಎಂದು.


ಶಾಸಕ ಹೆಚ್.ಟಿ.ಮಂಜು ಮಾತನಾಡಿ ನಮ್ಮ ತಾಲೂಕಿನಲ್ಲಿ ಇತ್ತೀಚೆಗೆ ಕುಂಭದ್ರೋಣ ಮಳೆಯಿಂದ ರಸ್ತೆಗಳು ಮಂಡಿಯುದ್ದ ಗುಂಡಿ ಬಿದ್ದಿವೆ. ಸೇತುವೆಗಳು, ಕೆರೆಕಟ್ಟೆಗಳು ಶಿಥಿಲಗೊಂಡಿವೆ ಹಾಗಾಗಿ ಕೂಡಲೆ ಅಗತ್ಯ ಅನುದಾನಕೊಡಬೇಕು. ಜಿಲ್ಲೆಯ ಏಕೈಕ ಜೆಡಿಎಸ್ ಶಾಸಕ ಎಂದು ಕಡೆಗಣಿಸಬಾರದು ಎಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು.

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ. ಪುರುಷೋತ್ತಮ್ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೆ.ಬಿ. ಚಂದ್ರಶೇಖರ್, ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್. ದೇವರಾಜು, ಮಂಡ್ಯ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗಿಗೌಡ, ಉಪಾಧ್ಯಕ್ಷ ಅಶೋಕ್, ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಂಜನಾ ಶ್ರೀಕಾಂತ್, ಕೆಪಿಸಿಸಿ ಸದಸ್ಯ ಕಿಕ್ಕೇರಿ ಸುರೇಶ್, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸುರೇಶ್, ಕಾರ್ಯದರ್ಶಿ ಶಶಿಧರ್, ತಾಲೂಕು ಕಾಂಗ್ರೆಸ್ ಅಧ್ಯಕ್ಷ ಬಿ. ನಾಗೇಂದ್ರ ಕುಮಾರ್, ವಿಶ್ವನಾಥ್, ತಾಲೂಕು ಕಾಂಗ್ರೆಸ್ ಮುಖಂಡರಾದ ವಿಜಯ್ ರಾಮೇಗೌಡ, ಎಂ.ಡಿ.ಕೃಷ್ಣಮೂರ್ತಿ, ಕೋಡಿಮಾರನಹಳ್ಳಿ ದೇವರಾಜು, ಅಗಸರಹಳ್ಳಿ ಗೋವಿಂದರಾಜು, ಎಂ.ಜೆ.ಶಶಿಧರ್, ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಆರ್. ರವೀಂದ್ರಬಾಬು, ಮುಡಾ ಮಾಜಿ ಅಧ್ಯಕ್ಷ ಕೆ.ಶ್ರೀನಿವಾಸ್ ಉಪಸ್ಥಿತರಿದ್ದರು.

ಮೈಸೂರು ಲ್ಯಾಂಪ್ಸ್ ಮಾಜಿ ಅಧ್ಯಕ್ಷ ಬಿ.ಎಲ್.ದೇವರಾಜು ಸ್ವಾಗತಿಸಿದರು. ಸಂಘದ ಸಿಇಓ ಬಿ.ಎನ್.ಕಾಂತರಾಜು ವಂದಿಸಿದರು. ಭವಾನಿ ಲೋಕೇಶ್ ಕಾರ್ಯಕ್ರಮ ನಿರೂಪಿಸಿದರು.

ನಾಲ್ಕು ದೇವಸ್ಥಾನಗಳಲ್ಲಿ ಕಳವು



ನಾಗಮಂಗಲ: ತಾಲೂಕಿನ ದೇವಲಾಪುರ ಹೋಬಳಿಯ ದೇವರ ಮಲ್ಲನಾಯಕನಹಳ್ಳಿ ಗ್ರಾಮದಲ್ಲಿ ಸೋಮವಾರ ರಾತ್ರಿ ಕಳ್ಳರು ನಾಲ್ಕು ದೇವಸ್ಥಾನಗಳಲ್ಲಿ ಕಳ್ಳತನ ಮಾಡಿದ್ದು, 9 ಲಕ್ಷಕ್ಕೂ ಹೆಚ್ಚು ರೂ ಮೌಲ್ಯದ ಬೆಳ್ಳಿ ಪದಾರ್ಥಗಳು ಮತ್ತು ದೇವರ ಚಿನ್ನದ ಒಡವೆಗಳನ್ನು ಕಳವು ಮಾಡಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ದೇವರ ಮಲ್ಲನಾಯಕನಹಳ್ಳಿ ಗ್ರಾಮದ ಪಡಲದಮ್ಮ ದೇವಸ್ಥಾನ, ಮಸಲಿಕಮ್ಮ ದೇವಸ್ಥಾನ, ಹೊನ್ನಾದೇವಿ ಮತ್ತು ಲಕ್ಷ್ಮೀದೇವಿ ದೇವಸ್ಥಾನಗಳಲ್ಲಿ ಬೀಗ ಮುರಿದು ಒಳ ನುಗ್ಗಿರುವ ಕಳ್ಳರು ದೇವರ ತಾಳಿ, ಎರಡು ಬೆಳ್ಳಿ ಕಿರೀಟ, ಎರಡು ಬೆಳ್ಳಿ ಛತ್ರಿ, ಎರಡು ಮುಖ ಸಿಂಗಾರ, ಏಳು ಕಳಸ, ಒಂದು ಕೆಜಿ ಮೌಲ್ಯದ ಮುಖ ಸಿರಿ ಇನ್ನು ಹಲವಾರು ಬೆಳ್ಳಿ ಮತ್ತು ಚಿನ್ನದ ಒಡವೆಗಳನ್ನು ಕದ್ದು ಪರಾರಿಯಾಗಿದ್ದಾರೆ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಪಿಎಸ್‌ಐ ಜೊತೆ ರೌಡಿಶೀಟರ್‌ಗಳ ಫೋಟೋಗೆ ಟೀಕೆ



ಶ್ರೀರಂಗಪಟ್ಟಣ,ಡಿ.4– ಕೆಆರ್‌ಎಸ್ ಪಿಎಸ್‌ಐ ಜೊತೆಗೆ ಇಬ್ಬರು ರೌಡಿಶೀಟರ್‌ಗಳು ಕಾರ್ಯಕ್ರಮವೊಂದರಲ್ಲಿ ಫೋಟೋಗೆ ಫೋಸ್ ನೀಡಿದ್ದು, ಈ ಫೋಟೋಗಳು ಇದೀಗ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಸಾರ್ವಜನಿಕ ವಲಯದಲ್ಲಿ ವ್ಯಾಪಕ ಟೀಕೆಗೆ ಒಳಗಾಗುತ್ತಿದೆ.

ಕೆಆರ್‌ಎಸ್ ಠಾಣೆಯ ಪಿಎಸ್‌ಐ ರಮೇಶ್ ಕರ್ಕಿಕಟ್ಟೆ ರೌಡಿಶೀಟರ್‌ಗಳ ಜೊತೆ ಫೋಟೋ ತೆಗೆಸಿಕೊಂಡಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಇತ್ತೀಚೆಗೆ ತಾಲೂಕಿನ ಬೆಳಗೊಳ ಗ್ರಾಮದ ಹಿರಿದೇವಮ್ಮ ಜಾತ್ರೆಯಲ್ಲಿ ನಡೆದ ಕುಸ್ತಿ ಪಂದ್ಯಾವಳಿಯಲ್ಲಿ ಕುಸ್ತಿಪಟುಗೆ ಪಿಎಸ್‌ಐ ರಮೇಶ್ ಬಹುಮಾನ ನೀಡುವಾಗ ರೌಡಿಶೀಟರ್‌ಗಳು ನಿಂತಿದ್ದು, ಫೋಟೋ ತೆಗೆಸಿಕೊಂಡ ಬಳಿಕ ಅದನ್ನು ಸಾಮಾಜಿಕ ಜಾಲತಾಣಕ್ಕೆ ಅವರೇ ಹಾಕಿಕೊಂಡಿದ್ದಾರೆ. ಇವರ ಹಿನ್ನೆಲೆ ಪಿಎಸ್‌ಐಗೆ ಗೊತ್ತಿರಲಿಲ್ಲವೇ ಎಂಬ ಪ್ರಶ್ನೆ ವ್ಯಕ್ತವಾಗಿದೆ.

ಏಕೆಂದರೆ ಪಿಎಸ್‌ಐ ಜೊತೆಗೆ ಪೋಸ್ ಕೊಟ್ಟ ರೌಡಿಶೀಟರ್ 20ಕ್ಕೂ ಹೆಚ್ಚು ಪ್ರಕರಣದಲ್ಲಿ ಭಾಗಿಯಾಗಿರುವ ನಟೋರಿಯಸ್ ರೌಡಿಶೀಟರ್‌ಗಳಾಗಿದ್ದಾರೆ. ಗೂಂಡಾ ಕಾಯ್ದೆ ಪಟ್ಟಿಯಲ್ಲಿರುವ ಇವರ ಮೇಲೆ ಕೆಆರ್‌ಎಸ್ ಠಾಣೆ ಮಾತ್ರವಲ್ಲದೇ ಬೆಂಗಳೂರು, ಮೈಸೂರು ಸೇರಿ ಹಲವೆಡೆ ಕೇಸ್‌ಗಳನ್ನು ಹೊಂದಿದ್ದಾರೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ.

ಪದೇ ಪದೆ ಯಡವಟ್ಟು: ಕೆಆರ್‌ಎಸ್ ಠಾಣೆ ಪೊಲೀಸರಿಂದ ಪದೇ ಪದೆ ಯಡವಟ್ಟುಗಳಾಗುತ್ತಿದ್ದು, ಈ ಮೊದಲು ಪೊಲೀಸರ ಯಡವಟ್ಟಿನಿಂದ ಸಚಿವರಿಂದಲೇ ರೌಡಿಶೀಟರ್ ಒಬ್ಬನಿಗೆ ಸನ್ಮಾನ ನಡೆದಿತ್ತು. ಡಿಸಿ, ಎಸ್ಪಿ ಸಮ್ಮುಖದಲ್ಲೇ ರೌಡಿ ಶೀಟರ್ ಒಬ್ಬನಿಗೆ ದಸರಾ ಕಾರ್ಯಕ್ರಮದಲ್ಲಿ ಸಚಿವ ಚಲುವರಾಯಸ್ವಾಮಿ ಸನ್ಮಾನ ಮಾಡಿದ್ದರು.

ಕಾಡಾನೆಗಳ ಕಾರ್ಯಾಚರಣೆ: ಸಾರ್ವಜನಿಕರಿಗೆ ಸೂಚನೆ



ಮಂಡ್ಯ,ಡಿ.4– ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಕುರುಬರಹಳ್ಳಿ ಬೆಳತೂರು, ಸಂಗಾಪುರ, ಕಲ್ಲಹಳ್ಳಿ, ಭುವರಾಹನಾಥಸ್ವಾಮಿ ದೇವಸ್ಥಾನ, ಮಾವಿನಕೆರೆ ಗ್ರಾಮಗಳ ಸುತ್ತಮುತ್ತ ಕಾಡಾನೆಗಳು ಕಾಣಿಸಿಕೊಂಡಿದ್ದು ಕಾವೇರಿ ಹಿನ್ನೀರಿನ ಪ್ರದೇಶದಲ್ಲಿ ಬೀಡು ಬಿಟ್ಟಿವೆ. ಈ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸಲು ಮಂಡ್ಯ ಅರಣ್ಯ ವಿಭಾಗದ ಕೆ.ಆರ್.ಪೇಟೆ ವಲಯ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು, ಕೆ.ಆರ್.ನಗರ ವಲಯದ ಸಿಬ್ಬಂದಿಗಳು ಹಾಗೂ ಆನೆ ಕಾರ್ಯಪಡೆ, ಮೈಸೂರು ಜಿಲ್ಲೆ ಹುಣಸೂರು ಸಿಬ್ಬಂದಿಗಳು ಕಾರ್ಯಾಚರಣೆ ನಿರ್ವಹಿಸುತ್ತಿರುತ್ತಾರೆ.

ಸಾರ್ವಜನಿಕರು ಕಾಡಾನೆಗಳ ಹತ್ತಿರ ಹೋಗುತ್ತಿರುವುದು, ಕೂಗಾಡುವುದು, ಪಟಾಕಿ ಸಿಡಿಸುವುದು, ಗಾಬರಿಗೊಳಿಸುವುದು, ಕಾಡಾನೆಗಳ ಛಾಯಾಚಿತ್ರಗಳನ್ನು ತೆಗೆಯುವುದು ಮುಂತಾದ ಚಟುವಟಿಕೆಗಳಿಂದ ಕಾಡಾನೆಗಳು ವಿಚಲಿತಗೊಂಡು ದಿಕ್ಕುತಪ್ಪುವ ಸಾಧ್ಯತೆ ಇರುತ್ತದೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುವ ಸಾಧ್ಯತೆ ಇದ್ದು, ಸದರಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವವರೆಗೂ ಸಾರ್ವಜನಿಕರು ಅರಣ್ಯ ಇಲಾಖೆಯವರಿಗೆ ಸಹಕರಿಸಬೇಕೆಂದು ಮಂಡ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರನೇ ಪುಟದಿಂದ

ಗೌಡರ ನೆಲದಲ್ಲಿ ಸಿದ್ದರಾಮಯ್ಯ ಸದ್ದು

ಪ್ರತಿಕ್ರಿಯಿಸಿದ್ದು ತಾವು ಸಮಾವೇಶದಿಂದ ದೃತಿಗೆಡುವುದಿಲ್ಲ. 2028ರ ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಶಕ್ತಿ ತೋರಿಸುತ್ತೇವೆ ಎಂದಿದ್ದಾರೆ.ಹಾಸನದ ಅರಸೀಕೆರೆ ರಸ್ತೆಯಲ್ಲಿರುವ ಎಸ್.ಎಂ. ಕೃಷ್ಣ ಕ್ರೀಡಾಂಗಣ ದಲ್ಲಿ ಬೃಹತ್ ವೇದಿಕೆಗಳು ನಿರ್ಮಾಣವಾಗಿವೆ. ಈ ಸಮಾವೇಶಕ್ಕಾಗಿ 3 ವೇದಿಕೆಗಳನ್ನು ನಿರ್ಮಿಸಿರುವುದು ವಿಶೇಷ. ಬೃಹತ್ ಮುಖ್ಯ ವೇದಿಕೆಗೆ ಬಲ ಹಾಗೂ ಎಡಬದಿಗಳಲ್ಲಿ 2 ವೇದಿಕೆಗಳನ್ನು ನಿರ್ಮಿ ಸಲಾಗಿದೆ. ಮುಖ್ಯ ವೇದಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಸೇರಿದಂತೆ ಕಾಂಗ್ರೆಸ್‌ನ ಹಿರಿಯ ಮುಖಂಡರು ಹಾಗೂ ಸಚಿವರಿಗೆ ಮೀಸಲಿಟ್ಟಿದ್ದರೆ, ಬಲ ಹಾಗೂ ಎಡ ಬದಿಯಲ್ಲಿರುವ ವೇದಿಕೆಗಳನ್ನು ಪಕ್ಷಾತೀತವಾಗಿರುವ ಅಹಿಂದ ಸೇರಿದಂತೆ ಇತರ ಸಂಘಟನೆಗಳಿಗೆ ಮೀಸಲಿರಿಸಲಾಗಿದೆ. ಈ ಸಂಘಟನೆಗಳ ಪ್ರಮುಖರಿಗೆ ಮಾತ್ರ ಮುಖ್ಯ ವೇದಿಕೆಯಲ್ಲಿ ಸ್ಥಳಾವಕಾಶ ಕಲ್ಪಿಸಲಾಗಿದ್ದು, ಇತರರಿಗೆ ಇತರೆ 2 ವೇದಿಕೆಗಳಲ್ಲಿ ಸ್ಥಳಾವಕಾಶ ಕಲ್ಪಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಭಾರೀ ಪೆಂಡಾಲ್: ಕ್ರೀಡಾಂಗಣದಲ್ಲಿ ವಾಟರ್ ಪ್ರೂಫ್ ಪೆಂಡಾಲ್ ನಿರ್ಮಿಸಲಾಗಿದ್ದು, 70 ಸಾವಿರ ಕುರ್ಚಿಗಳನ್ನು ಹಾಕಲಾಗಿದೆ. ಮಹಿಳೆಯರಿಗಾಗಿ ಪ್ರತ್ಯೇಕ ಸ್ಥಳವನ್ನು ಕಾದಿರಿಸಲಾಗಿದೆ. ಅಲ್ಲದೇ, ವೇದಿಕೆಯ ಮುಂಭಾಗದಲ್ಲಿ ಗಣ್ಯ ವ್ಯಕ್ತಿಗಳಿಗೆ ಆಸನಗಳನ್ನು ಮೀಸಲಿರಿಸಲಾಗಿದೆ. ಸಮಾವೇಶಕ್ಕೆ ಆಗಮಿಸುವವರ ಊಟದ ವ್ಯವಸ್ಥೆ ಜವಾಬ್ದಾರಿಯನ್ನು ಆಯಾ ವಿಧಾನಸಭಾ ಕ್ಷೇತ್ರದ ಶಾಸಕರಿಗೆ, ಶಾಸಕರಿಲ್ಲದ ಕಡೆ ಪಕ್ಷದ ಅಧ್ಯಕ್ಷರಿಗೆ ವಹಿಸಲಾಗಿದೆ ಎಂದು ಹೇಳಲಾಗಿದೆ.

ಹಾಸನ ನಗರ ಮತ್ತು ಸಂಪರ್ಕ ರಸ್ತೆಗಳಲ್ಲಿ ಕಾಂಗ್ರೆಸ್‌ನ ಬ್ಯಾನರ್ ಹಾಗೂ ಫ್ಲೆಕ್ಸ್‌ಗಳು ರಾರಾಜಿಸುತ್ತಿವೆ. ಸಿದ್ದರಾಮಯ್ಯ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಡಿ.ಕೆ. ಶಿವಕುಮಾರ್ ಭಾವಚಿತ್ರಗಳು ಎಲ್ಲಾ ಫ್ಲೆಕ್ಸ್ ಮತ್ತು ಕಟೌಟ್‌ಗಳಲ್ಲಿ ಇದ್ದು, ಉಳಿದಂತೆ ಇನ್ನಿತರ ಕಟೌಟ್ ಹಾಗೂ ಫ್ಲೆಕ್ಸ್‌ಗಳಲ್ಲಿ ಈ ಗಣ್ಯರ ಜೊತೆ ಸಚಿವರು ಹಾಗೂ ಶಾಸಕರ ಭಾವಚಿತ್ರಗಳಿವೆ. ಸಮಾವೇಶಕ್ಕೆ ಜನರನ್ನು ಕರೆತರಲು ಒಟ್ಟಾರೆ 2790 ಕೆಎಸ್‌ಆರ್‌ಟಿಸಿ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಹಾಸನ ಜಿಲ್ಲೆಗೆ ಅತೀ ಹೆಚ್ಚು, ಅಂದರೆ 1500 ಬಸ್‌ಗಳನ್ನು ಬುಕ್ ಮಾಡಲಾಗಿದ್ದು, ಉಳಿದಂತೆ ಮೈಸೂರಿಗೆ 750, ಚಾಮರಾಜನಗರಕ್ಕೆ 300, ಚಿಕ್ಕಮಗಳೂರಿಗೆ 200 ಮತ್ತು ಮಂಡ್ಯಕ್ಕೆ 40 ಬಸ್‌ಗಳನ್ನು ಬುಕ್ ಮಾಡಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಮೂಲಗಳು ತಿಳಿಸಿವೆ.

ಬೆಂಬಲಿಗರ ಬಣ್ಣನೆ: ಹಳೇ ಮೈಸೂರು ಭಾಗದ ಎಲ್ಲಾ ಜಿಲ್ಲೆಗಳಿಂದಲೂ ಸುಮಾರು 2 ಲಕ್ಷ ಜನರನ್ನು ಸೇರಿಸಿ ಸಮಾವೇಶ ಮಾಡಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಹೇಳಿದರೆ, ಕಾಂಗ್ರೆಸ್ ಕಾರ್ಯಕರ್ತರು ಮಾತ್ರವಲ್ಲದೇ, ಸಿದ್ದರಾಮಯ್ಯ ಅಭಿಮಾನಿಗಳು ಹಾಗೂ ಅಹಿಂದ ವರ್ಗದವರು ಸಮಾವೇಶಕ್ಕೆ ಆಗಮಿಸುತ್ತಿದ್ದಾರೆ. ತುಮಕೂರಿನಿಂದಲೂ ಜನರು ಬರುವ ಸಾಧ್ಯತೆ ಇದೆ ಎಂದು ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ತಿಳಿಸಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದೇ ಹಾಸನಕ್ಕೆ ಭೇಟಿ ನೀಡಿ, ಸಮಾವೇಶದ ಅಂತಿಮ ಸಿದ್ಧತೆಗಳನ್ನು ವೀಕ್ಷಿಸಿದರು. ಸಮಾವೇಶಕ್ಕಾಗಿ ಭಾರೀ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದ್ದು, ಐವರು ಎಸ್ಪಿಗಳು, 6 ಹೆಚ್ಚುವರಿ ಎಸ್ಪಿಗಳು, 12 ಡಿವೈಎಸ್ಪಿ, 40 ಪೊಲೀಸ್ ಇನ್‌ಸ್ಪೆಕ್ಟರ್, 80 ಸಬ್ ಇನ್‌ಸ್ಪೆಕ್ಟರ್ ಒಳಗೊಂಡಂತೆ ಸುಮಾರು 2000 ಪೊಲೀಸರನ್ನು ನಿಯೋಜಿಸಲಾಗಿದೆ. ಬಂದೋಬಸ್ತ್‌ಗಾಗಿ ಹಾಸನ ಜಿಲ್ಲೆ ಮಾತ್ರವ ಲ್ಲದೇ, ನೆರೆಯ ಮೈಸೂರು, ಮಂಡ್ಯ, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಿಂದ ಹೆಚ್ಚುವರಿ ಪೊಲೀಸರನ್ನು ಕರೆಸಲಾಗಿದ್ದು, ಇಂದೇ ಹಾಸನಕ್ಕೆ ಆಗಮಿಸಿರುವ ಪೊಲೀಸರನ್ನು ಸಮಾವೇಶ ನಡೆಯುವ ಕ್ರೀಡಾಂಗಣ ಸೇರಿದಂತೆ ವಿವಿಧೆಡೆ ನಿಯೋಜಿಸಲಾಗಿದೆ.

700 ಕೋಟಿ ಅವ್ಯವಹಾರ

ಮುಡಾ ಅಕ್ರಮವಾಗಿ ಮಂಜೂರು ಮಾಡಿ 700 ಕೋಟಿ ರೂ.ಗಳಷ್ಟು ಅವ್ಯವಹಾರಕ್ಕೆ ಕಾರಣವಾಗಿದೆ ಎಂದು ಲೋಕಾಯುಕ್ತಕ್ಕೆ ಇ.ಡಿ. ಮಾಹಿತಿ ನೀಡಿದೆ.

ಈ ಮಧ್ಯೆ, ಇ.ಡಿ. ಹಾಗೂ ಲೋಕಾಯುಕ್ತ ಪ್ರತ್ಯೇಕವಾಗಿ ನಡೆಸಿರುವ ತನಿಖಾ ವರದಿಯಲ್ಲಿ ಮೇಲ್ನೋಟಕ್ಕೆ ಭಿನ್ನತೆ ಕಂಡು ಬರುತ್ತಿದೆ. ಲೋಕಾಯುಕ್ತವು ನ್ಯಾಯಾಲಯಕ್ಕೆ ತನ್ನ ವರದಿ ಸಲ್ಲಿಸುವ ಮುನ್ನ ಇ.ಡಿ. ನೀಡಿರುವ ಮಾಹಿತಿಯನ್ನು ಪರಿಗಣಿಸುವುದೇ, ಇಲ್ಲವೇ ಎಂಬುದು ಈಗಿನ ಕುತೂಹಲಕಾರಿ ಅಂಶ.

ರಾಜಕೀಯ ದುರುದ್ದೇಶವಿದೆ...

ಮಾಡಿರುವುದರ ಹಿಂದಿನ ಉದ್ದೇಶ ರಾಜ್ಯದ ಜನರಿಗೆ ಅರ್ಥವಾಗುತ್ತದೆ. ಜೊತೆಗೆ ಈ ಬಗ್ಗೆ ಪ್ರಚಾರ ಮಾಡುವ ಅಧಿಕಾರ ಇಡಿಗೆ ಇಲ್ಲ ಎಂದರು. ಮಂತ್ರಿ ಮಂಡಲ ಪುನಾರಚನೆ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಿಎಂ, ಮಂತ್ರಿಮಂಡಲ ಪುನರ್‌ರಚನೆ ಮಾಡುತ್ತೇವೆಂದು ನಾನು ಹೇಳಿದ್ದೇನೆಯೇ, ನೀವೇ ನಿಮ್ಮ ಪಾಡಿಗೆ ನೀವು ಕಲ್ಪಿಸಿಕೊಂಡು ಸುದ್ದಿ ಮಾಡಿ, ಈಗ ನನ್ನ ಬಳಿ ಉತ್ತರ ಕೇಳಿದರೆ ಹೇಗೆ. ಈ ಬಗ್ಗೆ ಹೈಕಮಾಂಡ್ ಕೂಡ ಸೂಚನೆ ಕೊಟ್ಟಿಲ್ಲ ಎಂದು ಹೇಳಿದರು.

ಸಮಾವೇಶ ಹೆಸರೇನು ಬದಲಾಗಿಲ್ಲ: ಹಾಸನ ಕಾರ್ಯಕ್ರಮದ ಹೆಸರು ಬದಲಾಗಿಲ್ಲ. ನಾಳೆ ಹಾಸನದಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಸ್ವಾಭಿಮಾನಿ ಒಕ್ಕೂಟದ ಜಂಟಿ ಆಶ್ರಯದಲ್ಲಿ ಕಾರ್ಯಕ್ರಮ ನಡೆಯುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸ್ವಾಭಿಮಾನಿ ಒಕ್ಕೂಟದ ಜನ ಬರಲಿದ್ದಾರೆ. ಹಾಸನ ಕಾರ್ಯಕ್ರಮದ ಹೆಸರೇನು ಬದಲಾಗಿಲ್ಲ. ಸ್ವಾಭಿಮಾನಿ ಸಮಾವೇಶವೇ ಕಾಂಗ್ರೆಸ್ ಪಕ್ಷದ ವತಿಯಿಂದ ನಡೆಯುತ್ತಿದ್ದು, ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಒಪ್ಪಂದವಾಗಿಲ್ಲ: ನನ್ನ ಮತ್ತು ಹೈಕಮಾಂಡ್ ನಡುವೆ ಒಪ್ಪಂದವಾಗಿದೆ. ಅದು ಸಮಯ ಬಂದಾಗ ಗೊತ್ತಾಗಲಿದೆ ಎಂದು ರಾಷ್ಟ್ರೀಯ ಸುದ್ದಿವಾಹಿನಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆನ್ನಲಾದ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, ನಮ್ಮ ಹಾಗೂ ಹೈಕಮಾಂಡ್ ನಡುವೆ ಯಾವ ಒಪ್ಪಂದವೂ ಆಗಿಲ್ಲ. ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆಯೋ ಆ ಪ್ರಕಾರ ನಾವು ನಡೆದುಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು.

ಸಂಪುಟ ವಿಸ್ತರಣೆ ಸದ್ಯಕ್ಕಿಲ್ಲ: ಸಚಿವ ಸಂಪುಟ ವಿಸ್ತರಣೆ ಬಗ್ಗೆ ನಾನು ಎಲ್ಲಿಯೂ ಹೇಳಿಲ್ಲ. ಸಚಿವ ಸ್ಥಾನಕ್ಕೆ ಹಲವು ಶಾಸಕರು ಬೇಡಿಕೆ ಇಡುತ್ತಾರೆಂಬುದು ಮುಖ್ಯವಲ್ಲ. ಈ ಬಗ್ಗೆ ಅಂತಿಮವಾಗಿ ಹೈಕಮಾಂಡ್ ಸೂಚಿಸಬೇಕು. ನಾನು ತೀರ್ಮಾನ ಮಾಡಬೇಕು. ಹೀಗಾಗಿ ಸಂಪುಟ ವಿಸ್ತರಣೆ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ ಎಂದು ತಿಳಿಸಿದರು.

ನಂದಿನಿ ಉತ್ಪನ್ನಕ್ಕೆ ಬೇಡಿಕೆ ಇದೆ: ನಂದಿನಿ ಹಾಲು, ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿದೆ. ಹಸುವಿನ ಹಾಲನ್ನು ನಂದಿನಿ ಮೂಲಕ ನೀಡುತ್ತಿದ್ದು, ಈ ಹಾಲಿಗೆ ಕೇವಲ ರಾಜ್ಯ ಮಾತ್ರವಲ್ಲದೇ ದೆಹಲಿ ಸೇರಿ ಹಲವೆಡೆ ಬೇಡಿಕೆ ಇದೆ. ಆ ಬೇಡಿಕೆಗನುಗುಣವಾಗಿ ಹಾಲು ಪೂರೈಕೆ ಮಾಡುತ್ತಿದ್ದೇವೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಸಹಕಾರ ಸಚಿವ ಕೆ.ಎನ್.ರಾಜಣ್ಣ, ಮಾಜಿ ಶಾಸಕ ಕೆ.ಬಿ. ಚಂದ್ರಶೇಖರ್, ಹಿರಿಯ ಮುಖಂಡ ಬಿ.ಎಲ್.ದೇವರಾಜು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಸೇರಿದಂತೆ ಹಲವು ಮಂದಿ ಈ ವೇಳೆ ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಸಿಎಂ ಗಾದಿ ಬಿಡಲ್ಲ

ಸಾಕ್ಷೀಕರಿಸುತ್ತಿತ್ತು. ಇದರ ಆಧಾರದ ಮೇಲೆ ಉಚ್ಚ ನ್ಯಾಯಾಲಯ ರಾಜ್ಯಪಾಲರ ಪ್ರಾಸಿಕ್ಯೂಷನ್ ಅನುಮತಿಯ ನಿರ್ಧಾರವನ್ನು ಎತ್ತಿ ಹಿಡಿದು, ತನಿಖೆಗೆ ಮುಕ್ತ ಅವಕಾಶ ಕಲ್ಪಿಸಿ ಕೊಟ್ಟಿತ್ತು. ಮುಡಾಗೆ ಸಾವಿರಾರು ಕೋಟಿ ರೂ ನಷ್ಟವಾಗಿರುವುದನ್ನು ಅಂದಿನ ಜಿಲ್ಲಾಧಿಕಾರಿಗಳೇ ಸರ್ಕಾರಕ್ಕೆ ಪತ್ರ ಬರೆದು ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ದಾಖಲಾದ ದೂರನ್ನು ಆಧರಿಸಿ ಜಾರಿ ನಿರ್ದೇಶನಾಲಯವು (ಇಡಿ)ನಡೆಸುತ್ತಿರುವ ತನಿಖೆ ವಾಸ್ತವ ಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತಿದೆ. ಇದರ ವಾಸನೆಯನ್ನು ಅರಿತೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾಂಗ್ರೆಸ್ ಹೈಕಮಾಂಡ್ ಬೆದರಿಸಲು ಹಾಸನದಲ್ಲಿ ಸ್ವಾಭಿಮಾನಿ ಸಮಾವೇಶ ನಡೆಸಲು ಹೊರಟಿದ್ದರು.

ಕಾಂಗ್ರೆಸ್ ವರಿಷ್ಠರಿಗೂ ಮುಖ್ಯಮಂತ್ರಿಗಳು ಭಂಡತನದಿಂದ ಅಧಿಕಾರದಲ್ಲಿ ಮುಂದುವರೆಯುವುದು ಬೇಕಿಲ್ಲ. ಈ ಕಾರಣಕ್ಕಾಗಿಯೇ ಹಾಸನದ ಸಿದ್ದರಾಮಯ್ಯನವರ ಸ್ವಪ್ರತಿಷ್ಠೆಯ ಸ್ವಾಭಿಮಾನಿ ಸಮಾವೇಶಕ್ಕೆ ಕಡಿವಾಣ ಹಾಕಿದ್ದಾರೆ. ಲೋಕಾಯುಕ್ತದ ತನಿಖೆಯ ದಿಕ್ಕು ಅನುಮಾನ ಮೂಡಿಸಿರುವ ನಡುವೆ ಜಾರಿ ನಿರ್ದೇಶನಾಲಯದಿಂದ ಹೊರಬಂದಿರುವ ವರದಿ ಮುಖ್ಯಮಂತ್ರಿಗಳ ಮುಖವಾಡ ಬಯಲು ಮಾಡಿದೆ ಎಂದು ಅವರು ಹೇಳಿದ್ದಾರೆ.

ಇಂದು ಪ್ರಮಾಣವಚನ

ಉಪಸ್ಥಿತರಿದ್ದರು. ಬಿಜೆಪಿ ತನ್ನ ಮಹಾರಾಷ್ಟ್ರ ಶಾಸಕಾಂಗ ಪಕ್ಷದ ಸಭೆಗೆ ನಿರ್ಮಲಾ ಸೀತಾರಾಮನ್ ಮತ್ತು ವಿಜಯ್ ರೂಪಾನಿ ಅವರನ್ನು ಕೇಂದ್ರ ವೀಕ್ಷಕರನ್ನಾಗಿ ನೇಮಿಸಿತ್ತು.

ಮಹಾಯುತಿ ಮೈತ್ರಿಕೂಟ ನಾಯಕರು ಇಂದು ಮಧ್ಯಾಹ್ನ ರಾಜ್ಯಪಾಲ ಸಿಪಿ ರಾಧಾಕೃಷ್ಣನ್ ಅವರನ್ನು ಭೇಟಿ ಮಾಡಿ ರಾಜ್ಯದಲ್ಲಿ ಸರ್ಕಾರ ರಚಿಸಲು ಹಕ್ಕು ಮಂಡಿಸಿದ್ದಾರೆ. ನವೆಂಬರ್ 20ರಂದು ನಡೆದ ಮಹಾರಾಷ್ಟ್ರ ಚುನಾವಣೆಯಲ್ಲಿ ಬಿಜೆಪಿ ಗಮನಾರ್ಹ ಯಶಸ್ಸನ್ನು ಸಾಧಿಸಿದೆ.

ಅನುದಾನಿತ ಶಾಲಾ–ಕಾಲೇಜು ಪಿಂಚಣಿ ವಂಚಿತರ ಬೇಡಿಕೆಗೆ ಎಂಎಲ್‌ಸಿ ವಿವೇಕಾನಂದ ಬೆಂಬಲ



ಅನುದಾನಿತ ಶಾಲಾ–ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ಪದಾಧಿಕಾರಿಗಳು, ವಿಧಾನಪರಿಷತ್ ಸದಸ್ಯ ವಿವೇಕಾನಂದ ಅವರಿಗೆ ವಿವಿಧ ಬೇಡಿಕೆಯ ಮನವಿ ಸಲ್ಲಿಸಿದರು.

ಮೈಸೂರು, ಡಿ.4 (ಎಸ್‌ಪಿಎನ್)– ಅನುದಾನಿತ ಶಾಲಾ–ಕಾಲೇಜು ನೌಕರರ ವಿವಿಧ ಬೇಡಿಕೆ ಗಳನ್ನು ಈಡೇರಿಸುವಂತೆ ಒತ್ತಾಯಿಸಿ ಬೆಳಗಾವಿಯ ಸುವರ್ಣಸೌಧದ ಎದುರು ಡಿ.12ರಂದು ಅನುದಾನಿತ ಶಾಲಾ–ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘ ಧರಣಿ ನಡೆಸಲು ತೀರ್ಮಾನಿಸಿದೆ.

ಈಗಾಗಲೇ ರಾಜ್ಯ ಸರ್ಕಾರ ಚುನಾವಣಾ ಪೂರ್ವದಲ್ಲಿ ಪ್ರಣಾಳಿಕೆಯಲ್ಲಿ ಭರವಸೆ ನೀಡಿರುವಂತೆ ರಾಜ್ಯದ ಅನುದಾನಿತ ಹಾಗೂ ಸರ್ಕಾರಿ ನೌಕರರಿಗೆ ಎನ್‌ಪಿಎಸ್ ರದ್ದುಗೊಳಿಸಿ (ಹಳೆಯ ನಿಶ್ಚಿತ ಪಿಂಚಣಿ) ಒಪಿಎಸ್ ಜಾರಿಗೊಳಿಸುವುದು. 1.4.2006ರ ಪೂರ್ವದಲ್ಲಿ ನೇಮಕವಾದ ಅನುದಾನಿತ ನೌಕರರಿಗೆ ಹಿಂದಿನ ಸೇವೆಯನ್ನು ಪರಿಗಣಿಸಬೇಕು. ಇದಕ್ಕೆ ಅಡ್ಡಿಯಾಗಿರುವ 2014ರ ಕಾಯ್ದೆಗೆ ತಿದ್ದುಪಡಿ ತರಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಓಪಿಎಸ್ ಜಾರಿ ವಿಳಂಬವಾದಲ್ಲಿ ಸರ್ಕಾರಿ ನೌಕರರಿಗೆ ನೀಡುತ್ತಿರುವ ಎನ್‌ಪಿಎಸ್ ಯೋಜನೆಯನ್ನು ಯಥಾವತ್ ಜಾರಿಗೊಳಿಸುವುದು. ಕಳೆದ 22 ವರ್ಷಗಳಿಂದ ಅನುದಾನಿತ ಶಾಲಾ–ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು. ಸರ್ಕಾರಿ ಸೌಲಭ್ಯ ಒದಗಿಸುವ ವಿಚಾರದಲ್ಲಿ ಸರ್ಕಾರಿ ಶಾಲಾ–ಕಾಲೇಜು ಮತ್ತು ಅನುದಾನಿತ ಶಾಲಾ–ಕಾಲೇಜು ವಿದ್ಯಾರ್ಥಿಗಳೆಂಬ ತಾರತಮ್ಯ ಮಾಡಬಾರದು ಎಂದು ಅನುದಾನಿತ ಶಾಲಾ–ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಳಗಾವಿ ಸುವರ್ಣಸೌಧದ ಎದುರು ರಾಜ್ಯ ಅನುದಾನಿತ ಶಾಲಾ–ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘ ಹಮ್ಮಿಕೊಂಡಿರುವ ಪ್ರತಿಭಟನೆಗೆ ವಿಧಾನ ಪರಿಷತ್ ಸದಸ್ಯ ವಿವೇಕಾನಂದ ಬೆಂಬಲ ಸೂಚಿಸಿ, ಸದನದಲ್ಲೂ ಅನುದಾನಿತ ಶಾಲಾ ಕಾಲೇಜು ನೌಕರರ ಬೇಡಿಕೆಗಳ ಈಡೇರಿಕೆಗೆ ಸರ್ಕಾರದ ಗಮನ ಸೆಳೆಯುವುದಾಗಿ ಪದಾಧಿಕಾರಿಗಳಿಗೆ ಭರವಸೆ ನೀಡಿದ್ದಾರೆ.

ಎಂಎಲ್‌ಸಿ ವಿವೇಕಾನಂದ ಅವರಿಂದ ಕೃತಜ್ಞತಾ ಸಭೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಪಾಂಡವಪುರ ತಾಲೂಕಿನಲ್ಲಿ ಆಯೋಜಿಸಲಾಗಿದ್ದ ಕೃತಜ್ಞತಾ ಸಭೆಯಲ್ಲಿ ಭಾಗಿಯಾಗಿ, ತಾಲೂಕಿನ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು, ಪ್ರೌಢಶಾಲೆಯ ಮುಖ್ಯೋಪಾಧ್ಯರು ಹಾಗೂ ಶಿಕ್ಷಕರಿಗೆ ಧನ್ಯವಾದ ತಿಳಿಸಿದ್ದಲ್ಲದೇ ಅವರ ಕುಂದು ಕೊರತೆಯನ್ನು ಆಲಿಸಿದರು. ಈ ಕಾರ್ಯಕ್ರಮದಲ್ಲಿ ಪಾಂಡವಪುರ ತಾಲೂಕು ಉಪನ್ಯಾಸಕರ ಸಂಘದ ಅಧ್ಯಕ್ಷ ರಾಮಕೃಷ್ಣೇಗೌಡ, ಮಂಡ್ಯ ಜಿಲ್ಲಾ ಉಪನ್ಯಾಸಕರ ಸಂಘದ ಅಧ್ಯಕ್ಷ ಚನ್ನಕೃಷ್ಣ, ಕೆ.ಆರ್.ಪೇಟೆ ತಾಲೂಕು ಉಪನ್ಯಾಸಕರ ಸಂಘದ ಅಧ್ಯಕ್ಷ ಮಂಜುನಾಥ್ ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಭೀಮಜ್ಯೋತಿ ಮೆರವಣಿಗೆ, ಮನೆ ಮನೆ ಧಮ್ಮ ದೀಪೋತ್ಸವ



ಮೈಸೂರು, ಡಿ. 4–ಅಂಬೇಡ್ಕರ್ ಹಿತ ರಕ್ಷಣಾ ಸಮಿತಿ ಹಾಗೂ ಪಡುವಾರಹಳ್ಳಿ ಗ್ರಾಮಸ್ಥರು ಡಾ.ಬಿ.ಆರ್.ಅಂಬೇಡ್ಕರ್‌ರವರ 68ನೇ ಪರಿನಿಬ್ಬಾಣದ ಅಂಗವಾಗಿ ಡಿ.6ರಂದು ಭೀಮಜ್ಯೋತಿ ಮೆರವಣಿಗೆ, ಮನೆ ಮನೆ ಧಮ್ಮ ದೀಪೋತ್ಸವ ಕಾರ್ಯ ಕ್ರಮ ಹಮ್ಮಿಕೊಂಡಿದ್ದಾರೆ. ಡಿ.6ರಂದು ಸಂಜೆ 7.30 ಗಂಟೆಗೆ ಮಾತೃಮಂಡಳಿ ಶಾಲೆಯ ಹತ್ತಿರದ ಡಾ.ಬಿ.ಆರ್.ಅಂಬೇಡ್ಕರ್ ಆಟೋ ನಿಲ್ದಾಣ ವೃತ್ತದಿಂದ ಭೀಮ ಜ್ಯೋತಿ ಮೆರವಣಿಗೆಯು ಪ್ರಾರಂಭವಾಗ ಲಿದೆ ಎಂದು ಪ್ರಕಟಣೆ ತಿಳಿಸಿದೆ.

ಡಿ.7ರಿಂದ ಮೈಸೂರಲ್ಲಿ 'ಬಾಂಧವ್ಯ' ಕ್ರೀಡಾ ಮಹೋತ್ಸವ

ಮೈಸೂರು, ಡಿ.4(ಜಿಎ)–ಮೈಸೂರಿನ ರೋಟರಿ ಮಿಡ್‌ಟೌನ್ ವತಿಯಿಂದ ಡಿ.7, 8ರಂದು ಭಿನ್ನ ಸಾಮರ್ಥ್ಯದ ಮಕ್ಕಳಿಗಾಗಿ 'ಬಾಂಧವ್ಯ' ಕ್ರೀಡಾ ಮಹೋತ್ಸವವನ್ನು ಆಯೋಜಿಸಲಾಗಿದೆ ಎಂದು ಸಂಚಾಲಕ ಅಯ್ಯಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದಲ್ಲಿ ವಿಶೇಷಚೇತನ ಮಕ್ಕಳು ಕಲಿಯುತ್ತಿರುವ ಸುಮಾರು 16 ಶಾಲೆಗಳ ಸುಮಾರು 500 ಮಕ್ಕಳು ಕ್ರೀಡಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಡಿ.7ರಂದು ಬೆಳಗ್ಗೆ 9ಗಂಟೆಗೆ ಮೈಸೂರು ವಿವಿ ಓವಲ್ ಮೈದಾನದಲ್ಲಿ ಆರಂಭವಾಗುವ ಕ್ರೀಡಾ ಮಹೋತ್ಸವದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಉದ್ಯಮಿ ಅರ್ಜುನ್ ರಂಗ, ರೋಟೇರಿಯನ್ ಡಾ.ಕೆ.ಎ.ಪ್ರಹ್ಲಾದ್ ಆಗಮಿಸಲಿದ್ದಾರೆ.

ಡಿ.8ರಂದು ಸಂಜೆ 4.30ಕ್ಕೆ ದ್ವಾರಕಾ ನಗರದಲ್ಲಿರುವ ಮಾನಸ ಕುಟೀರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ನಟ ಧರ್ಮ ಕೀರ್ತಿರಾಜ್, ಕರ್ನಾಟಕ ಸಂಗೀತ ವಿದ್ವಾಂಸ ರಜತ್ ಶರ್ಮ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಈ ವೇಳೆ ಕ್ಲಬ್ ಅಧ್ಯಕ್ಷ ಕುಮಾರಸ್ವಾಮಿ, ವಿಲ್ಸನ್, ನಾಗರಾಜ್, ವೆಂಕಟೇಶ್, ರವೀಂದ್ರ ಬಾಬು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮೈಸೂರಲ್ಲಿ ಸ್ಟೆಮ್ ಆವಿಷ್ಕಾರ್ ಸಂಸ್ಥೆ ಆರಂಭ

ರೋಬೋಟಿಕ್ಸ್, ಕೃತಕ ಬುದ್ಧಿ ಶಕ್ತಿ, ಡ್ರೋನ್ ತಂತ್ರಜ್ಞಾನದ ಮೂಲಕ ಸಿದ್ಧ ಕೌಶಲದ ಶಿಕ್ಷಣ



ಮೈಸೂರಿನ ಚಾಮರಾಜಪುರಂನಲ್ಲಿರುವ ಸ್ಟೆಮ್ ಆವಿಷ್ಕಾರ್ ಸಂಸ್ಥೆ ಆವರಣದಲ್ಲಿರುವ ರೋಬೋಟಿಕ್ಸ್, ಡ್ರೋನ್ ಸೇರಿದಂತೆ ಇತರೆ ತಂತ್ರಜ್ಞಾನದ ಉಪಕರಣಗಳ ಕುರಿತು ವಿವರಿಸಿದರು.

ಮೈಸೂರು, ಡಿ.4(ಜಿಎ)–ಅತ್ಯಾಧುನಿಕ ಕೌಶಲ ಪ್ರಯೋಗಾಲಯಗಳ ಮೂಲಕ ಶಾಲಾ ಮಕ್ಕಳಿಗೆ ರೋಬೋಟಿಕ್ಸ್, ಕೃತಕ ಬುದ್ಧಿ ಶಕ್ತಿ ಮತ್ತು ಡ್ರೋನ್ ತಂತ್ರಜ್ಞಾನ ಸೇರಿದಂತೆ ವಿಶೇಷ ವಿನ್ಯಾಸದಿಂದ ಸಿದ್ಧ ಕೌಶಲದ ಶಿಕ್ಷಣ ನೀಡಲು ಮೈಸೂರಿನಲ್ಲಿ ಸ್ಟೆಮ್ ಆವಿಷ್ಕಾರ್ ಸಂಸ್ಥೆ ಆರಂಭಿಸಲಾಗಿದೆ ಎಂದು ಸಂಸ್ಥೆಯ ಸಿಇಓ ಡಾ.ಶಿವಣ್ಣ ತಿಳಿಸಿದರು.

ಮೈಸೂರಿನ ಚಾಮರಾಜಪುರಂನಲ್ಲಿರುವ ಸಂಸ್ಥೆ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ನೂತನವಾಗಿ ಅಳವಡಿಸಿರುವ ನೂತನ ಶಿಕ್ಷಣ ನೀತಿ(ಎನ್‌ಇಪಿ)ಗೆ ಅನುಗುಣವಾಗಿ ಮುಂದಿನ ದಿನಗಳಲ್ಲಿ ಎಲ್ಲಾ ಶಾಲೆಗಳಲ್ಲಿ ಕೌಶಲ ಪ್ರಯೋಗಾಲಯಗಳನ್ನು ನಿರ್ಮಿಸಬೇಕಾಗಿದ್ದು, ಇಂತಹ ಶಾಲೆಗಳಿಗೆ ನಾವು ಸಾಥ್ ನೀಡುತ್ತೇವೆ ಎಂದರು.

ನಮ್ಮ ಸಂಸ್ಥೆಯಲ್ಲಿ ರೋಬೋಟಿಕ್ಸ್, ಕೃತಕ ಬುದ್ಧಿಶಕ್ತಿ, ಅಂತರ್ಜಾಲದ ವಿಷಯಗಳು, ಡ್ರೋನ್ ತಂತ್ರಜ್ಞಾನ, ವರ್ಧಿತ ವಾಸ್ತವಿಕತೆ, ವರ್ಚುವಲ್ ವಾಸ್ತವಿಕತೆ ಮತ್ತು 3ಡಿ ಮುದ್ರಣದಂತಹ ಸುಧಾರಿತ ತಂತ್ರಜ್ಞಾನಗಳ ಅಳವಡಿಸಿದ್ದು, ಸಂಸ್ಥೆಯಲ್ಲಿ ನುರಿತ ಇಂಜಿನಿಯರ್‌ಗಳಿದ್ದು, ಅವರು ಮಕ್ಕಳಿಗೆ ಅವಶ್ಯವಿರುವ ತಂತ್ರಜ್ಞಾನದ ಬಗ್ಗೆ ತಿಳಿಸಿಕೊಡಲಿದ್ದಾರೆ. ಅದರಂತೆ ಶಾಲೆಗಳ ಅವಶ್ಯಕತೆ ಅನುಗುಣವಾಗಿ ಸಂಸ್ಥೆಯಿಂದ ಅತ್ಯಾಧುನಿಕ ಕೌಶಲ ಪ್ರಯೋಗಾಲಯಗಳನ್ನು ರೂಪಿಸಿಕೊಡುತ್ತೇವೆ ಎಂದು ತಿಳಿಸಿದರು.

ಶಾಲೆಗಳಲ್ಲಿ ರೂಪಿಸುವ ಕೌಶಲ ಪ್ರಯೋಗಾಲಯಗಳ ಮೂಲಕ ವಿದ್ಯಾರ್ಥಿಗಳು ತಮ್ಮ ಕೌಶಲ ವೃದ್ಧಿಸಿಕೊಂಡರೆ ದೇಶದ ಅಭಿವೃದ್ಧಿಗೆ ಪ್ರಮುಖ ಪಾತ್ರವಹಿಸಿ, ಭವಿಷ್ಯದ ತಾಂತ್ರಿಕ ನಾಯಕನಾಗಲು ಸಹಕಾರಿಯಾಗಲಿದೆ. ಈಗಾಗಲೇ 5 ಶಾಲೆಗಳು ತಮ್ಮ ಶಾಲೆಗಳಲ್ಲಿ ಪ್ರಯೋಗಾಲಯಗಳನ್ನು ರೂಪಿಸಲು ಆಸಕ್ತಿ ತೋರಿದ್ದಾರೆ. ಈ ಬಾರಿಯ ಶೈಕ್ಷಣಿಕ ಅವಧಿ ಮುಗಿದ ನಂತರ ಇದನ್ನು ಸ್ಥಾಪಿಸಲಾಗುವುದು. ಹಾಗೇ ಕ್ರಿಸ್‌ಮಸ್ ರಜೆ ಸಂದರ್ಭದಲ್ಲಿ ಸಂಸ್ಥೆ ಆವರಣದಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ಕ್ಯಾಂಪ್ ನಡೆಸಿ ವಿಶೇಷ ಅನುಭವವನ್ನು ನೀಡಿ. ನಂತರ ಅವರಿಗೆ ಸ್ಪರ್ಧೆ ಏರ್ಪಡಿಸಲಾಗುತ್ತದೆ ಎಂದರು.

ಸರ್ಕಾರಿ, ಖಾಸಗಿ ಶಾಲಾ–ಕಾಲೇಜಿನಲ್ಲಿ ಕೌಶಲ ಪ್ರಯೋಗಾಲಯ ಸ್ಥಾಪಿಸಲು ಡಿಡಿಪಿಐ ಮತ್ತು ಡಿಡಿಪಿಯು ಅವರೊಟ್ಟಿಗೆ ಚರ್ಚಿಸಲು ನಿರ್ಧರಿಸಿದ್ದು, ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರು ಮತ್ತು ಉನ್ನತ ಶಿಕ್ಷಣ ಸಚಿವರೊಂದಿಗೆ ಚರ್ಚಿಸಲಾಗುತ್ತದೆ. ಸರ್ಕಾರಿ, ಖಾಸಗಿ ಶಾಲೆಗಳ ನಡುವೆ ಯಾವುದೇ ತಾರತಮ್ಯ ಮಾಡದೇ ಗುಣಮಟ್ಟದ ಪ್ರಯೋಗಾಲಯಗಳನ್ನು ಸ್ಥಾಪಿಸಿಕೊಡುತ್ತೇವೆ ಎಂದರು. ಗೋಷ್ಠಿಯಲ್ಲಿ ಸಂಸ್ಥೆಯ ಸಿಎಫ್‌ಓ ಕೆ.ದಶರಥ್, ದಿನೇಶ್ ಬೋಪ್ಪಣ್ಣ ಇದ್ದರು.

ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲಿನ ಹಲ್ಲೆ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ



ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಲ್ಲೆ ಖಂಡಿಸಿ ಮೈಸೂರಿನ ಕೋಟೆ ಆಂಜನೇಯಸ್ವಾಮಿ ಮುಂಭಾಗ ವಿವಿಧ ಹಿಂದೂಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಮೈಸೂರು, ಡಿ.4(ಜಿಎ)–ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಲ್ಲೆ ಖಂಡಿಸಿ ಮೈಸೂರಿನಲ್ಲಿ ವಿವಿಧ ಹಿಂದೂಪರ ಸಂಘಟನೆಗಳು ಬುಧವಾರ ಬೃಹತ್ ಪ್ರತಿಭಟನೆ ನಡೆಸಿದವು.


ಮೈಸೂರಿನ ಕೋಟೆ ಆಂಜನೇಯಸ್ವಾಮಿ ಮುಂಭಾಗ ಹಿಂದೂ ಹಿತರಕ್ಷಣಾ ಸಮಿತಿ ಕರೆ ನೀಡಿದ ಪ್ರತಿಭಟನೆಯಲ್ಲಿ ನಗರದ ಆರ್‌ಎಸ್‌ಎಸ್ ಶಾಖೆಯ ಪ್ರಮುಖರು, ಬಿಜೆಪಿ ಮುಖಂಡರು, ಕಾರ್ಯಕರ್ತರು ವಿವಿಧ ಹಿಂದೂಪರ ಸಂಘಟನೆಯ 400ಕ್ಕೂ ಹೆಚ್ಚು ಮಂದಿ ಜಮಾವಣೆಗೊಂಡು ಉಳಿಸಿ ಉಳಿಸಿ ಬಾಂಗ್ಲಾದೇಶದ ಹಿಂದೂಗಳನ್ನು ಉಳಿಸಿ, ಜೈ ಶ್ರೀರಾಮ್ ಎಂಬ ಘೋಷಣೆ ಕೂಗಿದರು.

ನಂತರ ಹಿಂದೂ ಹಿತರಕ್ಷಣಾ ಸಮಿತಿ ಸದಸ್ಯರು ಮನವಿ ಪತ್ರವನ್ನು ನಗರದ ಸಿದ್ಧಾರ್ಥ ಬಡಾವಣೆಯಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಅಪರ ಜಿಲ್ಲಾಧಿಕಾರಿ ಶಿವರಾಜು ಅವರಿಗೆ ಸಲ್ಲಿಸಿದರು.

ಈ ವೇಳೆ ಆರ್‌ಎಸ್‌ಎಸ್‌ನ ಪ್ರಮುಖರಾದ ಡಾ.ವಾಮನ್ ರಾವ್ ಬಾಪಟ್, ಎಂ.ವೆಂಕಟರಾಮ್, ಲೋಹಿತ್ ಅರಸ್, ತಿಲಕ್‌ಕುಮಾರ್, ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಬಿ.ಎಂ.ರಘು, ವಿಹೆಚ್‌ಪಿ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರ ಪಾಲ್ಗೊಂಡಿದ್ದರು.

ಹೆಬ್ಬಾಳು ಲೋಕನಾಯಕನಗರದ ಬಸವನಗುಡಿ ವೃತ್ತದಲ್ಲಿ

ಕುಸ್ತಿ ಪೈಲ್ವಾನರ ಪ್ರತಿಮೆ, ಸ್ವಾಗತ ಕಮಾನು ಉದ್ಘಾಟನೆ



ಮೈಸೂರಿನ ಹೆಬ್ಬಾಳು ಲೋಕನಾಯಕನಗರದ ಬಸವನಗುಡಿ ವೃತ್ತದಲ್ಲಿ ನಿರ್ಮಿಸಿರುವ ಕುಸ್ತಿ ಪೈಲ್ವಾನರ ಪ್ರತಿಮೆಯನ್ನು ಬುಧವಾರ ಉದ್ಘಾಟಿಸಲಾಯಿತು.

ಮೈಸೂರು, ಡಿ.4(ಪಿಎಂ)– ಮೈಸೂರಿನ ಹೆಬ್ಬಾಳು ಲೋಕನಾಯಕನಗರದ ಬಸವನಗುಡಿ ವೃತ್ತದಲ್ಲಿ ನಿರ್ಮಿಸಿರುವ ಕುಸ್ತಿ ಪೈಲ್ವಾನರ ಪ್ರತಿಮೆ, ಇಲ್ಲಿನ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಉದ್ಯಾನವನದ ಸ್ವಾಗತ ಕಮಾನು ಹಾಗೂ ಸದರಿ ವೃತ್ತದ ಮಧ್ಯಭಾಗದಲ್ಲಿ ನಿರ್ಮಿಸಿರುವ ಕಪ್ಪುಶಿಲೆಯ ಬಸವನ ಪ್ರತಿಮೆ ಒಳಗೊಂಡ ಅಲಂಕಾರಿಕ ವಿದ್ಯುತ್ ಕಂಬದ ಉದ್ಘಾಟನೆ ಬುಧವಾರ ನೆರವೇರಿತು.

ಚಾಮರಾಜ ವಿಧಾನಸಭಾ ಕ್ಷೇತ್ರದ ಮೈಸೂರು ಮಹಾನಗರ ಪಾಲಿಕೆಯ ವಾರ್ಡ್ 4ರ ವ್ಯಾಪ್ತಿಯ ಇಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಉದ್ಯಾನವನಕ್ಕೆ ಹೊಂದಿಕೊಂಡಂತೆ ನಿರ್ಮಿಸಿರುವ ಕುಸ್ತಿ ಪೈಲ್ವಾನರ ಪ್ರತಿಮೆ ಹಾಗೂ ಸದರಿ ಉದ್ಯಾನವನದ ಸ್ವಾಗತ ಕಮಾನು ಅನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು. ಇದೇ ವೇಳೆ ಬಸವನ ಪ್ರತಿಮೆ ಒಳಗೊಂಡ ಅಲಂಕಾರಿಕ ವಿದ್ಯುತ್ ಕಂಬದ ಉದ್ಘಾಟನೆಯನ್ನು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ನೆರವೇರಿಸಿದರು.

ಮೈಸೂರು ಮಹಾನಗರ ಪಾಲಿಕೆ ಅನುದಾನದಲ್ಲಿ ಈ ಮೂರು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. 35 ಲಕ್ಷ ರೂ. ವೆಚ್ಚದಲ್ಲಿ ಕುಸ್ತಿ ಪೈಲ್ವಾನರ ಪ್ರತಿಮೆಗಳನ್ನು ನಿರ್ಮಿಸಿದ್ದು, ಇಬ್ಬರು ಪೈಲ್ವಾನರು ಕಾದಾಟಕ್ಕೆ ಸಜ್ಜುಗೊಳ್ಳುತ್ತಿರುವ ವಿನ್ಯಾಸದಲ್ಲಿ ಪ್ರತಿಮೆ ನಿರ್ಮಿಸಲಾಗಿದೆ. ಇಬ್ಬರು ಪೈಲ್ವಾನರ ಪ್ರತಿಮೆಗಳನ್ನು ಕಂಚಿನಲ್ಲಿ ಸಿದ್ಧಪಡಿಸಿದ್ದು, ಪೀಠದಿಂದ 8 ಅಡಿ ಎತ್ತರವನ್ನು ಈ ಪ್ರತಿಮೆಗಳು ಹೊಂದಿವೆ. ಕುಳಿತ ಭಂಗಿಯಲ್ಲಿರುವ ಬಸವನ ಪ್ರತಿಮೆ ಒಳಗೊಂಡ ಅಲಂಕಾರಿಕ ವಿದ್ಯುತ್ ಕಂಬವು ಏಳೂವರೆ ಮೀಟರ್ ಎತ್ತರ ಹೊಂದಿದೆ. ಈ ಕಂಬದಲ್ಲಿ ಬಸವನ ತಲೆಗಳ ವಿನ್ಯಾಸವಿದೆ. 12 ಲಕ್ಷ ರೂ. ವೆಚ್ಚದಲ್ಲಿ ಇದನ್ನು ನಿರ್ಮಿಸಿದ್ದು, ಕಂಬದ ಮೇಲ್ಭಾಗದಲ್ಲಿ 5 ಅಲಂಕಾರಿಕ ವಿದ್ಯುತ್ ದೀಪಗಳಿವೆ.

ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಉದ್ಯಾನವನದ ಸ್ವಾಗತ ಕಮಾನು ಅನ್ನು 20 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ. 'ಡಾ.ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ ಉದ್ಯಾನವನ' ಶೀರ್ಷಿಕೆ ಹೊಂದಿರುವ ಕಮಾನು, ಡಾ.ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಹಾಗೂ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಭಾವಚಿತ್ರಗಳನ್ನು ಒಳಗೊಂಡಿದೆ. ಈ ಮೂರು ಯೋಜನೆಗಳು ಪಾಲಿಕೆಯ ವಾರ್ಡ್ 4ರ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಅವರ ಪರಿಕಲ್ಪನೆಯಲ್ಲಿ ಮೂಡಿಬಂದಿವೆ.

ಬಸವನಗುಡಿ ವೃತ್ತದಲ್ಲಿ ಹಮ್ಮಿಕೊಂಡಿದ್ದ ಸಭಾ ಕಾರ್ಯಕ್ರಮವನ್ನೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು. ಇದೇ ವೇಳೆ ಮೈಸೂರಿನ ವಿವಿಧ ಭಾಗಗಳ ಹಲವು ಪೈಲ್ವಾನರನ್ನು ಸನ್ಮಾನಿಸಲಾಯಿತು. ಸಚಿವ ಕೆ.ವೆಂಕಟೇಶ್ ಮಾತನಾಡಿ, ಮೈಸೂರಿನಲ್ಲಿ ಕುಸ್ತಿ ಹೆಸರುವಾಸಿಯಾದ ಕ್ರೀಡೆ. ಮಹಾರಾಜರ ಕಾಲದಿಂದಲೂ ಇದಕ್ಕೆ ಉತ್ತೇಜನ ನೀಡಲಾಗಿದೆ. ಮೈಸೂರಿನಲ್ಲಿ ಇಂದಿಗೂ ಕುಸ್ತಿಯನ್ನು ಉಳಿಸಿ ಬೆಳೆಸಿಕೊಂಡು ಬರಲಾಗಿದೆ ಎಂದು ಹೇಳಿದರು.

ಮೈಸೂರಿನಲ್ಲಿ ವರ್ಷಪೂರ್ತಿ ಕುಸ್ತಿ ನಡೆಸುವಂತಹ ಗರಡಿ ಮನೆ ಸ್ಥಾಪಿಸಿ ಉತ್ತೇಜಿಸಬೇಕೆಂದು ಸಚಿವ ಹೆಚ್.ಕೆ.ಪಾಟೀಲ್ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದು, ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಕುಸ್ತಿಗೆ ಸರ್ಕಾರ, ಸಾರ್ವಜನಿಕರಿಂದ ಉತ್ತೇಜನ ದೊರೆಯುವಂತಾಗಲಿ. ಅದಕ್ಕೆ ನಾವೆಲ್ಲರೂ ಸಹಕಾರಿಯಾಗಿ ಇರುತ್ತೇವೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಕುಸ್ತಿ ಅಪ್ಪಟ ಗ್ರಾಮೀಣ ಕ್ರೀಡೆ. ಮೈಸೂರಿನಲ್ಲಿನಂತೂ ಮಹಾರಾಜರ ಕಾಲ ದಿಂದಲೂ ಕುಸ್ತಿಗೆ ರಾಜಾಶ್ರಯ ಸಿಕ್ಕಿದ್ದು, ಇದರಿಂದ ಕುಸ್ತಿ ಮೈಸೂರಿನಲ್ಲಿ ಜನಪ್ರಿಯತೆಯೊಂದಿಗೆ ಬೆಳೆದು ಬಂದಿದೆ ಎಂದು ಹೇಳಿದರು.

ಆದಿಚುಂಚನಗಿರಿ ಮಠವು ಸಮಾಜಕ್ಕೆ ಗಣನೀಯವಾಗಿ ಕೊಡುಗೆ ನೀಡುತ್ತಿದೆ. ಆಧ್ಯಾತ್ಮಿಕವಾಗಿಯೂ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಿದೆ. ಆದಿ ಚುಂಚನಗಿರಿ ಶ್ರೀಗಳಾದ ನಿರ್ಮಲಾನಂದ ನಾಥ ಸ್ವಾಮೀಜಿಯವರ ಉದ್ಯಾನವನದ ಸ್ವಾಗತ ಕಮಾನು ನಿರ್ಮಾಣ ಶ್ಲಾಘನೀಯ ಕಾರ್ಯ. ಪೈ.ಶ್ರೀನಿವಾಸ್ ಈ ವಾರ್ಡಿನ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಕೆ.ಹರೀಶ್‌ಗೌಡರು ಕ್ಷೇತ್ರದ ಅಭಿವೃದ್ಧಿಗೆ ಸಂಪೂರ್ಣ ಗಮನ ನೀಡುತ್ತಿದ್ದಾರೆ. ಕ್ಷೇತ್ರದ ಜನತೆ ಅವರಿಗೆ ಬೆಂಬಲವಾಗಿ ನಿಲ್ಲಬೇಕೆಂದು ಮನವಿ ಮಾಡಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಹೆಬ್ಬಾಳು ಹೆಬ್ಬಾಗಿಲಿನಿಂದ ಕುಸ್ತಿಪಟುಗಳು ಮತ್ತು ಕಲಾ ತಂಡಗಳ ಮೆರವಣಿಗೆ ನಡೆಯಿತು. ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕೆಆರ್ ನಗರ ಕ್ಷೇತ್ರದ ಶಾಸಕ ಡಿ.ರವಿಶಂಕರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ನಗರ ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಅಸ್ರತ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ, ಕಾರ್ಯಕ್ರಮದ ಆಯೋಜಕರೂ ಆದ ನಗರ ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಮುಖಂಡ ಕೇಬಲ್ ನಾಗರಾಜು ಮತ್ತಿತರರು ಹಾಜರಿದ್ದರು.

ಮೈಸೂರಿನಲ್ಲಿ ಕುಸ್ತಿ ಹೆಚ್ಚು ಉತ್ತೇಜಿಸಲು ಕಾರ್ಯಕ್ರಮ ರೂಪಿಸಲಾಗುವುದು

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ಮೈಸೂರು, ಡಿ.4(ಪಿಎಂ)– ಮೈಸೂರಿನಲ್ಲಿ ಕುಸ್ತಿಗೆ ಹೆಚ್ಚಿನ ಉತ್ತೇಜನ ನೀಡಲು ಎಲ್ಲಾ ಗರಡಿ ಮನೆಯವರೊಂದಿಗೆ ಚರ್ಚಿಸಿ ಕಾರ್ಯಕ್ರಮ ರೂಪಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.


ಮೈಸೂರಿನ ಹೆಬ್ಬಾಳು ಲೋಕನಾಯಕನಗರದ ಬಸವನಗುಡಿ ವೃತ್ತದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರ, ಸಂಘ ಸಂಸ್ಥೆಗಳೂ ಕುಸ್ತಿಗೆ ಉತ್ತೇಜನ ನೀಡಬೇಕಿದೆ. ಮೈಸೂರಿನ ಎಲ್ಲಾ ಗರಡಿ ಮನೆಯವರೊಂದಿಗೆ ಚರ್ಚಿಸಿ ಮೈಸೂರಿನಲ್ಲಿ ಕುಸ್ತಿಗೆ ಉತ್ತೇಜನ ನೀಡಲಾಗುವುದು. ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಮೈಸೂರಿನಲ್ಲಿ ಕುಸ್ತಿ ಹೆಚ್ಚು ಸಕ್ರಿಯವಾಗಿ ನಡೆಯಲು ಕಾರ್ಯಕ್ರಮ ರೂಪಿಸಲಾಗುವುದು ಎಂದರು.

ಮಹಾರಾಜರ ಕಾಲದಿಂದಲೂ ಮೈಸೂರಿನಲ್ಲಿ ಕುಸ್ತಿಗೆ ಉತ್ತೇಜನ ನೀಡಲಾಗುತ್ತಿದೆ. ಕುಸ್ತಿ ಶ್ರೇಷ್ಠ ಹಾಗೂ ಗಂಡು ಕಲೆಯಾಗಿದೆ. ಕುಸ್ತಿ ಕಲಿಯುವುದು ಮತ್ತೊಬ್ಬರನ್ನು ಎದುರಿಸಲು ಅಲ್ಲ. ಬದಲಿಗೆ ಅದು ಕ್ರೀಡಾ ಮನೋಭಾವದಿಂದ ಸಮಾಜಗಳನ್ನು ಒಟ್ಟುಗೂಡಿಸುವ ಕ್ರೀಡೆಯಾಗಿದೆ. ಅಂತಹ ಕುಸ್ತಿ ನಶಿಸದಂತೆ ಮೈಸೂರಿನಲ್ಲಿ ಮಹಾರಾಜರ ಕಾಲದಿಂದ ಉತ್ತೇಜನ ನೀಡಲಾಗುತ್ತಿದೆ ಎಂದು ತಿಳಿಸಿದರು.



ಉದ್ಯಾನವನದ ನೂತನ ಕಮಾನು

ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡರ ಹುಟ್ಟುಹಬ್ಬ



ಮೈಸೂರು ಜಿಲ್ಲಾ ಡಿಸಿಸಿ ಬ್ಯಾಂಕ್ ಹಾಗೂ ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ಮಾಜಿ ಅಧ್ಯಕ್ಷ ಕೆ. ಉಮಾಶಂಕರ್ ನೇತೃತ್ವದಲ್ಲಿ ಅಧ್ಯಕ್ಷೆ ಪಿ.ರಾಜೇಶ್ವರಿ, ಉಪಾಧ್ಯಕ್ಷೆ ಪಿ.ಸವಿತಾ, ನಿರ್ದೇಶಕರಾದ ಹೆಚ್.ಹರೀಶ್‌ಕುಮಾರ್, ಪಡುವಾರಹಳ್ಳಿ ಎಂ.ರಾಮಕೃಷ್ಣ ಸಿ.ರೇವಣ್ಣ, ಸಂಜೀವಿನಿಕುಮಾರ್, ಕೆ.ಗಿರೀಶ್, ಭಾವಸಾರ್ ಕ್ಷತ್ರಿಯ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಸತ್ಯನಾರಾಯಣ ಇತರರು ಅಭಿನಂದಿಸಿ, ಶುಭಾಶಯ ಕೋರಿದರು.

ಹೆಚ್.ಡಿ.ಕೋಟೆ–ತಾರಕ ನಡುವೆ ಸಮರ್ಪಕ ಬಸ್ ಸೌಲಭ್ಯಕ್ಕೆ ಆಗ್ರಹಿಸಿ ಎಐಡಿವೈಓ ಪ್ರತಿಭಟನೆ



ಹೆಚ್.ಡಿ.ಕೋಟೆ–ತಾರಕ ನಡುವೆ ಬಸ್ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ಎಐಡಿವೈಓ ವತಿಯಿಂದ ನಗರದ ಎಲ್‌ಐಸಿ ವೃತ್ತದಿಂದ ಕೆಎಸ್‌ಆರ್‌ಟಿಸಿ ಗ್ರಾಮಾಂತರ ವಿಭಾಗೀಯ ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು.

ಮೈಸೂರು,ಡಿ.4(ಜಿಎ)–ಹೆಚ್.ಡಿ.ಕೋಟೆ– ತಾರಕ ನಡುವೆ ಅಗತ್ಯವಿರುವ ವೇಳೆ ಬಸ್ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಓ) ನೇತೃತ್ವದಲ್ಲಿ ಬುಧವಾರ ಕೆಎಸ್‌ಆರ್‌ಟಿಸಿ ಗ್ರಾಮಾಂತರ ವಿಭಾಗೀಯ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಹೆಚ್.ಡಿ.ಕೋಟೆಯಿಂದ ನಾಗನಹಳ್ಳಿ ಮಾರ್ಗವಾಗಿ ತಾರಕ ಗ್ರಾಮದವರೆಗೆ ಬೆಳಗ್ಗೆ 7.30, ಸಂಜೆ 5.30 ಮತ್ತು ರಾತ್ರಿ 8 ಗಂಟೆಗೆ ಬಸ್ ಸಂಚಾರಕ್ಕಾಗಿ ಕೋರಿ ನಗರದ ಎಲ್‌ಐಸಿ ವೃತ್ತದಿಂದ ಮೆರವಣಿಗೆ ಹೊರಟು ಗ್ರಾಮಾಂತರ ವಿಭಾಗೀಯ ಕಚೇರಿ ತಲುಪಿ ಪ್ರತಿಭಟನಾಕಾರರು ಮನವಿ ಸಲ್ಲಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಹಿರೇಹಳ್ಳಿ ಬಿ ಗ್ರಾಮದ ಮುಖಂಡ ಪುಟ್ಟೇಗೌಡ, ಹೆಚ್.ಡಿ.ಕೋಟೆ ತಾಲೂಕಿನ ನಾಗನಹಳ್ಳಿ, ಹಿರೇಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿನ ಹತ್ತಕ್ಕೂ ಹೆಚ್ಚು ಕಾಡಂಚಿನ ಗ್ರಾಮಗಳು ಹಾಗೂ ಆದಿವಾಸಿ ಹಾಡಿಗಳಿಗೆ ಸಂಪರ್ಕ ಕಲ್ಪಿಸುವ ಈ ಮಾರ್ಗದಲ್ಲಿ ಪ್ರತಿನಿತ್ಯ ನೂರಾರು ಜನ ಪ್ರಯಾಣಿಸುತ್ತಾರೆ. ಬೆಳಗ್ಗೆ ಹಾಗೂ ರಾತ್ರಿ ವೇಳೆ ಈ ಭಾಗದಲ್ಲಿ ಕಾಡುಪ್ರಾಣಿಗಳ ಓಡಾಟ ಹೆಚ್ಚಿರುವುದರಿಂದ ಈ ಭಾಗದ ಜನರು ಆತಂಕದಿಂದ ಓಡಾಡುವ ಪರಿಸ್ಥಿತಿ ಇದೆ ಎಂದರು.

ಈ ಹಿಂದೆ ಬೆಳಗ್ಗೆ 7.30 ಹಾಗೂ ಸಂಜೆ 5.30 ಹಾಗೂ ರಾತ್ರಿ 8 ಗಂಟೆಗೆ ಹೆಚ್.ಡಿ.ಕೋಟೆ ಪಟ್ಟಣದಿಂದ ಸಂಚರಿಸುವಂತೆ ಬಸ್ ಅನ್ನು ಬಿಡಲು ಕೋರಿ ಹೆಚ್.ಡಿ.ಕೋಟೆ ಡಿಪೋಗೆ ಹಲವು ಬಾರಿ ಗಮನಕ್ಕೆ ತಂದರೂ ಸಮಸ್ಯೆ ಬಗೆಹರಿದಿಲ್ಲ. ಇದರಿಂದಾಗಿ ಪ್ರತಿನಿತ್ಯ ಶಾಲಾ ಕಾಲೇಜಿಗೆ ಓಡಾಡುವ ವಿದ್ಯಾರ್ಥಿಗಳಿಗೆ, ಕೂಲಿ ಕಾರ್ಮಿಕರಿಗೆ, ರೈತರಿಗೆ ತೊಂದರೆಯಾಗುತ್ತಿದ್ದು, ಕೂಡಲೇ ಸಮಸ್ಯೆ ಗಂಭೀರತೆಯನ್ನು ಅರಿತು ಬಸ್ ಸಂಚರಿಸಬೇಕು ಎಂದು ಅವರು ಆಗ್ರಹಿಸಿದರು.

ಈ ವೇಳೆ ವಿಭಾಗೀಯ ಅಧಿಕಾರಿ ಚೇತನ್ ಸೋಮವಾರದಿಂದ ಬಸ್ ಕಳುಹಿಸುವುದಾಗಿ ಭರವಸೆ ನೀಡಿದ ಬಳಿಕ ಧರಣಿಯನ್ನು ಕೈ ಬಿಟ್ಟರು. ಈ ವೇಳೆ ಅಧ್ಯಕ್ಷ ಟಿ.ಆರ್.ಸುನಿಲ್, ಜಿಲ್ಲಾ ಕಾರ್ಯದರ್ಶಿ ಸುಮಾ, ಸಿಂಚನ, ಹಿರೇಹಳ್ಳಿ ಮುಖಂಡರಾದ ಪುಟ್ಟೇಗೌಡ, ರಂಗರಾಜು, ಸ್ವಾಮಿಗೌಡ, ಕೃಷ್ಣೇಗೌಡ, ಯಜಮಾನರಾದ ಮಂಜು ಹಿರೇಹಳ್ಳಿ, ವೆಂಕಟಸ್ವಾಮಿ, ಶಂಭುಗೌಡ, ಉದಯ, ಅಂಬಿಕಾ, ಲಕ್ಷ್ಮಮ್ಮ, ಜಯಮ್ಮ, ಮಲ್ಲಿಗಮ್ಮ, ಸುಧಾ, ಪುಟ್ಟಮ್ಮ, ಪದ್ಮ ಪಾಲ್ಗೊಂಡಿದ್ದರು.

ದೇಶ - ವಿದೇಶ

ದಕ್ಷಿಣ ಕೊರಿಯಾದಲ್ಲಿ ತುರ್ತು ಮಿಲಿಟರಿ ಆಡಳಿತ ಆದೇಶ ಕೆಲವೇ ಗಂಟೆಗಳಲ್ಲಿ ವಾಪಸ್



ಸಿಯೋಲ್: ದಕ್ಷಿಣ ಕೊರಿಯಾದಲ್ಲಿ ಜಾರಿಗೊಳಿಸಿದ್ದ ಸೇನಾಡಳಿತವನ್ನು ಮತ್ತೆ ವಾಪಸ್ ತೆಗೆದುಕೊಳ್ಳಲಾಗಿದೆ. ದಕ್ಷಿಣ ಕೊರಿಯಾದ ಅಧ್ಯಕ್ಷ ಯುನ್ ಸುಕ್ ಯೋಲ್ ಬುಧವಾರ ಮಾರ್ಷಲ್ ಕಾನೂನನ್ನು ಹೇರುವ ಅಲ್ಪಾವಧಿಯ ಕ್ರಮವನ್ನು ಕೈಬಿಟ್ಟಿದ್ದಾರೆ. ಶಾಸಕರು ಭದ್ರತಾ ಪಡೆಗಳನ್ನು ಧಿಕ್ಕರಿಸಿ ಅವರ ಘೋಷಣೆಗೆ ವಿರುದ್ಧವಾಗಿ ಮತ ಚಲಾಯಿಸಿದರು. ಸಾವಿರಾರು ಪ್ರತಿಭಟನಾಕಾರರು ಬೀದಿಗಿಳಿದು ಹೋರಾಟ ನಡೆಸಿದರು. ಇದರ ಬೆನ್ನಲ್ಲೇ ಸೇನಾಡಳಿತ ವಾಪಸ್ ತೆಗೆದುಕೊಳ್ಳಲಾಗಿದೆ. ಉತ್ತರ ಕೊರಿಯಾದ ಕಮ್ಯುನಿಸ್ಟ್ ಪಡೆಗಳ ಬೆದರಿಕೆಗಳಿಂದ ದಕ್ಷಿಣ ಕೊರಿಯಾವನ್ನು ರಕ್ಷಿಸಲು ಮತ್ತು ಜನರ ಸ್ವಾತಂತ್ರ್ಯ ಮತ್ತು ಸಂತೋಷವನ್ನು ಲೂಟಿ ಮಾಡುವ ರಾಜ್ಯ ವಿರೋಧಿ ಅಂಶಗಳನ್ನು ನಿರ್ಮೂಲನೆ ಮಾಡಲು ಎಮರ್ಜೆನ್ಸಿ ಘೋಷಿಸುತ್ತಿದ್ದೇವೆ ಎಂದು ಯೂನ್ ಸುಕ್ ಯೆಲ್ ತಮ್ಮ ಭಾಷಣದಲ್ಲಿ ಹೇಳಿದ್ದರು.

ವಿಮಾನ ನಿಲ್ದಾಣಕ್ಕೆ ಪಾರ್ಸಲ್‌ನಲ್ಲಿ ಬಂತು 7 ತಿಂಗಳ ಭ್ರೂಣ!



ಉತ್ತರಪ್ರದೇಶ: ಇಲ್ಲಿನ ಲಕ್ನೋದ ಚೌಧರಿ ಚರಣ್ ಸಿಂಗ್ ವಿಮಾನ ನಿಲ್ದಾಣಕ್ಕೆ 7 ತಿಂಗಳ ಮೃತ ಭ್ರೂಣವೊಂದು ಪಾರ್ಸೆಲ್ ಮೂಲಕ ತಲುಪಿ ವಿಮಾನ ನಿಲ್ದಾಣದ ಸಿಬ್ಬಂದಿಯನ್ನು ಆತಂಕಕ್ಕೀಡು ಮಾಡಿದೆ. ಈ ಭ್ರೂಣವನ್ನು ಲಕ್ನೋದಿಂದ ಮುಂಬೈಗೆ ವೈದ್ಯಕೀಯ ತಪಾಸಣೆಗಾಗಿ ವಿಮಾನದ ಮೂಲಕ ಕಳುಹಿಸಲು ನಿರ್ಧರಿಸಲಾಗಿತ್ತು. ಆದರೆ ಪಾರ್ಸಲ್ ಕಳುಹಿಸಿದವರು ಇದು ಭ್ರೂಣ ಎಂದು ಮಾಹಿತಿ ನೀಡದ ಹಿನ್ನೆಲೆಯಲ್ಲಿ ಈ ಎಡವಟ್ಟು ಆಗಿತ್ತು. ಲಕ್ನೋ ನಗರದಲ್ಲಿರುವ ಐವಿಎಫ್ ಕೇಂದ್ರವೊಂದು ಇದನ್ನು ಕೊರಿಯರ್ ಕಂಪನಿ ಮೂಲಕ ಮುಂಬೈನಲ್ಲಿರುವ ಲ್ಯಾಬೋರೆಟರಿಗೆ ತಪಾಸಣೆಗಾಗಿ ಕಳುಹಿಸಿತ್ತು. ಆದರೆ ಇದರಲ್ಲಿ ಇರುವುದು ಭ್ರೂಣ ಎಂಬುದನ್ನು ಕೊರಿಯರ್ ಸಂಸ್ಥೆಗೆ ಐವಿಎಫ್ ಕೇಂದ್ರವೂ ಮಾಹಿತಿ ನೀಡಿರಲಿಲ್ಲ. ಹೀಗಾಗಿ ಕೊರಿಯರ್ ಕಂಪನಿಯೂ ಅದನ್ನು ಶೀಘ್ರವಾಗಿ ತಲುಪಿಸುವುದಕ್ಕಾಗಿ ವಿಮಾನದ ಮೂಲಕ ಕಳುಹಿಸುವುದಕ್ಕೆ ವಿಮಾನ ನಿಲ್ದಾಣಕ್ಕೆ ಕಳುಹಿಸಿಕೊಟ್ಟಿದೆ. ಅಲ್ಲಿ ಕಾರ್ಗೋಗಳ ತಪಾಸಣೆ ವೇಳೆ ಕವರ್ ಮಾಡಿದ ಬಾಕ್ಸ್‌ನಲ್ಲಿ ಭ್ರೂಣ ಇರುವುದು ತಿಳಿದು ಬಂದು ಕೆಲ ಕಾಲ ಗೊಂದಲ ಉಂಟಾಗಿತ್ತು.

ಮೂಗಿಗೆ ಕಾಸ್ಮೆಟಿಕ್ ಸರ್ಜರಿ ; ದೇಶದ ಅಧ್ಯಕ್ಷೆ ವಿವಾದ



ಪೆರು: ಸಿನಿಮಾ ನಟ–ನಟಿಯರು, ಮಾಡೆಲ್‌ಗಳು ಕಾಸ್ಮೆಟಿಕ್ ಸರ್ಜರಿಗಳನ್ನು ಮಾಡಿಸಿಕೊಳ್ಳುವುದು ಕಾಮನ್. ಆದರೆ, ಮಹಿಳಾ ಪ್ರಧಾನಿ ಕಾಸ್ಮೆಟಿಕ್ ಸರ್ಜರಿ ಮಾಡಿಸಿಕೊಂಡು ಎಲ್ಲರ ಹುಬ್ಬೇರಿಸಿದ್ದಾರೆ. ಪೆರು ದೇಶದ ಅಧ್ಯಕ್ಷೆ 62 ವರ್ಷದ ದಿನಾ ಬೊಲುವಾರ್ತೆ ದೊಡ್ಡ ವಿವಾದವನ್ನು ಹುಟ್ಟು ಹಾಕಿದರು. ಉನ್ನತ ಹುದ್ದೆಯಲ್ಲಿರುವಾಕೆ ಕಾಸ್ಮೆಟಿಕ್ ಸರ್ಜರಿ ಮಾಡಿಸಿಕೊಂಡಿರುವುದನ್ನು ದೊಡ್ಡ ವಿವಾದ ಮಾಡಿರುವ ವಿಪಕ್ಷದ ಶಾಸಕರು, ಆಕೆಯ ರಾಜೀನಾಮೆಗೆ ಒತ್ತಾಯಿಸಿದ್ದಾರೆ.

ಕಾಸ್ಮೆಟಿಕ್ ಸರ್ಜರಿ ಆರೋಪವನ್ನು ತಳ್ಳಿ ಹಾಕಿರುವ ದಿನಾ ಬೊಲುವಾರ್ತೆ, ರೈನೋಪ್ಲಾಸ್ಟಿ ಮಾಡಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ. 2023ರ ಜೂನ್ 28ರಿಂದ ಜುಲೈ 10ರ ನಡುವೆ ಅವರು ಸಾರ್ವಜನಿಕವಾಗಿ ಎಲ್ಲಿಯೂ ಕಾಣಿಸಿಕೊಂಡಿಲ್ಲ. ಇದು ಅನೇಕ ಊಹಾಪೋಹಗಳಿಗೆ ಎಡೆ ಮಾಡಿತ್ತು. ಈ ಸಮಯದಲ್ಲಿ ಅವರು ಸರ್ಜರಿಗೆ ಒಳಗಾದರೆ ಎಂದು ಕಾಂಗ್ರೆಸ್ ಉಸ್ತುವಾರಿ ಆಯೋಗವು ತನಿಖೆ ನಡೆಸುತ್ತಿದೆ. ಕೆಲವು ಶಾಸಕರು ಮತ್ತು ಕಾನೂನು ತಜ್ಞರು ಈಗ ಬೊಲುವಾರ್ತೆ ಅವರ ನಡವಳಿಕೆಯು ಸಾಂವಿಧಾನಿಕ ಉಲ್ಲಂಘನೆಯಾಗಿದೆ. ಹಾಗಾಗಿ ಅವರನ್ನು ತೆಗೆದುಹಾಕಲು ಕರೆ ನೀಡುತ್ತಿದ್ದಾರೆ.

ಮಣಿಪುರದಲ್ಲಿ ಇಂಟರ್ನೆಟ್ ನಿಷೇಧ ಡಿ.5ರವರೆಗೆ ವಿಸ್ತರಣೆ



ಇಂಫಾಲ್: ಮಣಿಪುರ ಸರ್ಕಾರವು ರಾಜ್ಯದ 9 ಜಿಲ್ಲೆಗಳಲ್ಲಿ ಮೊಬೈಲ್ ಇಂಟರ್ನೆಟ್ ನಿಷೇಧವನ್ನು ಡಿ.5ರವರೆಗೆ ಅಂದರೆ ಎರಡು ದಿನಗಳವರೆಗೆ ವಿಸ್ತರಣೆ ಮಾಡಿದೆ. ಇಂಫಾಲ್ ಪಶ್ಚಿಮ, ಇಂಫಾಲ್ ಪೂರ್ವ, ಕಕ್ಚಿಂಗ್, ಬಿಷ್ಣುಪುರ್, ತೌಬಲ್, ಚುರಾಚಂದ್‌ಪುರ, ಕಾಂಗ್‌ಪೋಕ್ಪಿ, ಫೆರ್ಜಾಲ್ ಮತ್ತು ಜಿರಿಬಾಮ್‌ನಲ್ಲಿ ಡಿ.5ರ ಸಂಜೆ 5.15ರವರೆಗೆ ಮೊಬೈಲ್ ಇಂಟರ್ನೆಟ್ ನಿಷೇಧಿಸಲಾಗಿದೆ ಎಂದು ಗೃಹ ಇಲಾಖೆ ಹೊರಡಿಸಿದ ಆದೇಶದಲ್ಲಿ ತಿಳಿಸಲಾಗಿದೆ. ಚಾಲ್ತಿಯಲ್ಲಿರುವ ಕಾನೂನು ಮತ್ತು ಸುವ್ಯವಸ್ಥೆಯನ್ನು ಪರಿಶೀಲಿಸಿದ ನಂತರ ಇಂಫಾಲ್ ಪಶ್ಚಿಮ, ಇಂಫಾಲ್ ಪೂರ್ವ, ಕಕ್ಚಿಂಗ್, ಬಿಷ್ಣುಪುರ್, ತೌಬಲ್, ಚುರಾಚಂದ್‌ಪುರ ಸೇರಿದಂತೆ 9 ಜಿಲ್ಲೆಗಳಲ್ಲಿ ಮೊಬೈಲ್ ಇಂಟರ್ನೆಟ್ ಸೇವೆ ಮತ್ತು ಮೊಬೈಲ್ ಡೇಟಾ ಸೇವೆಗಳ ಅಮಾನತು ಆದೇಶವನ್ನು ಇನ್ನೂ ಎರಡು ದಿನಗಳವರೆಗೆ ಮುಂದುವರಿಸಲು ನಿರ್ಧರಿಸಿದೆ. ಮಣಿಪುರ ಮತ್ತು ಅಸ್ಸಾಂನ ಜಿರಿ ಮತ್ತು ಬರಾಕ್ ನದಿಗಳಲ್ಲಿ ಕ್ರಮವಾಗಿ ಮೂವರು ಮಹಿಳೆಯರು, ಮೂವರು ಮಕ್ಕಳ ಶವಗಳು ಪತ್ತೆಯಾದ ನಂತರ ರಾಜ್ಯದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದ್ದು, ಕಳೆದ ನ.16ರಿಂದ ಇಂಟರ್ನೆಟ್ ಸೇವೆ ಸ್ಥಗಿತಗೊಳಿಸಲಾಗಿದೆ.

ಇವಿಎಂ ಮೇಲೆ ಅನುಮಾನ: ಬ್ಯಾಲೆಟ್ ಮೂಲಕ ಮರು ಮತದಾನಕ್ಕೆ ಮುಂದಾದ ಗ್ರಾಮಸ್ಥರಿಗೆ ಪೊಲೀಸರ ತಡೆ



ಸೊಲ್ಲಾಪುರ: ಇಲ್ಲಿನ ಮಲ್‌ಶ್ರಿಯಾಸ್ ವಿಧಾನಸಭೆ ಕ್ಷೇತ್ರದ ಮರ್ಕರವಾಡಿ ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ರಾಮ್ ಸಾತ್ಪುತೆಗೆ 843 ಮತ ಬಂದಿದ್ದಕ್ಕೆ ಅಚ್ಚರಿಪಟ್ಟ ಗ್ರಾಮಸ್ಥರು, ಇವಿಎಂ ಬಗ್ಗೆ ಅನುಮಾನ ವ್ಯಕ್ತಪಡಿಸಿ ಮಂಗಳವಾರ ಬ್ಯಾಲೆಟ್ ಪೇಪರ್ ಮೂಲಕ ಮರು ಮತದಾನಕ್ಕೆ ಮುಂದಾಗಿದ್ದರು. ಇದಕ್ಕೆ ಪೊಲೀಸರು ತಡೆಯೊಡ್ಡಿದ್ದಾರೆ. ವಿಜೇತ ಅಭ್ಯರ್ಥಿ ಎನ್‌ಸಿಪಿ (ಎಸ್‌ಪಿ) ಉತ್ತಮ್ ಜಾನಕರ್ ಗ್ರಾಮಸ್ಥರೊಂದಿಗೆ ಮಾತುಕತೆ ನಡೆಸಿದ ಬಳಿಕ ಅವರು ಮರು ಮತದಾನದ ಆಲೋಚನೆಯನ್ನು ಕೈಬಿಟ್ಟಿದ್ದಾರೆ. ನ.20ರಂದು ನಡೆದ ಚುನಾವಣೆಯಲ್ಲಿ ಮರ್ಕರವಾಡಿಯಲ್ಲಿ ಉತ್ತಮ್ ಜಾನಕರ್‌ಗೆ 1003 ವೋಟು ಹಾಗೂ ರಾಮ್ ಸಾತ್ಪುತೆಗೆ 843 ಮತ ಬಂದಿದ್ದವು. ಇದರಿಂದ ಗ್ರಾಮಸ್ಥರಿಗೆ ಅಚ್ಚರಿಯಾಗಿತ್ತು. 100 ರಿಂದ 150 ಮತ ಬಾರದವನಿಗೆ 843 ವೋಟ್ ಬಿದ್ದಿದ್ದು ಹೇಗೆ ಎಂದು ಇವಿಎಂ ಮೇಲೆ ಶಂಕಿಸಿ, ಬ್ಯಾಲೆಟ್ ಪೇಪರ್ ಮೂಲಕ ಮರುಮತದಾನಕ್ಕೆ ಅವಕಾಶ ಕೊಡಿ, ಆತನಿಗೆ 100 ಮತಗಳೂ ಬೀಳುವುದಿಲ್ಲ ಎಂಬುದನ್ನು ಸಾಬೀತು ಮಾಡುತ್ತೇವೆ ಎಂದು ಪಟ್ಟು ಹಿಡಿದಿದ್ದರು.

ಮೇ ಮೊದಲ ವಾರದಲ್ಲಿ ಬಾಳೆಕುಟ್ಟಿರ ಕೇರ್ ಬಲಿ ನಮ್ಮೆ


ಸುದ್ದಿಗೋಷ್ಠಿಯಲ್ಲಿ ಬಾಳೆಕುಟ್ಟಿರ ಕುಟುಂಬದ ಅಧ್ಯಕ್ಷ ಮಂದಣ್ಣ ಮಾತನಾಡಿದರು.

ವಿರಾಜಪೇಟೆ, ಡಿ.4–ಕೊಡವ ಟಗ್ ಆಫ್ ವಾರ್ ಅಕಾಡೆಮಿ ಸಹಯೋಗದಲ್ಲಿ ನಾಲ್ಕನೇ ವರ್ಷದ ಕೇರ್ ಬಲಿ ನಮ್ಮೆಯನ್ನು ಅರಮೇರಿ–ಮೈತಾಡಿಯ ಬಾಳೇಕುಟ್ಟಿರ ಕುಟುಂಬ ಮೇ ತಿಂಗಳ ಮೊದಲ ವಾರದಲ್ಲಿ ನಡೆಸಲಿದೆ ಎಂದು ಬಾಳೆಕುಟ್ಟಿರ ಕುಟುಂಬದ ಅಧ್ಯಕ್ಷ ಮಂದಣ್ಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರಮೇರಿಯ ಎಎಂಎಸ್ ವಿದ್ಯಾಸಂಸ್ಥೆ ಮೈದಾನದಲ್ಲಿ ಮೇ 2, 3 ಹಾಗೂ 4ರಂದು ಕೇರ್ ಬಲಿ ನಮ್ಮೆ ನಡೆಯಲಿದೆ. ನಮ್ಮೆಯಲ್ಲಿ 300ಕ್ಕೂ ಅಧಿಕ ಕುಟುಂಬಗಳು ಭಾಗವಹಿಸುವ ನಿರೀಕ್ಷೆ ಇದೆ. ಈಗಾಗಲೇ 122 ತಂಡಗಳು ಹೆಸರು ನೋಂದಾಯಿಸಿಕೊಂಡಿವೆ. ಟಗ್ ಆಫ್ ವಾರ್ ಅಕಾಡೆಮಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ನಮ್ಮೆ ನಡೆಯುವ ಮೈದಾನವನ್ನು ಪರಿಶೀಲಿಸಿ, ಒಪ್ಪಿಗೆ ಸೂಚಿಸಿದ್ದಾರೆ ಎಂದರು.

ಟಗ್ ಆಫ್ ವಾರ್ ಅಕಾಡೆಮಿ ಸ್ಥಾಪಕಾಧ್ಯಕ್ಷ ಪೊನ್ನೊಲತಂಡ ಕಿರಣ್ ಪೊನ್ನಪ್ಪ ಮಾತನಾಡಿ, 12ನೇ ಶತಮಾನದಲ್ಲಿ ಪ್ರಾರಂಭಗೊಂಡ ಟಗ್ ಆಫ್ ವಾರ್ ಕ್ರೀಡೆ 1918ರ ಒಲಂಪಿಕ್ಸ್‌ನಲ್ಲಿ ಸ್ಥಾನ ಪಡೆದುಕೊಂಡಿತ್ತು. ಟಗ್ ಆಫ್ ವಾರ್ ಎಂದರೆ ಶಕ್ತಿ ಪ್ರದರ್ಶನ. ಹಿಂದೆ ಮಂದ್‌ಮಾನಿಗಳಲ್ಲಿ ಕೋಲ ಎಳೆದು ಶಕ್ತಿ ಪ್ರದರ್ಶನ ಮಾಡುತ್ತಿದ್ದರು. ಇದರ ಪ್ರತೀಕವಾಗಿ ಇಂದು ಹಗ್ಗವನ್ನು ಎಳೆದು ಶಕ್ತಿ ಪ್ರದರ್ಶಿಸಲಾಗುತ್ತಿದೆ. ಪ್ರಾರಂಭದಲ್ಲಿ ಕೇವಲ 42 ತಂಡಗಳೊಂದಿಗೆ ಪೊನ್ನೊಲೊತಂಡ ಕುಟುಂಬ ಕಕ್ಕಬೆಯಲ್ಲಿ ನಮ್ಮೆ ಆಯೋಜಿಸಿತ್ತು ಎಂದು ತಿಳಿಸಿದರು.

ಈ ಬಾರಿಯಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಳಸುವ (ಹತ್ತಿಯಿಂದ ನಿರ್ಮಿತವಾದ) ಹಗ್ಗವನ್ನು ಬಳಸಲಾಗುವುದು. ಈಗಾಗಲೇ 10ಕ್ಕೂ ಹೆಚ್ಚು ಕುಟುಂಬಗಳು ನಮ್ಮೆ ನಡೆಸಲು ಮನವಿ ಸಲ್ಲಿಸಿವೆ 2026ರಲ್ಲಿ ಚೆಯಕ್‌ಪೂವಂಡ ಕುಟುಂಬಕ್ಕೆ ಅಧಿಕೃತ ಪತ್ರ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಅಕಾಡೆಮಿ ಉಪಾಧ್ಯಕ್ಷ ಚಟ್ಟಂಗಡ ರವಿ ಸುಬ್ಬಯ್ಯ, ಕಾರ್ಯದರ್ಶಿ ಉಳುವಂಗಡ ಲೋಹಿತ್ ಭೀಮಯ್ಯ, ಖಜಾಂಚಿ ಜಮ್ಮಡ ಗಿಲ್ ನಂಜಪ್ಪ, ನಿರ್ದೇಶಕರಾದ ಚಟ್ಟಂಗಡ ಕಂಬ ಕಾರ್ಯಪ್ಪ, ಕೋಣಿಯಂಡ ಮಂಜು ಕಾರ್ಯಪ್ಪ, ಕೇರ್ ಬಲಿ ನಮ್ಮೆ ಕಾರ್ಯದರ್ಶಿ ಬಾಳೆಕುಟ್ಟಿರ ವಸಂತ್ ಪೂಣಚ್ಚ, ಖಜಾಂಚಿ ರಾಮ್ ಕಾರ್ಯಪ್ಪ ಉಪಸ್ಥಿತರಿದ್ದರು.

ದುಬಾರೆಯಲ್ಲಿ 7 ಕೋಟಿ ವೆಚ್ಚದಲ್ಲಿ ತೂಗು ಸೇತುವೆ

ಸರ್ಕಾರಕ್ಕೆ ಪ್ರಸ್ತಾವನೆ : ಶಾಸಕ ಡಾ.ಮಂತರ್‌ಗೌಡ ಮಾಹಿತಿ


ದುಬಾರೆಯಲ್ಲಿ ಹೈಟೆಕ್ ಶೌಚಾಲಯ ಕಟ್ಟಡವನ್ನು ಶಾಸಕ ಡಾ.ಮಂತರ್‌ಗೌಡ ಉದ್ಘಾಟಿಸಿದರು.

ಕುಶಾಲನಗರ, ಡಿ.4–ಕೊಡಗಿನ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲಿ ಒಂದಾಗಿರುವ ದುಬಾರೆಯ ಕಾವೇರಿ ನದಿಗೆ ಅಡ್ಡಲಾಗಿ 7 ಕೋಟಿ ರೂ. ವೆಚ್ಚದ ತೂಗು ಸೇತುವೆ ನಿರ್ಮಾಣಕ್ಕೆ ಡಿಪಿಆರ್ ಸಿದ್ಧಪಡಿಸಿ ಸರ್ಕಾರಕ್ಕೆ ಪ್ರಸ್ತಾಪನೆ ಸಲ್ಲಿಸಲಾಗಿದೆ ಎಂದು ಶಾಸಕ ಡಾ.ಮಂತರ್‌ಗೌಡ ತಿಳಿಸಿದರು.

ಸಮೀಪದ ದುಬಾರೆಯಲ್ಲಿ ನಂಜರಾಯಪಟ್ಟಣ ಗ್ರಾಮ ಪಂಚಾಯಿತಿ, ಪ್ರವಾಸೋದ್ಯಮ ಇಲಾಖೆ ಹಾಗೂ ರ್‍ಯಾಫ್ಟಿಂಗ್ ಸಮಿತಿ ವತಿಯಿಂದ ಪ್ರವಾಸಿಗರ ಅನುಕೂಲಕ್ಕಾಗಿ ನಿರ್ಮಿಸಿರುವ 35 ಲಕ್ಷ ರೂ. ವೆಚ್ಚದ ಹೈಟೆಕ್ ಶೌಚಾಲಯ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಂದಿನ ಮುಂಗಾರು ವೇಳೆಗೆ ತೂಗು ಸೇತುವೆ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಯೋಜನಾ ವರದಿ ಸಲ್ಲಿಸಲಾಗಿದ್ದು, ಪ್ರಗತಿಯಲಿದೆ ಎಂದರು.

ಈ ಭಾಗದ ಜನರ ಬಹುದಿನಗಳ ಬೇಡಿಕೆಯಾದ ತೂಗು ಸೇತುವೆ ನಿರ್ಮಾಣ ಕನಸು ನನಸು ಆಗಲಿದೆ. ಇದರಿಂದ ಪ್ರವಾಸಿಗರು ಹಾಗೂ ದುಬಾರೆ ಸಾಕಾನೆ ಶಿಬಿರದ ಹಾಡಿ ಜನರಿಗೆ ತುಂಬ ಅನುಕೂಲವಾಗಲಿದೆ ಎಂದು ಹೇಳಿದರು.

ನಂತರ ನಂಜರಾಯಪಟ್ಟಣದಲ್ಲಿ ಪಂಚಾಯತ್ ರಾಜ್ ಇಲಾಖೆ ವತಿಯಿಂದ ನಡೆಯುತ್ತಿರುವ ವಿವಿಧ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು. ನಂಜರಾಯಪಟ್ಟಣದ ಮುಖ್ಯರಸ್ತೆಯಿಂದ ಮೀನುಕೊಲ್ಲಿ ಹಾಡಿಗೆ ಹೋಗುವ ರಸ್ತೆಗೆ 5 ಲಕ್ಷ ರೂ. ವೆಚ್ಚ, ಗುಳಿಗ ಗ್ರಾಮಕ್ಕೆ ಹೋಗುವ ರಸ್ತೆಗೆ 5 ಲಕ್ಷ ರೂ., ಮಸೀದಿ ಹೋಗುವ ರಸ್ತೆಗೆ 5 ಲಕ್ಷ ರೂ., ಪಟ್ಲಮೆಂಟಿಗೆ ಹೋಗುವ ರಸ್ತೆ 8 ಲಕ್ಷ ರೂ., ದಾಸವಾಳ ಗ್ರಾಮದ ಮಂಜು, ರಘು ಮನೆ ಹೋಗುವ ರಸ್ತೆ 5 ರೂ., ಪಾರ್ಲಕೋಟಿ ಮನೆ ಕಡೆಗೆ ಹೋಗುವ ರಸ್ತೆ 5 ಲಕ್ಷ ರೂ. ವೆಚ್ಚದ ಅಭಿವೃದ್ಧಿಗೆ ಭೂಮಿಪೂಜೆ ನೆರವೇರಿಸಿದರು.

ಬಳಿಕ ತಾಲೂಕಿನ ಚಿಕ್ಲಿಹೊಳೆ ಜಲಾಶಯ ಬಳಿ ನೂತನವಾಗಿ ಆರಂಭಗೊಂಡ ಮತ್ಸ್ಯ ಸಂಜೀವಿನಿ ಫಿಶ್ ಕ್ಯಾಂಟೀನ್ ಹಾಗೂ ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಸವನಹಳ್ಳಿಯಲ್ಲಿ ಆರಂಭಗೊಂಡಿರುವ ಫಿಶ್ ಕ್ಯಾಂಟೀನ್ ಅನ್ನು ಶಾಸಕರು ಉದ್ಘಾಟಿಸಿದರು.

ಈ ಸಂದರ್ಭ ನಂಜರಾಯಪಟ್ಟಣ ಗ್ರಾಮ ಪಂಚಾಯಿತಿ ಸಿ.ಎಲ್.ವಿಶ್ವ ಉಪಾಧ್ಯಕ್ಷೆ ಕುಸುಮಾ, ಸದಸ್ಯರಾದ ಲೋಕನಾಥ್, ಶಮೀರಾ, ಗಿರಿಜ, ಗುಡ್ಡೆಹೊಸೂರು ಗ್ರಾಪಂ ಅಧ್ಯಕ್ಷೆ ರುಕ್ಮಿಣಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ವಿ.ಪಿ.ಶಶಿಧರ್, ಕುಶಾಲನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ತಾಲೂಕು ಪಂಚಾಯಿತಿ ಇಓ ಪರಮೇಶ್ ಕುಮಾರ್, ಪ್ರವಾಸೋದ್ಯಮ ಇಲಾಖೆ ಅಧಿಕಾರಿ ಅನಿತಾ ಭಾಸ್ಕರ್, ಮೀನುಗಾರಿಕೆ ಇಲಾಖೆ ಅಧಿಕಾರಿ ಮಿಲನಾ ಭರತ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಾಜಶೇಖರ್, ಸುಮೇಶ್, ಮುಖಂಡರಾದ ಮಂಜುನಾಥ್ ಗುಂಡೂರಾವ್, ಜೋಸೆಫ್ ವಿಕ್ಟರ್ ಸೋನ್ಸ್ ಇತರರು ಹಾಜರಿದ್ದರು.

ಕಡಂಗದಲ್ಲಿ ಭೂ ಪರಿವರ್ತನೆ ವಿರೋಧಿಸಿ ಜನಜಾಗೃತಿ


ಕಡಂಗದಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯಿಂದ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮ ನಡೆಯಿತು.

ಮಡಿಕೇರಿ, ಡಿ.4–ಕೊಡಗಿನ ಪರಿಸರಕ್ಕೆ ಮಾರಕವಾಗಿರುವ ಬೃಹತ್ ಲೇಔಟ್ ಹಾಗೂ ಮೆಗಾ ಟೌನ್‌ಶಿಪ್‌ಗಳಿಗಾಗಿ ಮಾಡುವ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿಯನ್ನು ತಕ್ಷಣ ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಕಡಂಗದಲ್ಲಿ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮ ನಡೆಸಿತು.

ಜನಜಾಗೃತಿ ನೇತೃತ್ವ ವಹಿಸಿ ಮಾತನಾಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ, ಕರ್ನಾಟಕ ಭೂ ಸುಧಾರಣಾ ಕಾಯ್ದೆ–2020–21ರ ಲೋಪದೋಷಗಳ ದುರ್ಲಾಭ ಪಡೆದು ರಾಜಕಾರಣಿಗಳು, ಅಧಿಕಾರಶಾಹಿಗಳು ಹಾಗೂ ಆರ್ಥಿಕ ಅಪರಾಧಿಗಳು ಕೊಡವ ಲ್ಯಾಂಡ್‌ನಲ್ಲಿ ಬೇನಾಮಿ ಆಸ್ತಿ ಹೊಂದಿದ್ದು, ಈ ಪವಿತ್ರ ನೆಲೆ, ಜಲಮೂಲ ಮತ್ತು ಪ್ರಕೃತಿಯನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಮುಂದೊಂದು ದಿನ ಕಡಿಯತ್ ನಾಡಿನ ಪವಿತ್ರ ಮಲೆತಿರಿಕೆ ದೇವ ನೆಲೆಯ ಕುಂದ್, ಮನಮೋಹಕ ಚೋಮ ಕುಂದ್ ಮತ್ತು ನಯನ ಮನೋಹರ ಬೆಪ್ಪುನಾಡಿನ ಅಸ್ಮಿತೆ ಉಳಿಯುವುದಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಕೊಡವ ಲ್ಯಾಂಡ್ ಉಳಿವಿಗಾಗಿ ಆದಿಮ ಸಂಜಾತ ಕೊಡವರ ಭೂಮಿಗೆ ಶಾಸನಬದ್ಧ ಭದ್ರತೆ ಕಲ್ಪಿಸುವುದು, ಕೊಡವರ ಸಂಸ್ಕೃತಿ, ಪರಂಪರೆ ಪೂರ್ವಾರ್ಜಿತ ಆಸ್ತಿ ರಕ್ಷಣೆಗೆ ಸ್ವಯಂ ನಿರ್ಣಯ ಹಕ್ಕು, ಕೊಡವ ಲ್ಯಾಂಡ್ ಮತ್ತು ಎಸ್‌ಟಿ ಸ್ಥಾನಮಾನ ಸ್ಥಾಪಿಸಬೇಕಾಗಿದೆ ಎಂದು ಒತ್ತಾಯಿಸಿದರು.

ಇದೇ ವೇಳೆ ಸಿಎನ್‌ಸಿಯ ಕೋಡಿರ ವಿನೋದ್, ಪಾಂಡಂಡ ಕಿಟ್ಟು, ಮಾತಂಡ ಕಂಬು ಉತ್ತಯ್ಯ, ಬಲ್ಲಚಂಡ ರವಿ, ಬೋಳಕಾರಂಡ ತಿಲಕ್, ಕೋದಂಡ ಸುರ, ಉದಿಯಂಡ ಚೆಂಗಪ್ಪ, ಚಂಬಂಡ ಜನತ್, ಅರೆಯಡ ಗಿರೀಶ್, ಬೇಪಡಿಯಂಡ ದಿನು, ಬಲ್ಬಿಕಾಳಂಡ ರಂಜಿ, ಚೋಳಂಡ ಸುಗುಣ, ಮಾತಂಡ ಮಧು, ಕುಲ್ಮಂಡ ಸಂಜು, ನೆರ್ಪಂಡ ಜಿಮ್ಮಿ, ಪಂದ್ಯಂಡ ಲೋಕೇಶ್ ಹಲವರು ಪಾಲ್ಗೊಂಡು ಬೃಹತ್ ಭೂ ಪರಿವರ್ತನೆ, ಭೂ ವಿಲೇವಾರಿ ವಿರುದ್ಧ ಹಾಗೂ ಸಿಎನ್‌ಸಿ ಬೇಡಿಕೆಗಳ ಪರ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಎಸ್ಪಿ ನೇತೃತ್ವದಲ್ಲಿ ಸರಕು ವಾಹನ ಚಾಲಕರ ಸಭೆ


ಮಡಿಕೇರಿಯಲ್ಲಿ ಎಸ್ಪಿ ಕೆ.ರಾಮರಾಜನ್ ನೇತೃತ್ವದಲ್ಲಿ ನಡೆದ ಸರಕು ವಾಹನ ಮಾಲೀಕರು ಮತ್ತು ಚಾಲಕರ ಸಭೆಯಲ್ಲಿ ಎಎಸ್ಪಿ ಸುಂದರ್ ರಾಜ್ ಮಾತನಾಡಿದರು.

ಮಡಿಕೇರಿ: ನಗರದ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಬುಧವಾರ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಹಾಗೂ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರ್ ರಾಜ್ ನೇತೃತ್ವದಲ್ಲಿ ಜಿಲ್ಲೆಯ ಲಾರಿ, ಟ್ಯಾಕ್ಸಿ, ಸರಕು ವಾಹನ ಮಾಲೀಕರು ಮತ್ತು ಚಾಲಕರ ಸಭೆ ನಡೆಯಿತು.

ಯಾವುದೇ ಅಪಘಾತಗಳಿಗೆ ಅವಕಾಶ ನೀಡಬಾರದು, ಸುರಕ್ಷಿತವಾಗಿ ವಾಹನ ಚಾಲನೆ ಮಾಡಬೇಕು. ಸಾರಿಗೆ ನಿಯಮ ಪಾಲಿಸಬೇಕು ಮತ್ತು ಪೊಲೀಸ್ ಇಲಾಖೆಗೆ ಸಂಪೂರ್ಣ ಸಹಕಾರ ನೀಡಬೇಕೆಂದು ಮಾಲೀಕರು ಹಾಗೂ ಚಾಲಕರಿಗೆ ತಿಳಿಸಲಾಯಿತು.

ಲಾರಿ ಮತ್ತು ಪಿಕ್‌ಅಪ್ ವಾಹನಗಳಲ್ಲಿ ಮರಳು, ಜಲ್ಲಿ ತೆಗೆದುಕೊಂಡು ಹೋಗುವಾಗ ಕಡ್ಡಾಯವಾಗಿ ಟಾರ್ಪಲ್ ಮುಚ್ಚಬೇಕು. ಟಾರ್ಪಲ್ ಮುಚ್ಚದೇ ತೆಗೆದುಕೊಂಡು ಹೋಗುವುದು ಕಂಡು ಬಂದಲ್ಲಿ ಅಥವಾ ಸಾರ್ವಜನಿಕರು ಭಾವಚಿತ್ರ ತೆಗೆದು ದೂರು ನೀಡಿದಲ್ಲಿ ಪ್ರಕರಣ ದಾಖಲಿಸಿ, ಕ್ರಮ ಕೈಗೊಳ್ಳಲಾಗುವುದು. ಟಿಂಬರ್ ಸಾಗಣೆ ವಾಹನಗಳಲ್ಲಿ ನಿಗದಿಪಡಿಸಿದಕ್ಕಿಂತ ಹೆಚ್ಚಿನ ಭಾರ ಹಾಕಬಾರದು. ಅತೀ ವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಬಾರದು. ಸವಾರರು ಯಾವುದೇ ಸಂಚಾರಿ ನಿಯಮ ಉಲ್ಲಂಘಿಸುವುದು ಕಂಡು ಬಂದಲ್ಲಿ ಸಾರ್ವಜನಿಕರು ಮಾಹಿತಿ ನೀಡಬಹುದು ಎಂದು ಎಸ್ಪಿ ತಿಳಿಸಿದರು.

ರಸ್ತೆಯಲ್ಲಿ ಅಪಘಾತ ಸಂಭವಿಸಿದಲ್ಲಿ ಸ್ಥಳೀಯ ಠಾಣೆ ಅಥವಾ ತುರ್ತು ಸಹಾಯವಾಣಿ 112 ಕರೆ ಮಾಡಬಹುದು. ಕಂಟ್ರೋಲ್ ರೂಂ: 9480804900 ಮತ್ತು ದೂ.ಸಂ: 08272–228330ಗೆ ಮಾಹಿತಿ ನೀಡಬೇಕು. ಮಾಹಿತಿ ನೀಡುವವರ ಹೆಸರನ್ನು ಬಹಿರಂಗಪಡಿಸುವುದಿಲ್ಲ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.

ಜನಕಲ್ಯಾಣ ಸಮಾವೇಶಕ್ಕೆ ಕೊಡಗಿನಿಂದ 8 ಸಾವಿರ ಜನ

ಮಡಿಕೇರಿ, ಡಿ.4–ಹಾಸನದಲ್ಲಿ ಡಿ.5ರಂದು ನಡೆಯುವ ಜನಕಲ್ಯಾಣ ಸಮಾವೇಶಕ್ಕೆ ಕೊಡಗಿನಿಂದ 5 ರಿಂದ 8 ಸಾವಿರ ಮಂದಿ ತೆರಳುವ ನಿರೀಕ್ಷೆ ಇದೆ ಎಂದು ಕಾಂಗ್ರೆಸ್ ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಟಿ.ಪಿ.ರಮೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ 6 ಬ್ಲಾಕ್ ಕಾಂಗ್ರೆಸ್ ಮಟ್ಟದಲ್ಲಿ ಆ ವ್ಯಾಪ್ತಿಯ ಕಾರ್ಯಕರ್ತರನ್ನು ಸಮಾವೇಶಕ್ಕೆ ಕರೆದೊಯ್ಯಲು 50 ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಮಡಿಕೇರಿ, ಕುಶಾಲನಗರ, ವಿರಾಜಪೇಟೆ, ಸೋಮವಾರಪೇಟೆಗೆ ಹೆಚ್ಚಿನ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸಮಾವೇಶಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು ಪಾಲ್ಗೊಳ್ಳುವಂತೆ ಈಗಾಗಲೇ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು, ಶಾಸಕರಾದ ಎ.ಎಸ್. ಪೊನ್ನಣ್ಣ, ಡಾ.ಮಂತರ್‌ಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಮನವಿ ಮಾಡಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೊಡಗು ಮುಡಾ ಅಧ್ಯಕ್ಷ ರಾಜೇಶ್ ಯಲ್ಲಪ್ಪ, ಮಾಜಿ ಅಧ್ಯಕ್ಷ ಎ.ಸಿ.ಚುಮ್ಮಿ ದೇವಯ್ಯ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಕೊಲ್ಯದ ಗಿರೀಶ್, ಮುನೀರ್ ಅಹಮ್ಮದ್ ಉಪಸ್ಥಿತರಿದ್ದರು.


ಮಡಿಕೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿದರು.

ಏಡ್ಸ್ ತಡೆಗೆ ಹೆಚ್ಚು ಅರಿವು ಅಗತ್ಯ

● ಜಿಲ್ಲಾ ನ್ಯಾಯಾಧೀಶೆ ಬಿ.ಎಸ್.ಭಾರತಿ ಸಲಹೆ ● ಚಾ.ನಗರದಲ್ಲಿ ಸಂಘ-ಸಂಸ್ಥೆಗಳಿಂದ ಜಾಗೃತಿ ಕಾರ್ಯಕ್ರಮ

ಚಾಮರಾಜನಗರ, ಡಿ.4–ಅರಿವಿನ ಕೊರತೆಯಿಂದ ಏಡ್ಸ್ ಸೋಂಕು ಹೆಚ್ಚಾಗುತ್ತಿದ್ದು, ಸೋಂಕಿತರನ್ನು ಸಮಾಜದಲ್ಲಿ ತಾರತಮ್ಯದಿಂದ ನೋಡಲಾಗುತ್ತಿದೆ. ಅವರನ್ನು ಇತರರಂತೆ ಸಹಜವಾಗಿ ಕಾಣಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷೆ ಹಾಗೂ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಚೈತನ್ಯ ನೆಟ್‌ವರ್ಕ್ ಇನ್ನಿತರ ಸಂಘ–ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಏಡ್ಸ್ ತಡೆ ದಿನದ ಅಂಗವಾಗಿ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜ್ಞಾನದ ಕೊರತೆಯಿಂದ ಏಡ್ಸ್ ಸೋಂಕು ಹೆಚ್ಚಾಗುತ್ತಿದೆ. ಇದೊಂದು ಮಾರಕ ಕಾಯಿಲೆಯಾಗಿದ್ದು, ಲೈಂಗಿಕ ಆಕರ್ಷಣೆಗೆ ಒಳಗಾಗದೆ ಉತ್ತಮ ಜೀವನ ರೂಪಿಸಿಕೊಳ್ಳಬೇಕು. ಕೆಲ ಸಂದರ್ಭದಲ್ಲಿ ಅರಿವಿಲ್ಲದೆ ಸೋಂಕು ಹರಡುತ್ತದೆ. ಇದರಿಂದ ಬಹಳ ಜಾಗರೂಕರಾಗಿರಬೇಕು. ಹೆಚ್‌ಐವಿ ಬಗ್ಗೆ ಯುವ ಸಮೂಹದಲ್ಲಿ ಜಾಗೃತಿ ಮೂಡಿಸುವುದು ಬಹಳ ಮುಖ್ಯ. ಈ ರೀತಿಯ ಅರಿವು ಕಾರ್ಯಕ್ರಮಗಳು ಇನ್ನಷ್ಟು ನಡೆಯಬೇಕಿದೆ ಎಂದು ತಿಳಿಸಿದರು.



ಚಾಮರಾಜನಗರ ಜಿಲ್ಲಾಡಳಿತ ಭವನದ ಮುಂಭಾಗ ಏಡ್ಸ್ ತಡೆ ಜಾಗೃತಿ ಜಾಥಾಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ ಚಾಲನೆ ನೀಡಿದರು.

ಮಡಿಕೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಪಿ.ಎಸ್.ಗುರುಪ್ರಸಾದ್ ಮಾತನಾಡಿ, ಹೆಚ್‌ಐವಿ ಸೋಂಕು ಬಗ್ಗೆ ಮುಕ್ತವಾಗಿ ಮಾತನಾಡಲು ಹಿಂಜರಿಕೆ ಇದೆ. ಇದರಿಂದ ಅರಿವು ಮೂಡಿಸಲು ಸಾಧ್ಯವಾಗುತ್ತಿಲ್ಲ. ಏಡ್ಸ್ ಬಗ್ಗೆ ಮಾತನಾಡುವುದಕ್ಕೆ ನಾಚಿಕೆ ಪಡದೆ ತಿಳಿವಳಿಕೆ ನೀಡಬೇಕು. ಬೀದಿ ನಾಟಕ ಇನ್ನಿತರ ಕಾರ್ಯಕ್ರಮಗಳ ಮೂಲಕ ಸೋಂಕಿನ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ಸಮತಾ ಸೊಸೈಟಿಯ ದೀಪ ಬುದ್ಧೆ ಮಾತನಾಡಿ, ನಮ್ಮ ಸಂಸ್ಥೆಯಿಂದ ಹೆಚ್‌ಐವಿ ತಡೆಗೆ ನಿರಂತರವಾಗಿ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ. ಒಬ್ಬರಿಂದ ಮತ್ತೊಬ್ಬರಿಗೆ ರಕ್ತ ನೀಡುವಾಗ ಸೂಜಿ, ಸಿರಂಜುಗಳನ್ನು ಬಳಸುವಾಗ ಜಾಗರೂಕರಾಗಿರಬೇಕು. ಜಾಗೃತಿಯಿಂದ ಹೆಚ್‌ಐವಿ ತಡೆಗಟ್ಟಬಹುದು. ಈ ನಿಟ್ಟಿನಲ್ಲಿ ಎಲ್ಲರ ಜವಾಬ್ದಾರಿ ಇದೆ ಎಂದು ತಿಳಿಸಿದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಜಿಲ್ಲಾಡಳಿತ ಭವನದ ಮುಂಭಾಗ ಏಡ್ಸ್ ತಡೆ ಜಾಗೃತಿ ಜಾಥಾಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ, ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಪಂ ಸಿಇಓ ಮೋನಾ ರೋತ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹೀರಾಲಾಲ್ ಚಾಲನೆ ನೀಡಿದರು. ಜಾಥಾ ಬಳಿಕ ಜಿಲ್ಲಾಡಳಿತ ಭವನದ ಮುಖ್ಯದ್ವಾರ ಬಳಿ ಕಲಾವಿದ ಶಾಂತರಾಜು ನೇತೃತ್ವದ ರಂಗ ದೇಗುಲ ಕಲಾ ತಂಡದಿಂದ ಏಡ್ಸ್ ತಡೆ ಜಾಗೃತಿ ಬೀದಿನಾಟಕ ಪ್ರದರ್ಶಿಸಲಾಯಿತು.

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಎಂ.ಎಸ್.ರವಿಕುಮಾರ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ್, ಪ್ರೊ.ಶಿವಸ್ವಾಮಿ, ಚೈತನ್ಯ ನೆಟ್‌ವರ್ಕ್ ಸಂಸ್ಥೆಯ ಭಾಗ್ಯಮ್ಮ, ಸ್ನೇಹ ಜ್ಯೋತಿ ಸಂಸ್ಥೆಯ ಚಂದ್ರಶೇಖರ ಪಾಟೀಲ್, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಅರಣ್ಯ ಇಲಾಖೆ ಹಿರಿಯ ಅಧಿಕಾರಿ ಶ್ರೀಪತಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಸ್.ಚಿದಂಬರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

> ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಏಡ್ಸ್ ಹರಡುತ್ತದೆ. ಈ ರೋಗದ ಬಗ್ಗೆ ಹೆಚ್ಚು ಎಚ್ಚರಿಕೆ ವಹಿಸಬೇಕು. ಆರೋಗ್ಯಕರ ಜೀವನಕ್ಕಾಗಿ ಪ್ರತಿಯೊಬ್ಬರು ವಿಶೇಷ ಜಾಗೃತರಾಗಬೇಕು.
> –ಈಶ್ವರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ

ಎಸ್‌ಸಿ, ಎಸ್‌ಟಿ ಹಿತರಕ್ಷಣಾ ಸಮಿತಿ ಸಭೆ ಬಹಿಷ್ಕಾರ


ಚಾಮರಾಜನಗರ ತಾಲೂಕು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಹಿತರಕ್ಷಣಾ ಸಮಿತಿ ಸಭೆ ಬಹಿಷ್ಕರಿಸಿ ಹೊರ ನಡೆದ ದಲಿತ ಮುಖಂಡರು.

ಚಾಮರಾಜನಗರ, ಡಿ.4–ವೈದ್ಯರ ನಿರ್ಲಕ್ಷ್ಯದಿಂದ ಮೃತಪಟ್ಟ ನಗರದ ಅಂಬೇಡ್ಕರ್ ಬಡಾವಣೆ ನಿವಾಸಿ ನೇತ್ರಾವತಿ ಕುಟುಂಬಕ್ಕೆ ನೌಕರಿ ಕೊಡಿಸಲು ವಿಳಂಬ ಮಾಡಿದ್ದೀರಿ ಎಂದು ಆರೋಪಿಸಿ ಮುಖಂಡರು ತಾಲೂಕು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಹಿತರಕ್ಷಣಾ ಸಮಿತಿ ಸಭೆ ಬಹಿಷ್ಕರಿ ಹೊರ ನಡೆದರು.

ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ತಹಸೀಲ್ದಾರ್ ಅಧ್ಯಕ್ಷತೆಯಲ್ಲಿ ನಡೆದ ತಾಲೂಕು ಮಟ್ಟದ ಎಸ್‌ಸಿ, ಎಸ್‌ಸಿ ಹಿತರಕ್ಷಣಾ ಸಮಿತಿ ಸಭೆಯಲ್ಲಿ ಮುಖಂಡರಾದ ಸಿ.ಕೆ.ಮಂಜುನಾಥ್, ಸಿ.ಎಂ.ಕೃಷ್ಣಮೂರ್ತಿ, ಸಿ.ಎಂ.ಶಿವಣ್ಣ, ಕೆ.ಎಂ.ನಾಗರಾಜು, ಬ್ಯಾಡಮೂಡ್ಲು ಬಸವಣ್ಣ, ರಾಮಸಮುದ್ರ ನಾಗರಾಜು, ಶ್ರೀಕಂಠ, ಭಾನುಪ್ರಕಾಶ್, 4 ವರ್ಷಗಳ ಹಿಂದೆ ನಗರದ ಅಂಬೇಡ್ಕರ್ ಬಡಾವಣೆಯ ನಿವಾಸಿ ನೇತ್ರಾವತಿ ಜಿಲ್ಲಾಸ್ಪತ್ರೆಯಲ್ಲಿ ಹೆರಿಗೆಗೆ ದಾಖಲಾಗಿದ್ದರು. ಈ ವೇಳೆ ತಾಯಿ, ಮಗು ಮೃತಪಟ್ಟಿರುತ್ತಾರೆ. ಆದರೆ, ಇವರ ಕುಟುಂಬಕ್ಕೆ ಇನ್ನೂ ನೌಕರಿ ನೀಡಿಲ್ಲ. ಮೃತರ ಕುಟುಂಬಕ್ಕೆ ನೌಕರಿ ನೀಡುವ ತನಕ ಸಭೆ ನಡೆಸಬಾರದು ಎಂದು ಸಭೆಯನ್ನು ಬಹಿಷ್ಕರಿಸಿ ಹೊರ ನಡೆಸಿದರು.

ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ (ಡಿ.ಜಿ.ಸಾಗರ್ ಬಣ) ಸಂಯೋಜಕ ಸಿ.ಎ.ಶಿವಣ್ಣ ಮಾತನಾಡಿ, ಇಂದಿನ ಸಭೆಗೆ ಕೆಲವು ಅಧಿಕಾರಿಗಳು ಗೈರಾಗಿದ್ದರು. ಮೃತ ನೇತಾವತಿ ಕುಟುಂಬಕ್ಕೆ ನೌಕರಿ ನೀಡಿಸುವಂತೆ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗಿದೆ. ಆದರೆ, ಇಲ್ಲಿಯ ತನಕ ಯಾವುದೇ ಕ್ರಮ ಕೈಗೊಳ್ಳದೆ ವಿಳಂಬ ಮಾಡಲಾಗುತ್ತಿದೆ. ಆದ್ದರಿಂದ ಖಂಡಿಸಿ ಸಭೆ ಬಹಿಷ್ಕರಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪಿ.ಸಂಘಸೇನಾ, ರಾಮಚಂದ್ರ ಮೂರ್ತಿ, ದಡದಹಳ್ಳಿ ಶಂಕರ್, ಸ್ವಾಮಿ, ಮಹೇಶ್ ಬುದ್ಧ, ರಮೇಶ್, ಗಣೇಶ್ ಬಂಗಾರು, ಮಹೇಶ್ ಬದನಗುಪ್ಪೆ ಇತರರು ಹಾಜರಿದ್ದರು.

ರೇಣುಕಾ ದೇವಿ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ


ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ರೇಣುಕಾದೇವಿ ಮತ್ತು ತಂಡದವರು ವಿಜಯೋತ್ಸವ ಆಚರಿಸಿದರು.

ಚಾಮರಾಜನಗರ, ಡಿ.4–ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾಗಿ ಡಾ.ರೇಣುಕಾದೇವಿ ಆಯ್ಕೆಯಾದರು.

ನಗರದ ಜಿಲ್ಲಾ ಸರ್ಕಾರಿ ನೌಕರರ ಭವನದಲ್ಲಿ ಅಧ್ಯಕ್ಷ, ಖಜಾಂಚಿ ಹಾಗೂ ರಾಜ್ಯ ಪರಿಷತ್ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ತಮ್ಮ ತಂಡವರನ್ನು ಗೆಲ್ಲಿಸಿಕೊಳ್ಳುವ ಮೂಲಕ ರಾಜ್ಯದಲ್ಲೇ ಪ್ರಥಮ ಮಹಿಳಾ ಜಿಲ್ಲಾಧ್ಯಕ್ಷೆ ಎಂಬ ಹೆಗ್ಗಳಿಕೆಗೆ ರೇಣುಕಾದೇವಿ ಪಾತ್ರರಾಗಿದ್ದಾರೆ. ಅಧ್ಯಕ್ಷ ಸ್ಥಾನ ಪಡೆಯಲೇಬೇಕೆಂಬ ಸಂಕಲ್ಪ ದೊಂದಿಗೆ ಪ್ರಥಮ ಬಾರಿಗೆ ಸಂಘದ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಅಧಿಕಾರ ಹಿಡಿಯುವಲ್ಲಿ ರೇಣುಕಾದೇವಿ ಮತ್ತು ತಂಡ ಯಶಸ್ವಿಯಾಗಿದೆ.


ರೇಣುಕಾದೇವಿ 37 ಮತ ಪಡೆದು ಪ್ರತಿಸ್ಪರ್ಧಿ ಸಂಘದ ಹಾಲಿ ಅಧ್ಯಕ್ಷ ಚಂದ್ರಶೇಖರ್ (28 ಮತ) ಅವರನ್ನು ಸೋಲಿಸಿದರು. ರಾಜ್ಯ ಪರಿಷತ್ ಸ್ಥಾನಕ್ಕೆ ಸ್ಪರ್ಧಿಸಿದ್ದ ನಟರಾಜು 36 ಮತ ಪಡೆದು ಬಸವರಾಜು ಅವರನ್ನು (29 ಮತ) ಸೋಲಿಸಿದರು. ಖಜಾಂಚಿ ಸ್ಥಾನಕ್ಕೆ ಶಿವಕುಮಾರಯ್ಯ 37 ಮತ ಪಡೆದು ರಕ್ಷಿತ್ ಕುಮಾರ್ ಅವರನ್ನು (28 ಮತ) ಪರಾಭಾವಗೊಳಿಸಿದರು. ಚುನಾವಣಾಧಿಕಾರಿಯಾಗಿ ಸಿದ್ದಪ್ಪ ಹಾಗೂ ಸಹಾಯಕ ಚುನಾವಣಾಧಿಕಾರಿ ಬಸವಣ್ಣ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಮಹದೇವಸ್ವಾಮಿ, ಮಹದೇವಯ್ಯ, ಮಧುಕುಮಾರ್, ನಂಜುಂಡ, ರವಿ, ಮಹೇಂದ್ರ, ಭರತ್ ಭೂಷಣ್, ಎಚ್.ಡಿ.ಮಹೇಶ್, ಬಾಲಸುಬ್ರಹ್ಮಣ್ಯ, ನಾಗರಾಜು, ವೇಲುಕುಮಾರ್, ರಾಹುಲ್, ಯೋಗಪ್ರಕಾಶ್, ಸಿ.ಕೆ.ರಾಮಸ್ವಾಮಿ, ನೇತ್ರಾವತಿ, ಮೊದಲಾದವರು ಇದ್ದರು.

ಇಂದು ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರದಲ್ಲಿ ವ್ಯತ್ಯಯ

ಚಾಮರಾಜನಗರ, ಡಿ.4–ಹಾಸನದಲ್ಲಿ ಗುರುವಾರ (ಡಿ.5) ನಡೆಯಲಿರುವ ಜನಕಲ್ಯಾಣ ಸಮಾವೇಶಕ್ಕೆ ಚಾಮರಾಜನಗರ ವಿಭಾಗದಿಂದ 275 ಬಸ್‌ಗಳನ್ನು ಒಪ್ಪಂದದ ಮೇರೆಗೆ ನೀಡಿರುವುದರಿಂದ ಡಿ.5ರಂದು ಜಿಲ್ಲಾ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್‌ಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೆಎಸ್‌ಆರ್‌ಟಿಸಿ ಚಾಮರಾಜನಗರ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಬೆಂಡರವಾಡಿ ಬಳಿ ಕಾರು ಡಿಕ್ಕಿ; ಬೈಕ್ ಸವಾರ ಸಾವು



ಮಹದೇವಸ್ವಾಮಿ

ಚಾಮರಾಜನಗರ, ಡಿ.4–ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ಬೆಂಡರವಾಡಿ ಬಳಿಯ ಚಾಮರಾಜನಗರ–ನಂಜನಗೂಡು ರಸ್ತೆಯಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ತಾಲೂಕಿನ ಹೆಗ್ಗವಾಡಿ ಗ್ರಾಮದ ಮಹದೇವಸ್ವಾಮಿ(34) ಮೃತಪಟ್ಟ ಯುವಕ. ಈತ ನಗರದ ಅಂಗಡಿಯೊಂದರಲ್ಲಿ ಕೆಲಸ ಮುಗಿಸಿ ರಾತ್ರಿ ಸ್ವಗ್ರಾಮಕ್ಕೆ ತೆರಳುತ್ತಿದ್ದ. ಈ ವೇಳೆ ನಂಜನಗೂಡಿನಿಂದ ಚಾಮರಾಜನಗರಕ್ಕೆ ಬರುತ್ತಿದ್ದ ಕಾರು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಮಹದೇವಸ್ವಾಮಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಚಾಮರಾಜನಗರ ಸಂಚಾರಿ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಸಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಮೃತದೇಹ ಹಸ್ತಾಂತರಿಸಿದರು. ಈ ಸಂಬಂಧ ಚಾಮರಾಜನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಂಜಾ ಸಾಗಿಸುತ್ತಿದ್ದವನ ಬಂಧನ


ನಟರಾಜು

ಕೊಳ್ಳೇಗಾಲ, ಡಿ.4–ಒಣ ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿಯನ್ನು ಗ್ರಾಮಾಂತರ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಮಧುವನಹಳ್ಳಿ ಗ್ರಾಮದ ನಟರಾಜು (48) ಬಂಧಿತ ಆರೋಪಿ. ಈತ ಗಾಂಜಾವನ್ನು ಮಧುವನಹಳ್ಳಿ ಕಡೆಯಿಂದ ಲೊಕ್ಕನಹಳ್ಳಿ ರಸ್ತೆ ಕಡೆಗೆ ಸಾಗಿಸುತ್ತಿದ್ದ. ಈ ವೇಳೆ ದಾಳಿ ನಡೆಸಿದ ಪೊಲೀಸರು, ಈತನನ್ನು ಬಂಧಿಸಿ 566 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹನೂರಿನಲ್ಲಿ ಕನ್ನಡ ಜ್ಯೋತಿ ರಥಯಾತ್ರೆಗೆ ಚಾಲನೆ...


ಹನೂರಿನಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಚಾರ ಕನ್ನಡ ಜ್ಯೋತಿ ರಥಯಾತ್ರೆಗೆ ತಹಸೀಲ್ದಾರ್ ಗುರುಪ್ರಸಾದ್ ಚಾಲನೆ ನೀಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಗುರುಲಿಂಗಯ್ಯ, ತಾಲೂಕು ಮಟ್ಟದ ಅಧಿಕಾರಿಗಳು, ಕನ್ನಡಪರ ಸಂಘಟನೆಗಳ ಅಧ್ಯಕ್ಷರು, ಪದಾಧಿಕಾರಿಗಳು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
20X30, 30X40 (BANK LOAN AVAILABLE) SRIRAMPURA RING ROAD, MYSORE
8050345574

ವೆರಿಕೋಸ್‌ವೇನ್ ತೊಂದರೆಯೇ? ಮಂಡಿನೋವಿನ ಸಮಸ್ಯೆಯೇ?
ನುರಿತ ತಜ್ಞರಿಂದ ಸಂಶೋಧಿತ ಔಷಧಿ / ಮುಲಾಮು/ತೈಲವನ್ನು ಮೇಲೆ ಮಸಾಜ್ ಮಾಡುವ ಮೂಲಕ ಪರಿಹಾರಕಾರಿ ಚಿಕಿತ್ಸೆಯನ್ನು ನೀಡಲಾಗುತ್ತದೆ.
ಡಾ|| ಸಹನಾ.ವಿ
BAMS, PGDAN, PGDAC, Mysore
8861137033

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ಪಿರಿಯಾಪಟ್ಟಣದಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಆಕರ್ಷಕ ವೇತನ ESI, PF ಜೊತೆಗೆ ಉಚಿತ ಊಟ ವಸತಿಯನ್ನು ನೀಡಲಾಗುವುದು.
9901236401
9535784363

ಕೆಲಸಕ್ಕೆ ಬೇಕಾಗಿದ್ದಾರೆ
ಫೆಸ್ಟ್ ಕಂಟ್ರೋಲ್ ಸರ್ವಿಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಸತಿ+ಊಟ+ESI+PF ಸೌಲಭ್ಯವಿದೆ.
ಸಂಬಳ: 12,000/– ಮೈಸೂರು
9343550005
8105364533

MUDA ALLOTED SITE FOR SALE
ವಿಜಯನಗರ 4ನೇ ಹಂತ 2ನೇ ಫೇಸ್‌ನಲ್ಲಿ 40×60 NORTH Facing ಸೈಟ್.
Mob: 9886048471

ತಕ್ಷಣ ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಪಂಪ್ ಕ್ಯಾಷಿಯರ್ ಹುದ್ದೆಗೆ ಪುರುಷರು / ಮಹಿಳೆಯರು ಬೇಕಾಗಿದ್ದಾರೆ. ಅನುಭವಿಗಳಿಗೆ ಮೊದಲ ಆದ್ಯತೆ. ಖುದ್ದಾಗಿ ಸಂಪರ್ಕಿಸಿ:
ಶ್ರೀ ಸರ್ವೀಸ್ ಸ್ಟೇಷನ್ ಸರಸ್ವತಿಪುರಂ, ಮೈಸೂರು.
Mob: 9880567272

ಶ್ರೀ ಮೂರ್ತಿ ಟೂರಿಸ್ಟ್
25-12-24 ಬುಧವಾರ ಬೆಳಗ್ಗೆ 5ಕ್ಕೆ ಹೊರಟು 3 ಶ್ರೀರಂಗನಾಥ ದರ್ಶನಕ್ಕಾಗಿ (ಆದಿ, ಮಧ್ಯ, ಅಂತ್ಯ ರಂಗನಾಥ) 26-12-24 ಬೆಳಗ್ಗೆ 11.30ಕ್ಕೆ ವಾಪಸ್ ಬರುವ ಪ್ರವಾಸ (25 ರಂದು ಬೆಳಗಿನ ತಿಂಡಿ, ಕಾಫಿ, ಮಧ್ಯಾಹ್ನದ ಊಟ ದೊರೆಯುತ್ತದೆ).
KSRTC Ordinary Bus ನಲ್ಲಿ
Mob: 94807 33069
Tickets to your doorstep.

SK CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ... ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elvation ಸಹಿತ ನಾವೆ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ.
9620528490

ಸೌಮ್ಯ ಫ್ಯಾಷನ್
ಉಚಿತ ಟೈಲರಿಂಗ್ ತರಬೇತಿ
–30 ದಿನಗಳ ಉಚಿತ ಟೈಲರಿಂಗ್ ತರಬೇತಿ –ಸರ್ಟಿಫಿಕೇಟ್ ಶುಲ್ಕ ರೂ. 1500/–ಮಾತ್ರ ಪ್ರವೇಶಾತಿ ಪ್ರಾರಂಭವಾಗಿದೆ.
ಸ್ಥಳ: #6, ಬಿ.ಎಸ್.ಎನ್.ಎಲ್.ಆಫೀಸ್, ಹಿಂಭಾಗ, ಬೆಮೆಲ್ ನಗರ, ಲ್ಯಾಸ್ಕ್ಯಾನ್, ಶ್ರೀರಾಂಪುರ 2ನೇ ಹಂತ, ಮೈಸೂರು–570023
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಸೌಮ್ಯ
8310855102

ನಿಮ್ಮ ಹೊಲಿಗೆ ಯಂತ್ರ ಕೆಟ್ಟಿದೆಯೇ? ನಮ್ಮಲ್ಲಿ ಎಲ್ಲಾ ತರಹದ ಹೊಲಿಗೆ ಯಂತ್ರಗಳನ್ನು ರಿಪೇರಿ ಮಾಡಿಕೊಡಲಾಗುವುದು. ಮತ್ತು ಎಕ್ಸ್‌ಚೇಂಜ್ ಆಫರ್ ಲಭ್ಯವಿರುತ್ತದೆ.
Home Service Also available
ಇಂದೇ ಸಂಪರ್ಕಿಸಿ:
ಗಾನವಿ ಇಂಟರ್‌ನ್ಯಾಷನಲ್
#22/2 ಚಂದ್ರಗುಪ್ತ ರಸ್ತೆ, ಸಬರ್ಬ್ ಬಸ್ ಸ್ಟಾಂಡ್ ಹತ್ತಿರ, ಮೈಸೂರು
9620476665
6360737581, 0821-2591111

ಬೇಕಾಗಿದ್ದಾರೆ
ನೂತನವಾಗಿ ಪ್ರಾರಂಭವಾಗಿರುವ ಅಲ್ಯುಮ್ ಕಂಪನಿಗೆ Sales Executive ಬೇಕಾಗಿದ್ದಾರೆ. ವಿದ್ಯಾರ್ಹತೆ: PUC, Any Degree ಬೈಕ್ ಉಳ್ಳವರಿಗೆ ಮೊದಲ ಆದ್ಯತೆ
Salary 13000 to 15000
ಬೈಕ್ ಉಳ್ಳವರಿಗೆ ಮೊದಲ ಆದ್ಯತೆ
9036630044

ಯುವಕರು ಬೇಕಾಗಿದ್ದಾರೆ
ಸ್ವಯಂ ಉದ್ಯೋಗ ಉಚಿತ ತರಬೇತಿ, ವಸತಿ
Age: 18-25
7760810381

HOTEL JYOTHI INTERNATIONAL
B M ROAD MANDYA
WANTED
Nati Style Cook, North Indian Cook, Dosa Cook, Cashier, Waiters, Security Guards
8867702615

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ Office Showroom & Company ಗಳಿಗೆ 7th, 10th, PUC, Degree, ITI, Diploma, Pass/Fail ಆದ ಯುವಕ/ಯುವತಿಯರು Packing, Helper, Telecalling, Data Entry, Receptionist, Line incharge, Billing ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಹುದ್ದೆಗೆ ಅನ್ವಯ ಸಂಬಳ 14,500 ರಿಂದ 39,000 (ESI, PF, OT) ಸೇರಿ
6366141586
6364103418

ಬೇಕಾಗಿದ್ದಾರೆ
ಕೇಬಲ್ ಟಿ.ವಿ. ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಮಂಚೇಗೌಡನಕೊಪ್ಪಲು, ಹೆಬ್ಬಾಳ್ ಕುಂಬಾರಕೊಪ್ಪಲ್, ವಿಜಯನಗರ, ಹಿನಕಲ್ ಮತ್ತು ಸುತ್ತಮುತ್ತಲಿನವರಿಗೆ ಮೊದಲ ಆದ್ಯತೆ.
9900192137

ಬೇಕಾಗಿದ್ದಾರೆ
1) ಸಿವಿಲ್ ಇಂಜಿನಿಯರಿಂಗ್, ಡಿಪ್ಲೊಮಾ ಅಥವಾ ಪದವೀಧರರು (1 ಅಥವಾ 2 ವರ್ಷ ಲೇಔಟ್ ಕಾಮಗಾರಿ ಗಳಲ್ಲಿ ಅನುಭವ).
2) ಡ್ರೈವರ್. ಸಂಪರ್ಕಿಸಿ:
Mob: 9449863015

SITE+BUILDG Pkg with Loan
In Fast Developing Areas

Site	Area	Buildg	Total Cost	Down Paymt
20x40 E	Srinidhi, Jhansr Rd	8 Square	64 Lac	35 Lac
30x40 E	SBM, Bogadi	10 Sq	118Lac	60 Lac
30x50 E	Christ schl Datgaly	13 Sq	130 Lac	80 Lac
40x60 E	University	16 Sq	116 Lac	90 Lac
40x50 N	Dattagalli	14 Sq	142 Lac	85 Lac

Tailor Made Projects To Suit Individuals Budget/taste
Trusted Name Since 28yrs Call - 9886697052
Wanted Sites Of All Size from Genuine owners

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Ankathana Road, kuvempunagar, Mysuru
MYSURU 9611028523 BANGALORE 9343142258

ಬೇಕಾಗಿದ್ದಾರೆ
ಮಂಗಳೂರಿನ ಬ್ರಾಹ್ಮಣ ಕುಟುಂಬಕ್ಕೆ, ಬ್ರಾಹ್ಮಣ ಅಡುಗೆ ತಿಂಡಿ ಮಾಡುವವರು ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಲಭ್ಯವಿದೆ.
Mob: 9663312343

BECOME A TEACHER
Nursery Teachers Training
SSLC ಪಾಸ್ PUC, Degree ಪಾಸ್ / ಫೇಲ್!
ಟ್ರೈನಿಂಗ್ ನಂತರ ತಕ್ಷಣ ಕೆಲಸ
ಬನ್ನಿ, ಸೇರಿ, ಪಾಸಾಗಿ, ಸಂಪಾದಿಸಿ.
ವಿವರಗಳಿಗೆ
Watsapp/Call 9113980741

ಮಂಡಿನೋವು
ಮಂಡಿನೋವು, ಸೊಂಟನೋವು, ಬೆನ್ನು ನೋವು, ಎಷ್ಟೇ ಹಳೆಯದಾದರೂ ಹಾಗೂ ಎಷ್ಟೇ ಜಾಸ್ತಿ ಇದ್ದರೂ 100% ಆಯುರ್ವೇದ ತೈಲ ಉಪಯೋಗಿಸಿ ಸಂಪೂರ್ಣ ಗುಣಮುಖರಾಗಿ ನೇರ ಸಂಪರ್ಕಿಸಿ
6361740552

28x40 S/W
ಕಾರ್ನರ್ ಸೈಟು ಮಾರಾಟಕ್ಕಿದೆ 15 ಲಕ್ಷಗಳು, 30x46 N/F ಸೈಟು ಮಾರಾಟಕ್ಕಿದೆ. 18 ಲಕ್ಷದ 50 ಸಾವಿರಗಳು GSS ಲೇಔಟ್ ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

30x40 Site Required
Near M-Pro/Devegowda Circle / Vasu college (No Resellers Please)
90088 28866

SALE - FARM HOUSE
(RERA Apprvd - Villa plot)
9800 Sqft - 8 Sq Bldg - 62.00 Lakhs
8000 Sqft - 8 sq Bldg - 49.00 Lakhs
Main Occupants From HAL - in 14 Acre Boundary on NH 275(Proposed)
After Bilikere - K R Nagar RD.
Call - 9886697052

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ತಕ್ಷಣ ಬೇಕಾಗಿದ್ದಾರೆ
J K Tyre Industries Ltd ಮೈಸೂರು, ಕೆಲಸ ಮಾಡಲು. SSLC Pass or Fail ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.ಸಂಬಳ: 15,000/– ಅನುಕೂಲತೆ: ESI, PF, Canteen ಸೌಲಭ್ಯವಿರುತ್ತದೆ.
8105651601, 9611601179
6362491336

JOB'S IN MYSORE
Age (18-24) 10th, PUC ಆದಂತ Tranee Managemer ಗಳಾಗಿ Mysore & Ramanagara ವಿಭಾಗಕ್ಕೆ Earn (11200/–ರಿಂದ 18600/–pm ಪಡೆಯುವವರಿಗೆ ಮಾತ್ರ ವಸತಿ No Fee
ಖುದ್ದಾಗಿ ಸಂಪರ್ಕಿಸಿ: ಕಾವ್ಯ
9342827788

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನೀಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ ರೂ. 7600 (24 CT)
Mob: 9108146123

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನೇಯ ದೇವಿ ಆರಾಧಕರು
ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖ್ಯಾತಿ ಆಗಿ ನೆಲೆಸಿರುತ್ತಾರೆ. ಅಂಜನ ಹಾಕಿ ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ಪಂಚಕಾಂತರಿಸಿನಲ್ಲಿ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿಮಗೆ ಆಗುವ ಮಾತಿ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೆ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳ 10,000 ರಿಂದ 20,000 ಸಂಪಾದಿಸಿ
9731891409

ಕಳೆದಿದೆ
ಎಂ.ಡಿ. ಮಧುಸೂದನ್, ನಂ. 3076/5, 4ನೇ ಕ್ರಾಸ್, ಗೋಕುಲಂ ಪಾರ್ಕ್ ಎದುರು, ವಿ.ವಿ. ಮೊಹಲ್ಲಾ, ಮೈಸೂರು, ನಮಗೆ ಸೇರಿದ ಮೈಸೂರು ನಗರ, ವಿ.ವಿ. ಮೊಹಲ್ಲಾ, 4ನೇ 'ಎ' ಬ್ಲಾಕ್, ನಿವೇಶನ ಸಂಖ್ಯೆ 2693ರ 45x60 ಅಳತೆಯ ಸ್ವತ್ತಿನ ಸಿ.ಐ.ಟಿ.ಬಿ. (ಮುಡಾ) ವತಿಯಿಂದ ವಿತರಿಸಲ್ಪಟ್ಟ ಲೀಸ್ ಕಂ ಸೇಲ್ ಡೀಡ್ ದಿನಾಂಕ 20-11-2024ರಂದು ಮನೆಯಿಂದ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
8105989749, 9663859695

SSGC ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ ರೂ.7500 (24CT)
9148436811

REQUIRED
BAR MAN, (Cocktail-Mocktail) Cashier (Computer Knowledge), Kitchen Supervisor.
Walk-in-Interview 10 am to 6pm, 3 Star Hotel, Mysore
9448142639

WANTED
Teachers for the reputed CBSE School in Mysore City residential / non residential for the subjects Hindi, English and PE to teach from 6th - 10th Std.
7676522224, 8495983613

WANTED FOR DAIRY FARM
Delivery Person: 2 Nos.
Contact:
Mob: 6364399186

SITE FOR SALE
30x40, S/F, Corporation Khatha, Bogadi North (Near Harsha Bar). Price: Rs. 11,000 per sq.ft. (Nego.)
Mob: 7019769205

House for Rent
1 BHK, ground floor #300/1, D. Subbaiah Road, Next to Sa.Ra. Mahesh house, Mysore.
Mob: 9480169436

ಕಳೆದಿದೆ
ಮಾಧುರಿ ಎನ್., 1/ಎ, 1ನೇ ಕ್ರಾಸ್, ರಾಘವೇಂದ್ರ ನಗರ, ಮೈಸೂರು–570 011. ನನಗೆ ಸೇರಿದ ನಿವೇಶನ ಮಾಲಿಕ 11ಎ, 1990 ಮೂಲ ಕ್ರಯಪತ್ರ, ದಾನ ಪತ್ರ, ಲಭಿಸಿದ್ದರುವ ಗ್ರಾಮ, ಸರ್ವೆ ನಂ. 12, ಮೈಸೂರು ಸಂಬಂಧಿಸಿದ ಮೂಲ ದಾಖಲಾತಿ ಗಳು ಹಾಗೂ ಬ್ಯಾಂಕ್ ಚಲನ್ ಬ್ಯಾಂಕ್, ಚಾಮುಂಡಿ ಪುರಂ ಶಾಖೆ, ಮೈಸೂರಿನ ಎಟಿಎಂ ಕಾರ್ಡ್ ದಿನಾಂಕ 4-12-2024ರಂದು ಕಳೆದುಹೋಗಿದೆ. ಹುಡುಕಿಕೊಟ್ಟವರಿಗೆ ಸೂಕ್ತ ಬಹುಮಾನ. ಸಂಪರ್ಕಿಸಿ:
Mob: 9741979967

ಮನೆ ಮಾರಾಟಕ್ಕಿದೆ
20x30 ಮನೆ ಮಾರಾಟಕ್ಕಿದೆ ಕಾರ್ನರ್ ಸೈಟ್, ಶ್ರೀರಾಂಪುರ 30x40 ಮನೆ ಮಾರಾಟಕ್ಕಿದೆ, ಶ್ರೀರಾಂಪುರ 30x40 ಸೈಟು ಮಾರಾಟಕ್ಕಿದೆ.
9008711654

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು, ಯುವಕ/ಯುವತಿಯರು, ಮಹಿಳೆಯರು, ವಿಧವೆಯರು/ವಿಚ್ಛೇದಿತರು ಹೋಂ ನರ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ನಮ್ಮಲ್ಲೇ ಕಡ್ಡಾಯವಾಗಿ ಉಳಿದು ಕೆಲಸ ನಿರ್ವಹಿಸಬಲ್ಲವರಿಗೆ ಮಾತ್ರ ಅವಕಾಶ ಸಂಬಳ 15,000 ರಿಂದ 20,000ವರೆಗೆ ಉಚಿತ ಊಟ ವಸತಿ ಸೌಲಭ್ಯವಿರುತ್ತದೆ.
9591547239
9632039123

SITE FOR SALE
40x60 North facing, Rai Estates, Green Park Layout, Near Delhi Public School, Bannur Road, Mysuru. Contact:
Mob: 9591751459
Brokers Excuse

1. 20x30, 30x40, Sites @ Bogadi. Duplex House @ 93L
2. 40x50 SE Crnr 2BHK 4 Houses Near ISKCON Temple
3. 30x40 House at Vijaya Nagar 4th Stage.
4. Commercial Properties @ Kuvempu Nagar, Saraswati Puram & More.
5. 20x30, Sites & House near Yelwala 30x40 Sites attached to Brahmins Lyt
FOR SALE
PRAKRUTHI PROPERTIES
95386 90359, 90359 90359

SITE FOR SALE
(30x40) "Olive Enclave" (Opp. Park Facing) DTCP, MYS - Hunsur Highway, 8 km from Ring Road. 15 Lakhs.
95388-39926

ತಕ್ಷಣ ಬೇಕಾಗಿದ್ದಾರೆ
ವಿದ್ಯಾರ್ಹತೆ: 7th, SSLC, ಐಟಿಐ, ಡಿಪ್ಲೋಮಾ, ಡಿಗ್ರಿ ಪಾಸ್ ಅಥವಾ ಫೇಲ್.
ಸಂಬಳ: 15,000 ರಿಂದ 32,000.
ವಿ.ಸೂ: ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ.
Mob: 9880151303

neem BOND PLATINUM
PLYWOOD & DOORS @ FACTORY DEPOT RATES
10 YEARS WARRANTY*
ISO 9001:2015 Certified Company Depot
Build Mart
9901291267
9845426862

ಬೇಕಾಗಿದ್ದಾರೆ
ದೋಸೆ ಭಟ್ರು (Dosa Chef)
ಕೌಂಟರ್ (Food Parcel)
ವೇಟರ್ (Supplier) kitchen All Rounder (Poori, Chapati) House Keeping 2nd Shift
ಸ್ಥಳ: ಮೈಸೂರು–ಕಾಳಿದಾಸ ರೋಡ್, ಒಂಟಿಕೊಪ್ಪಲ್ ಹತ್ತಿರ
7899028086

ಉದ್ಯೋಗವಕಾಶ
ಮೈಸೂರಿನಲ್ಲಿರುವ AWBM ಕಂಪನಿಗೆ Freshers + Experience ಆದ 224 ಅಭ್ಯರ್ಥಿಗಳನ್ನು ನೇರ ಸಂದರ್ಶನದಿಂದಲೇ ನೇರ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ವಿದ್ಯಾರ್ಹತೆ: SSLC, PUC, ITI, Any Degree, Dip. ವಯೋಮಿತಿ : 18-31 Years ತಿಂಗಳಿಗೆ : 19000-25000 (ಉಚಿತ ವಸತಿ+ಊಟ+Promotion)
ಸ್ವಾತಿಗೌಡ: **7349699460**

Wanted (Manager)
JP Nagar Service Apartment ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
Education: Degree. Age: 30 years - 50 years. Language: Kannada, English, Hindi fluency, computer knowledge. Contact:
Mob: 9686225522

WE ARE HIRING
Company name: Blanco Steel Detailing Services Pvt. Ltd. Education: B.Com. Job title: Document controller. Location: Dattagalli, Mysore. Age limit: Below 25.
Mob: 9972818192

WE ARE HIRING
CUSTOMER SERVICE EXECUTIVE (FEMALE)
* Key responsibilities: Coordinate with customers. Manage social media. Requirements: Any Degree. Age: 21-28. Fluent in Kannada & English. Salary 12K to 20K (+Incentives). Work from home option can be given for the ideal candidate. Location: Mysore. For more information please contact. Please whatsapp your C.V. to apply
Mob: 7411122619

ಬೇಕಾಗಿದ್ದಾರೆ
MARUTHI SUZUKI ARENA AND TATA MOTORS CAR SHOWROOM ಗಳಿಗೆ ಮತ್ತು ಆಫೀಸ್ ಕೆಲಸದ ಹುದ್ದೆಗಳಿಗೆ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂದರ್ಶನ ಇರುವುದಿಲ್ಲ. ಫ್ರೆಶರ್ಸ್ ಕೂಡ ಅರ್ಜಿ ಸಲ್ಲಿಸಬಹುದು. ಸೇಲ್ಸ್ ಎಕ್ಸಿಕ್ಯೂಟಿವ್, ಟೆಲಿಕಾಲರ್, ಕ್ಯಾಷಿಯರ್, ಆಫೀಸ್ ಬಾಯ್, ಮತ್ತು ಮ್ಯಾನೇಜ್‌ಮೆಂಟ್ ಹುದ್ದೆಗಳಿಗೆ ಬೇಕಾಗಿದ್ದಾರೆ. ಶಿಕ್ಷಣ 8ನೇ ತರಗತಿ ಇಂದ ಯಾವುದೇ ಪದವೀಧರರು, (ಸಂಬಳ: 18000 Rs ಇಂದ 30000 Rs + ಇನ್ಸೆಂಟಿವ್) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ.
9535849148, 7204027259

ಜಾಗ ಮಾರಾಟಕ್ಕಿದೆ
ಮೈಸೂರು ಬೋಗಾದಿ ರಸ್ತೆ, ಚಟ್ನಳ್ಳಿ ಹುಂಡಿ ಗ್ರಾಮದಲ್ಲಿ ನಾಲ್ಕು ಬದಿ ಲೇಔಟ್‌ಗಳ ಮಧ್ಯದಲ್ಲಿರುವ ಒಂದು ಎಕರೆ ಜಾಗ ಹಾಗೂ ಚಾಮರಾಜನಗರದ ಯಳಂದೂರು ಮದ್ದೂರು ಗ್ರಾಮದಲ್ಲಿ 9+3 ಎಕರೆ ಕೃಷಿ ಭೂಮಿಯ ಜಾಗ, 3 ಬೋರ್‌ವೆಲ್ ಹೊಂದಿದ್ದು, ಪೂರ್ವಕ್ಕೆ ಹೊಳೆ, ಪಶ್ಚಿಮಕ್ಕೆ ಅರ್ಧ ಕಿಲೋಮೀಟರ್ ರಸ್ತೆ, ಕೆರೆ ಹೊಂದಿರುವ ಸುಂದರ ಜಾಗ ಮಾರಾಟಕ್ಕಿದೆ
9448080151

ಬಿಲ್ಲವ, ಪೂಜಾರಿ, ಈಡಿಗ, ವಧು–ವರರಿಗಾಗಿ ಸಂಪರ್ಕಿಸಿ:
ವಧು ಬೇಕಾಗಿದೆ.
ಬಿಲ್ಲವ (ಪೂಜಾರಿ) ವರನ ವಯಸ್ಸು 29, BE, ಇಂಜಿನಿಯರ್/ವಯಸ್ಸು 35, MBA/ ವಯಸ್ಸು, 38, ಸರಕಾರಿ ಉದ್ಯೋಗದಲ್ಲಿರುವ/ವಯಸ್ಸು, 28, ಲೆಕ್ಚರ್ ಉದ್ಯೋಗದಲ್ಲಿರುವ ವರನಿಗೆ ವಧು ಬೇಕಾಗಿದೆ.
7338276199

ಟ್ರಕ್ ಡ್ರೈವರ್ಸ್ ಬೇಕಾಗಿದ್ದಾರೆ
24 ಅಡಿ ಸಿಎನ್‌ಜಿ ಮತ್ತು 11–10 ಕಂಟೇನರ್ ವಾಹನಗಳಿಗೆ ಮೈಸೂರು ಸುತ್ತಮುತ್ತ ಟ್ರಕ್ ಡ್ರೈವರ್ ಬೇಕಾಗಿದ್ದಾರೆ. ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿದೆ. 50 ವರ್ಷ ಮೇಲಿನವರು ಸಂಪರ್ಕಿಸಿ:
9341623350

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಸ್ಯಾಟಾಪ್ ಹೋಟೆಲ್‌ಗೆ ಕೆಲಸಗಾರರು ಬೇಕಾಗಿದ್ದಾರೆ.
ಸೆಕ್ಯೂರಿಟಿ ಗಾರ್ಡ್ - 2 ; ದೋಸೆ ಭಟ್ಟರು - 2
ಟೇಬಲ್ ಕ್ಲೀನರ್ - 2 ; ಸಪ್ಲೈಯರ್ - 2
ಜ್ಯೂಸ್ ಮೇಕರ್ - 2. ಕೂಡಲೇ ಸಂಪರ್ಕಿಸಿ:
7899929233

WE ARE HIRING !
WALK-IN INTERVIEW
Minimum Graduation. Fresher and experienced Sales Manager. Age between 28 to 40 years. Salary: 25,000/- upto 45000/- PM Plus incentives & other perks. Type: Full time employees. Experience: 1-3 years. Location: Mysore.
9845210772

WANTED
Marketing Executive (Male) Collecting quality leads with where is activities. Field work. Good salary + Incentive. 12th and above. Birla Sunlife (Agency partner office), Saraswathipuram, Mysore.
9900844455

SITE FOR SALE
30X40
WEST FACE, SRIRAMPURA, NEAR PREETHI LAYOUT. RATE: RS. 65 LAKHS.
8861220989, 9844351921

NYPUNYA SCHOOL OF EXCELLENCE
Dattagalli, Mysore
1. ಶಾಲೆಯಲ್ಲಿ ಕೆಲಸ ಮಾಡಲು ಮಹಿಳಾ ಆಯಾ ಬೇಕಾಗಿದ್ದಾರೆ.
2. ಶಾಲಾ ವಾಹನ ಚಲಾಯಿಸಲು ಹೆವಿ ಲೈಸೆನ್ಸ್ ಉಳ್ಳ ಅನುಭವಿ ಡ್ರೈವರ್ ಬೇಕಾಗಿದ್ದಾರೆ.
ಆಸಕ್ತರು ಕೆಳಕಂಡ ಸಂಖ್ಯೆಗೆ ಸಂಪರ್ಕಿಸಬಹುದು.
9110851597

REQUIRED
Asian Paints Ltd Kalastavadi Village, Near Poojari Fish Land Opp. RT Operator Driver-1 Post System Operator-Any Degree-2 Post Workers any 10th and 12th - 3 Post
9739355621

ಮನೆ ಬಾಡಿಗೆ/ಭೋಗ್ಯಕ್ಕೆ ಇದೆ
ಶ್ರೀರಾಂಪುರ ರಿಂಗ್ ರಸ್ತೆ ಯುನಿವರ್ಸಿಟಿ ಲೇಔಟ್ ಎದುರು ಗಾಯಿತ್ರಿ ಬಡಾವಣೆಯಲ್ಲಿ 1ನೇ ಮಹಡಿ 2BHK 1ನೇ ಮಹಡಿ, 1BHK ಸೋಲಾರ್‌ವುಳ್ಳ ಮನೆ ಬಾಡಿಗೆಗೆ ಲಭ್ಯವಿದೆ.
9481041871

ಕೇರಳ ಪ್ರವಾಸ
ಜಟಾಯು ಅರ್ಥ್ ಸೆಂಟರ್ ಅಲಪ್ಪಿ, ಕೊಚ್ಚಿನ್, ಗುರುವಾಯೂರು ಅನಂತಪದ್ಮನಾಭ ದೇವಸ್ಥಾನ, ಕೋವಲಂಬೀಚ್, ಅತ್ತಿರಪಳ್ಳಿ ಫಾಲ್ಸ್, ಒಟ್ಟು 4 ದಿನಗಳು ಊಟ, ವಸತಿ ಸೇರಿರುತ್ತದೆ. ಒಬ್ಬರಿಗೆ 8000/– (4 ದಿನಗಳು) ಹೊರಡುವ ದಿನಾಂಕ: 23–01–2025
7022271023

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳದಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು/ಮಹಿಳೆಯರು ಬೇಕಾಗಿದ್ದಾರೆ.
ಸಮಯ: ಬೆಳಿಗ್ಗೆ 8 ರಿಂದ ಸಂಜೆ 5
ಸಂಬಳ: 15,000/–
8892258814

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ಸಪ್ಲೈಯರ್ ಹಾಗೂ ಕ್ಲೀನರ್ ಬೇಕಾಗಿದ್ದಾರೆ
ಸ್ಥಳ: ಸರಸ್ವತಿಪುರಂ, ಮೈಸೂರು
9738405038
9740504888

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ. ಹಾಗೂ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಕೆ.ಆರ್.ಎಸ್. ವರುಣಾ, ಆಲನಹಳ್ಳಿ ಮತ್ತು ಜೆ.ಪಿ.ನಗರ ಮತ್ತು ಮೈಸೂರಿನ ಸುತ್ತಮುತ್ತ ವಿದ್ಯಾರ್ಹತೆ: SSLC PASS or Fail
9538886328

ಕಛೇರಿಯಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸ ನಿರ್ವಹಿಸಲು ಅನುಭವ ಇರುವವರು ಬೇಕಾಗಿದ್ದಾರೆ.
ಹುದ್ದೆ: ಸೆಕ್ಯೂರಿಟಿ ಗಾರ್ಡ್
ವಯಸ್ಸು: 21 ರಿಂದ 35 ವರ್ಷಗಳು
ವಿದ್ಯಾರ್ಹತೆ: ಕನಿಷ್ಠ 10ನೇ ತರಗತಿ (SSLC)
7899357627

ಸದ್ಗುರು ಮ್ಯಾರೇಜಸ್
ಸುಂದರ ಶ್ರೀಮಂತ ವಿದ್ಯಾವಂತ ವಧು–ವರರಿಗೆ ನೇರ ಸಂಪರ್ಕಿಸಿ: ಶೀಘ್ರ ವಿವಾಹಕ್ಕೆ ಕೂಡಲೇ ಕರೆ ಮಾಡಿ
9448229184
7899625268

ಬೇಕಾಗಿದ್ದಾರೆ
Accounts (Tally) ಬಗ್ಗೆ ಒಂದು ವರ್ಷ ಅನುಭವವುಳ್ಳ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಅನಿಲ್: **7026996123**
ಶೇಖರ್: **9945911118**

ಮನೆ ಭೋಗ್ಯಕ್ಕೆ ಇದೆ
ಕುವೆಂಪು ನಗರ ನಿಮಿಷಾಂಬ ಬಡಾವಣೆಯಲ್ಲಿ 1BHK 2ನೇ ಫ್ಲೋರ್‌ನಲ್ಲಿ ಭೋಗ್ಯಕ್ಕೆ ಇದೆ
9448092818

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿಯಲ್ಲಿ ಖಾಯಂ ಪುರುಷ 8 ಗಂಟೆ ಪಾಳಿಯಲ್ಲಿ (Shift) ಕೆಲಸ ಮಾಡುವ SSLC ವಿದ್ಯಾವಂತ ಸೆಕ್ಯೂರಿಟಿ ಗಾರ್ಡ್ ಅನುಭವವಿರುವ 45 ವರ್ಷ ವಯಸ್ಸು ಒಳಗಿನ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ 17500 ರೂ.ಗಳು ESI ಮತ್ತು PF ಹಾಗೂ ರಜಾ ಕ್ಯಾಂಟೀನ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9731976148

ವಧು ಬೇಕಾಗಿದೆ
ಹಾಸನ ಜಿಲ್ಲೆ ಸಕಲೇಶಪುರದಲ್ಲಿ ವಾಸವಿರುವ 7 ಎಕರೆ ಕಾಫಿ ತೋಟ ಹೊಂದಿರುವ ಲಿಂಗಾಯತ (37 ವರ್ಷ) ವರನಿಗೆ ಲಿಂಗಾಯತ ವಧು ಅಥವಾ ಡಿವೋರ್ಸ್ ಆಗಿರುವ ಲಿಂಗಾಯತ ವಧು ಬೇಕಾಗಿದೆ.
8722231190

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

45 ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸರ್ಹವಾಗಿವೆ. ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ದೋಷ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಿಕೊಳ್ಳಬೇಕು. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಗುರುವಾರ 5 ಡಿಸೆಂಬರ್ 2024

ಮಾದಾಪುರ ಗ್ರಾಪಂ ಆಡಳಿತ ಕಾಂಗ್ರೆಸ್ ತೆಕ್ಕೆಗೆ

ಅಧ್ಯಕ್ಷರಾಗಿ ಸೋಮಣ್ಣ



ತಿ.ನರಸೀಪುರ ತಾಲೂಕಿನ ಮಾದಾಪುರ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಸೋಮಣ್ಣ ಬುಧವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ತಿ.ನರಸೀಪುರ, ಡಿ.4– ತಾಲೂಕಿನ ಮಾದಾಪುರ ಗ್ರಾಮ ಪಂಚಾಯಿತಿಯ ಆಡಳಿತ ಕಾಂಗ್ರೆಸ್ ಕೈ ವಶವಾಗಿದ್ದು, ನೂತನ ಅಧ್ಯಕ್ಷರಾಗಿ ಸೋಮಣ್ಣ ಬುಧವಾರ ನಡೆದ ಜಿದ್ದಾಜಿದ್ದಿಯ ಚುನಾವಣೆಯಲ್ಲಿ ಆಯ್ಕೆಗೊಂಡಿದ್ದಾರೆ.

ಹಿಂದಿನ ಅಧ್ಯಕ್ಷ ತ್ರಿಪುರ ಅವರು ರಾಜೀನಾಮೆ ನೀಡಿದ್ದ ಹಿನ್ನೆಲೆಯಲ್ಲಿ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಸೋಮಣ್ಣ ಹಾಗೂ ಬಸವರಾಜು ನಾಮಪತ್ರ ಸಲ್ಲಿಸಿದ್ದರು. ಜಿದ್ದಾಜಿದ್ದಿನಲ್ಲಿ ಇಬ್ಬರು ಕಣದಲ್ಲಿದ್ದುದ್ದರಿಂದ ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಯಿತು.

ಹನ್ನೆರಡು ಮತಗಳನ್ನು ಪಡೆದ ಸೋಮಣ್ಣ ಅವರು ನೂತನ ಅಧ್ಯಕ್ಷರಾಗಿ ಆಯ್ಕೆಯಾದರೆ, 10 ಮತಗಳನ್ನು ಪಡೆದ ಬಸವರಾಜು ಪರಾಭವಗೊಂಡರು. 1 ಮತ ಕುಲಗೆಟ್ಟ ಮತವಾಗಿ ಚಲಾವಣೆಯಾಗಿತ್ತು. ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ನೂತನ ಅಧ್ಯಕ್ಷರ ಬೆಂಬಲಿಗರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು. ಪಂಚಾಯಿತಿಯ 23 ಸದಸ್ಯರೂ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ಚುನಾವಣಾಧಿಕಾರಿಯಾಗಿ ಕಾವೇರಿ ನೀರಾವರಿ ನಿಗಮದ ಎಇಇ ಹೆಚ್.ಸಿ. ರತೀಶ್ ಕಾರ್ಯನಿರ್ವಹಿಸಿದರು.

ಹಿರಿಯ ಕಾಂಗ್ರೆಸ್ ಮುಖಂಡ, ವೀರಶೈವ ಲಿಂಗಾಯಿತ ಮಹಾಸಭಾ ನಿರ್ದೇಶಕ ಹಿರಿಯೂರು ವೀರೇಂದ್ರ(ನವೀನ) ಮಾತನಾಡಿ, ಸ್ಥಳೀಯ ಆಡಳಿತ ಸಂಸ್ಥೆಯಾಗಿರುವ ಗ್ರಾಮ ಪಂಚಾಯಿತಿಯಲ್ಲಿ ಅಭಿವೃದ್ಧಿಗೆ ಮತ್ತು ಹಳ್ಳಿಗಾಡಿನ ಜನರಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ಅಧ್ಯಕ್ಷರಿಗೆ ಒಂದೊಳ್ಳೆ ಅವಕಾಶ ಸಿಕ್ಕಿದೆ. ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಭಿವೃದ್ಧಿಗೆ ದುಡಿಯಬೇಕು. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಂಸದರಿಂದ ಅಭಿವೃದ್ಧಿಗೆ ಹೆಚ್ಚಿನ ಅನುದಾನವನ್ನು ತರುವ ಮೂಲಕ ಈ ಭಾಗದ ಗ್ರಾಮಗಳನ್ನು ಅಭಿವೃದ್ಧಿ ಪಡಿಸಬೇಕೆಂದು ನೂತನ ಅಧ್ಯಕ್ಷ ಹಾಗೂ ಸದಸ್ಯರಿಗೆ ಸಲಹೆ ನೀಡಿದರು.

ಉಪಾಧ್ಯಕ್ಷ ಪುಷ್ಪ ಶಂಕರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸ್ವಾಮಿರಾವ್, ಸದಸ್ಯರಾದ ಅಶೋಕ, ಮಾಲತಿ, ಸುಶೀಲ, ಮಹದೇವಮ್ಮ, ಹೆಚ್.ಎಂ. ರೂಪಾವತಿ, ಜೆಪ್ರದೀಪ್ ಕುಮಾರ್, ಮಾನಸ, ಹೆಚ್.ಎಂ. ಮನೋಜ್ ಕುಮಾರ್, ಸಿದ್ದಯ್ಯ, ಮೀನಾಕ್ಷಿ, ಎಂ.ಮೇಘ, ಎ.ಮಹೇಶ, ಆರ್.ರೇಖಾ, ಪಿ.ರೇವಣ್ಣ, ಎಂ.ನಳಿನ, ಕೃಷ್ಣ, ಸುವರ್ಣ, ಸಿ.ಎಂ. ಮನು ಕುಮಾರ, ಹಿರಿಯೂರು ಸೋಮಣ್ಣ, ಚಿಕ್ಕಮಾದಪ್ಪ, ಶಂಕರ, ಪೃಥ್ವಿ, ವಿ.ರವಿ, ಚೌಹಳ್ಳಿ ಮರಿಸ್ವಾಮಿ, ಮಲ್ಲೇಶ, ಸಿದ್ದರಾಜು, ನಿಲಸೋಗೆ ಮಹದೇವ ಪ್ರಸಾದ್, ಆಟೋ ಕುಮಾರ್, ಸೋಮಣ್ಣ, ಮ್ಯಾಜಿಕ್ ಸಿದ್ದರಾಜು, ಮಾದಾಪುರ ನಾಗರಾಜು, ಸಿ.ಬಿ ಹುಂಡಿ ಮಂಜು, ಹಿರಿಯೂರು ರಾಜೇಶ್ ಹಾಗೂ ಇತರರು ಇದ್ದರು.

ಹೆಚ್.ಡಿ.ಕೋಟೆ ಕಾಡಂಚಿನ ಗ್ರಾಮಗಳಲ್ಲಿ ಹುಲಿ ಪ್ರತ್ಯಕ್ಷ

ಹುಲಿ ಸೆರೆಗೆ ಅರಣ್ಯ ಇಲಾಖೆ ಕಾರ್ಯಾಚರಣೆ



ಕಾರ್ಯಾಚರಣೆಯಲ್ಲಿ ತೊಡಗಿರುವ ಆರ್‌ಎಫ್‌ಓ ಪೂಜಾ ಹಾಗೂ ಸಿಬ್ಬಂದಿ.

ಹೆಚ್.ಡಿ.ಕೋಟೆ, ಡಿ.4(ಬಿಎಲ್‌ಯು/ಮಂಜು)– ತಾಲೂಕು ಶಾಂತಿಪುರ ಸೇರಿದಂತೆ ಇತರೆ ಗ್ರಾಮಗಳಲ್ಲಿ ಹುಲಿಯೊಂದು ತನ್ನ ಎರಡು ಮರಿಗಳೊಂದಿಗೆ ಓಡಾಡುತ್ತಿದ್ದು, ಗ್ರಾಮಸ್ಥರನ್ನು ಭಯಭೀತಗೊಳಿಸಿದೆ.

ಬಂಡೀಪುರ ಹಾಗೂ ನಾಗರಹೊಳೆ ಅಭಯಾರಣ್ಯಕ್ಕೆ ಹೊಂದಿಕೊಂಡಿರುವ ಹೆಚ್.ಡಿ.ಕೋಟೆ ತಾಲೂಕು ಶಾಂತಿಪುರ, ಬೋಚಿಕಟ್ಟೆ ಮತ್ತು ಚಾಕಹಳ್ಳಿ ಗ್ರಾಮದಲ್ಲಿ ಹುಲಿಯೊಂದು ತನ್ನ ಎರಡು ಮರಿಗಳೊಂದಿಗೆ ಓಡಾಡುತ್ತಿದೆಯಲ್ಲದೆ, ಮೇಕೆ ಮತ್ತು ಕುರಿಯನ್ನು ಕೊಂದು ತಿಂದುಹಾಕಿದೆ. ಇದರಿಂದ ಭಯಭೀತರಾದ ಗ್ರಾಮಸ್ಥರು ಅರಣ್ಯ ಇಲಾಖೆಗೆ ವಿಷಯ ತಿಳಿಸಿದ್ದು, ಹುಲಿ ಸೆರೆಗೆ ಅರಣ್ಯ ಇಲಾಖೆಯ ಕಾರ್ಯಾಚರಣೆ ಕೈಗೊಂಡಿದ್ದಾರೆ.

ಆರ್‌ಎಫ್‌ಓ ಪೂಜಾ, ಡಿಆರ್‌ಎಫ್‌ಓ ಸ್ನೇಹ ಹಾಗೂ ಪರಮೇಶ್ ನೇತೃತ್ವದಲ್ಲಿ ನುರಿತ ತಜ್ಞರು ಹುಲಿ ಸೆರೆ ಕಾರ್ಯಾಚರಣೆಯನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಹುಲಿ ಹೆಜ್ಜೆ ಗುರುತು ಜಾಡು ಹಿಡಿದು ಕಾರ್ಯಾಚರಣೆ ಕೈಗೊಂಡಿರುವ ಅರಣ್ಯ ಇಲಾಖೆಯವರು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ.

ಸುಸಜ್ಜಿತ ಸುರಕ್ಷಾ ಸಾಧನಗಳೊಂದಿಗೆ ಕಾರ್ಯಾಚರಣೆ ಕೈಗೊಂಡಿದ್ದು, ಚಾಲಾಕಿ ಹುಲಿ ಬಲೆಗೆ ಬೀಳದೆ ಅರಣ್ಯ ಇಲಾಖೆಯವರಿಗೆ ಚಳ್ಳೆ ಹಣ್ಣು ತಿನ್ನಿಸುತ್ತಿದೆ. ಕಾಡಂಚಿನ ಗ್ರಾಮಗಳಲ್ಲಿ ಮಾನವ ಹಾಗೂ ಪ್ರಾಣಿ ಸಂಘರ್ಷ ಮುಂದುವರೆದಿದೆ. ಕಾಡುಪ್ರಾಣಿಗಳ ಉಪಟಳದಿಂದ ಜನರು ಭಯಭೀತರಾಗಿದ್ದಾರೆ. ಹೊಲ, ಗದ್ದೆ, ತೋಟಗಳಿಗೆ ಒಂದೆಡೆ ಆನೆಗಳು ದಾಳಿ ಇಟ್ಟರೆ, ಮತ್ತೊಂದೆಡೆ ಹುಲಿಯಂತಹ ಪ್ರಾಣಿಗಳು ಗ್ರಾಮದ ಸುತ್ತಮುತ್ತ ಓಡಾಡಿ ಜನರಲ್ಲಿ ಆತಂಕ ಉಂಟು ಮಾಡಿದೆ.

ದಸರಾ ಮಾದರಿ ಕಾವೇರಿ ಸಂಭ್ರಮ, ಕನ್ನಡ ರಾಜ್ಯೋತ್ಸವ ಆಚರಣೆ



ಬನ್ನೂರಿನ ಸಮೀಪದ ಯಾಚೇನಹಳ್ಳಿ ಗ್ರಾಮದಲ್ಲಿ ನಡೆದ ಕಾವೇರಿ ಸಂಭ್ರಮದ ಮೆರವಣಿಗೆಯಲ್ಲಿ ಪೂಜಾ ಕುಣಿತ ಸಾರ್ವಜನಿಕರ ಗಮನ ಸೆಳೆಯಿತು.

ಬನ್ನೂರು, ಡಿ.4– ಪಟ್ಟಣದ ಯಾಚೇನಹಳ್ಳಿ ಗ್ರಾಮದಲ್ಲಿ ಕಾವೇರಿ ಸಂಭ್ರಮ ಮತ್ತು ಸುವರ್ಣ ಕರ್ನಾಟಕ ಮಹೋತ್ಸವ ಹಾಗೂ ಸಹಕಾರ ಜಾತ್ರೆ ಕೃಷಿ ವಸ್ತು ಪ್ರದರ್ಶನದ ಅಂಗವಾಗಿ ವಿವಿಧ ಜಾನಪದ ಕಲೋತ್ಸವಗಳೊಂದಿಗೆ ದಸರಾ ಮೆರವಣಿಗೆ ಮಾದರಿಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಕಾವೇರಿ ಸಂಭ್ರಮ ಹಾಗೂ ಕನ್ನಡ ರಾಜ್ಯೋತ್ಸವದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಸುಲ್ತಾನ್ ರಸ್ತೆಯಿಂದ ಆರಂಭವಾದ ಪ್ರದರ್ಶನದಲ್ಲಿ ತಮಟೆ ವಾದನ, ಪೂಜಾ ಕುಣಿತ, ವೀರಗಾಸೆ, ಡೊಳ್ಳು ಕುಣಿತ, ಚಿಲಿಪಿಲಿ ಗೊಂಬೆ, ಕೊಂಬು ಕಹಳೆ, ನಂದಿಧ್ವಜ, ಗೊರವರ ಕುಣಿತ, ವೀರಮಕ್ಕಳ ಕುಣಿತ, ಸೋಮನ ಕುಣಿತ, ಮಕ್ಕಳ ವಿವಿಧ ವೇಷಭೂಷಣ, ಸೋಬಾನೆ ಪದ ಸೇರಿದಂತೆ ವಿವಿಧ ಜಾನಪದ ಪ್ರಕಾರದ ತಂಡಗಳು ದಾರಿಯುದ್ದಕ್ಕೂ ತಮ್ಮ ಕಲೆಗಳನ್ನು ಪ್ರದರ್ಶಿಸಿ ಸಾರ್ವಜನಿಕರ ಗಮನ ಸೆಳೆದರು.

ಸರ್ಕಾರಿ ಶಾಲೆಯ ಆವರಣದಲ್ಲಿ ಕೃಷಿ ಮತ್ತು ಕೃಷಿಯ ಪರಿಕರಗಳ ವಸ್ತು ಪ್ರದರ್ಶನ ಏರ್ಪಡಿಸಿದ್ದು, ನೂರಾರು ರೈತ ಮುಖಂಡರು ಭೇಟಿ ನೀಡಿ ಮಾಹಿತಿಯನ್ನು ಪಡೆದರು. ಹಳ್ಳಿಕಾರ್ ತಳಿಯ ರಾಸುಗಳ ಪ್ರದರ್ಶನ ಸೇರಿದಂತೆ ಬಂದೂರು ಕುರಿಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು

ನಂತರ ನಡೆದ ವೇದಿಕೆಯ ಕಾರ್ಯಕ್ರಮವನ್ನು ರಾಗಿ, ಬತ್ತದ ತೆನೆ, ನೇಗಿಲಿಗೆ ಪೂಜೆ ಸಲ್ಲಿಸುವ ಮೂಲಕ ಆರಂಭಿಸಲಾಯಿತು. ಕಾರ್ಯಕ್ರಮ ಔಚಿತ್ಯ ಕುರಿತು ಮಾತನಾಡಿದ ವೈ.ಎನ್. ಶಂಕರೇಗೌಡ ಕನ್ನಡ ರಾಜ್ಯೋತ್ಸವಕ್ಕೆ 50 ವಸಂತಗಳು ತುಂಬಿದ ಹಿನ್ನೆಲೆಯಲ್ಲಿ ವಿವಿಧ ಜನರ ಸಹಕಾರವನ್ನು ಪಡೆದುಕೊಂಡು ಗ್ರಾಮ ಮಟ್ಟದಲ್ಲಿ ಒಂದು ಉತ್ತಮವಾದ ಕಾರ್ಯಕ್ರಮವನ್ನು ರೂಪಿಸಿ ಪ್ರತಿ ಮನೆ ಮನೆಗಳಲ್ಲೂ ಹಬ್ಬದ ವಾತವರಣವನ್ನು ತುಂಬಿ ಕನ್ನಡ ರಾಜ್ಯೋತ್ಸವದ ಆಚರಣೆಗೆ ಅರ್ಥ ತುಂಬುವ ಕೆಲಸ ಮಾಡಿರುವುದಾಗಿ ಅವರು ತಿಳಿಸಿದರು.

ಗ್ರಾಮದ ಮುಖಂಡ ವೈ.ಎಸ್. ರಾಮಸ್ವಾಮಿ ಮಾತನಾಡಿ, ಗ್ರಾಮದಲ್ಲಿ ಕನ್ನಡ ತಾಯಿಯ ಸೇವೆಯನ್ನು ಮಾಡುವ, ಕನ್ನಡಾಂಬೆಯ ತೇರನ್ನು ಎಳೆಯುವ ಅವಕಾಶ ದೊರೆತದ್ದು ಅವಿಸ್ಮರಣೀಯ ಎಂದರು.

ಸಾಹಿತಿ ಜಯಪ್ಪ ಹೊನ್ನಾಳಿ, ಚಲನಚಿತ್ರ ನಟ, ವಾಗ್ಮಿ ಮಾರಸಿಂಗನಹಳ್ಳಿ ಮಲ್ಲರಾಜ ಮಾತನಾಡಿದರು.

ಡಾ.ನಂಜುಂಡಸ್ವಾಮಿ ಮಾತನಾಡಿದರು. ವೈ.ಎಚ್.ಹನುಮಂತೇಗೌಡ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ವೈ.ಡಿ. ರಾಜಣ್ಣ, ಗ್ರಾಪಂ ಅಧ್ಯಕ್ಷ ಶಿವಕುಮಾರ್, ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷ ವೈ.ಎಂ. ಮಲ್ಲೇಶ್, ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜು, ಕೆಂಪೇಗೌಡ, ಹಳ್ಳಿ ಕಾರು ತಳಿಯ ಸಂರಕ್ಷಕ ವೈ.ಕೆ. ಸಿದ್ದರಾಮು, ವೈ.ಎ.ಪುಟ್ಟರಾಜು, ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ವೈ.ಕೆ.ಕ್ಯಾತೇಗೌಡ, ಡಾ. ಲಿಂಗರಾಜು, ಪ್ರಥಮ ದರ್ಜೆ ಗುತ್ತಿಗೆದಾರ ವೈ.ಎಸ್. ಯೋಗಾನಂದ ವೈ.ಎಸ್. ಶೇಖರ್, ಅಶೋಕ್ ಯಾಚೇನಹಳ್ಳಿ ಗ್ರಾಮದ ಗ್ರಾಮಸ್ಥರು, ಶಾಲಾ ವಿದ್ಯಾರ್ಥಿ, ಶಾಲಾ ಶಿಕ್ಷರು, ವಿವಿಧ ಸಂಘ ಸಂಸ್ಥೆಯ ಮುಖಂಡರು ಇದ್ದರು.

ಹೆಚ್.ಡಿ.ಕೋಟೆಯಲ್ಲಿ ವಿಶೇಷ ಚೇತನ ಮಕ್ಕಳಿಗೆ ಆರೋಗ್ಯ ತಪಾಸಣಾ ಶಿಬಿರ



ಹೆಚ್.ಡಿ.ಕೋಟೆ ಪಟ್ಟಣದಲ್ಲಿರುವ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ವಿಶೇಷ ಚೇತನರಿಗೆ ಆರೋಗ್ಯ ತಪಾಸಣಾ ಶಿಬಿರದಲ್ಲಿ ಡಾ: ರವಿಕುಮಾರ್ ಮಾತನಾಡಿದರು.

ಹೆಚ್.ಡಿ.ಕೋಟೆ, ಡಿ.4– ವಿಶೇಷ ಚೇತನ ಮಕ್ಕಳು ಹುಟ್ಟುವುದು ಯಾವುದೇ ಶಾಪವಲ್ಲ, ಅವರ ಲಾಲನೆ–ಪಾಲನೆ ಮಾಡುವ ಪೋಷಕರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ. ರವಿಕುಮಾರ್ ತಿಳಿಸಿದರು

ಪಟ್ಟಣದಲ್ಲಿರುವ ಸರ್ಕಾರಿ ಪ್ರೌಢ ಶಾಲೆ ಆವರಣದಲ್ಲಿ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ತಾಲೂಕು ಪಂಚಾಯಿತಿ ಹಾಗೂ ಅಲೀಂ ಕೋ ಸಹಯೋಗ ದೊಂದಿಗೆ ವಿಶೇಷಚೇತನ ಮಕ್ಕಳಿಗೆ ಏರ್ಪಡಿಸಲಾಗಿದ್ದ ಆರೋಗ್ಯ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ವಿಶೇಷ ಚೇತನ ಮಕ್ಕಳು ಹುಟ್ಟುವುದು ಯಾವುದೇ ಶಾಪವಲ್ಲ, ಇವರ ಲಾಲನೆ–ಪಾಲನೆ ಮಾಡುವ ಪೋಷಕರೆ, ಈ ಶಿಬಿರದಲ್ಲಿ ಆಗಮಿಸಿರುವ ಎಲ್ಲಾ ವಿಶೇಷ ಚೇತನ ಮಕ್ಕಳಿಗೆ ಜಿಲ್ಲೆಯಿಂದ ತಜ್ಞ ವೈದ್ಯರನ್ನು ನಿಯೋಜನೆ ಮಾಡಲಾಗಿದ್ದು, ಇದರ ಸದುಪಯೋಗವನ್ನು ಪಡೆದುಕೊಳ್ಳಿ. ಜೊತೆಗೆ, UDID ಕಾರ್ಡ್‌ಗಳನ್ನು, ಇದೇ ಶಿಬಿರದಲ್ಲಿ ಪಡೆದುಕೊಳ್ಳಲು ತಿಳಿಸಿದರು. ತಾಲೂಕಿನಲ್ಲಿ 490 ವಿಶೇಷಕ್ಕಿಂತ ಹೆಚ್ಚು ವಿಶೇಷ ಚೇತನ ಮಕ್ಕಳನ್ನು ಗುರುತಿಸಲಾಗಿದೆ. ಈ ಶಿಬಿರದಲ್ಲಿ 150 ವಿಶೇಷ ಚೇತನ ಮಕ್ಕಳು ಭಾಗವಹಿಸಿ, ಶಿಬಿರದಲ್ಲಿ ಸಿಗುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡಿದ್ದಾರೆ ಎಂದರು. ಶಿಬಿರದಲ್ಲಿ 150 ಮಕ್ಕಳು ಭಾಗವಹಿಸಿದ್ದು, ಅದರಲ್ಲಿ 68 ಮಕ್ಕಳನ್ನು ಗುರುತಿಸಿ ವಿವಿಧ ಸಲಕರಣೆ ಗಳನ್ನು ಅಲೀಂ ಕೋ ಸಂಸ್ಥೆಯಿಂದ ನೀಡಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಮಕ್ಕಳ ತಜ್ಞ.ಡಾ. ಮಧು, ಕಿವಿ, ಮೂಗು, ಗಂಟಲು, ತಜ್ಞರಾದ ಡಾ. ವಾಣಿ, ಡಾ. ಶ್ರೀನಿವಾಸ್ ಮೂರ್ತಿ, ಡಾ. ಲತಾ, ಮುಖ್ಯಶಿಕ್ಷಕ ರಾಜು, ತಾಪಂ ಎಓ ರಘುನಂದನ್, ಮುತ್ತುರಾಜು, RBSK ವೈದ್ಯರು ಮತ್ತು ತಂಡ, ಹಾಜರಿದ್ದರು.

ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ನೇಮಕ



ತಿ.ನರಸೀಪುರ: ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿ ವೃದ್ಧಿ ಪ್ರಾಧಿಕಾರದ ಅಧಿಕಾರೇತರ ಸದಸ್ಯರಾಗಿ ವರುಣ ಕ್ಷೇತ್ರದ ಮಹಿಳಾ ಘಟಕದ ಅಧ್ಯಕ್ಷ ಕುಪ್ಯಾ ಭಾಗ್ಯಮ್ಮ ಅವರನ್ನು ನೇಮಕ ಮಾಡಲಾಗಿದ್ದು, ತಮ್ಮ ನೇಮಕಕ್ಕೆ ಕಾರಣರಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಅವರನ್ನು ಅಭಿನಂದಿಸಿದ್ದಾರೆ.

ಶಾಲಾ ಕೊಠಡಿಗಳ ಉದ್ಘಾಟನೆ



ಶಾಲಾ ಕೊಠಡಿಗಳನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂಜನಗೂಡು, ಡಿ.4– ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ವಿವೇಕ ಶಾಲಾ ಯೋಜನೆಯಡಿ 30 ಲಕ್ಷ ವೆಚ್ಚದಲ್ಲಿ 2 ಶಾಲಾ ಕೊಠಡಿಗಳನ್ನು ನಿರ್ಮಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ತಾಲೂಕಿನ ದೇವರಾಯಶೆಟ್ಟಿ ಗ್ರಾಮದಲ್ಲಿ 30 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಎರಡು ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ಖಾಸಗಿ ಶಾಲೆಗಳಂತೆ ಸರ್ಕಾರಿ ಶಾಲೆಗಳಲ್ಲೂ ಸಹ ಗುಣಮಟ್ಟದ ಶಿಕ್ಷಣವನ್ನು ಒದಗಿಸಬೇಕು. ಆ ಮೂಲಕ ಗ್ರಾಮೀಣ ಭಾಗದ ಬಡವರ ಮಕ್ಕಳ ಶಿಕ್ಷಣಕ್ಕೆ ನೆರವಾಗಬೇಕು ಎಂಬ ಆಶಯದೊಂದಿಗೆ ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸುವ ಸಲುವಾಗಿ 2022– 23ನೇ ಸಾಲಿನ ವಿವೇಕ ಶಾಲಾ ಯೋಜನೆಯಡಿ 30 ಲಕ್ಷಗಳ ವೆಚ್ಚದಲ್ಲಿ ನೂತನವಾಗಿ ಸುಸಜ್ಜಿತ ಶಾಲಾ ಕೊಠಡಿಗಳನ್ನು ನಿರ್ಮಿಸಲಾಗಿದೆ. ಗುಣಮಟ್ಟದ ಕಾಮಗಾರಿಗಳನ್ನು ನಡೆಸಲಾಗಿದೆ. ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಗ್ರಾಪಂ ಅಧ್ಯಕ್ಷೆ ಶಿಲ್ಪಸುರೇಶ್, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್, ಮುಖಂಡರಾದ ದೊರೆಸ್ವಾಮಿ ನಾಯಕ, ಹಾಡ್ಯ ಜಯರಾಮು, ಗೋವಿಂದರಾಜು, ಮಹದೇವು, ನೇಮತುಲ್ಲಾ ಖಾನ್, ನಾಗರಾಜು, ಸತೀಶ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಅಲೆಮಾರಿಗಳ ಸಮಸ್ಯೆ ಆಲಿಸಿ ಪರಿಹಾರ ವಿತರಣೆಗೆ ಕ್ರಮ

ಅಲೆಮಾರಿ ಜನಾಂಗ ವಾಸಿಸುವ ಸ್ಥಳಕ್ಕೆ ಎಸ್‌ಸಿ, ಎಸ್‌ಟಿ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಭೇಟಿ



ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಸಮಸ್ಯೆಗಳನ್ನು ಆಲಿಸಿದರು.

ತಿ.ನರಸೀಪುರ, ಡಿ.4– ಅಲೆಮಾರಿ ಜನಾಂಗದ ಸಮಸ್ಯೆಗಳನ್ನು ಆಲಿಸಿ ಅವುಗಳಿಗೆ ಪರಿಹಾರ ದೊರಕಿಸಲು ಅಲೆಮಾರಿ ಜನಾಂಗ ವಾಸಿಸುವ ಸ್ಥಳಗಳಿಗೆ ಭೇಟಿ ನೀಡುತ್ತಿರುವುದಾಗಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ತಿಳಿಸಿದರು.

ಪಟ್ಟಣದ ಕೊಳ್ಳೇಗಾಲ ಮುಖ್ಯರಸ್ತೆಯ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ ಪಕ್ಕ ಇರುವ ದಾವಣಗೆರೆ ಕಾಲೋನಿಗೆ ಭೇಟಿ ನೀಡಿದ ಅವರು, ಅಲೆಮಾರಿ ಜನಾಂಗದ ಸಮಸ್ಯೆಗಳನ್ನು ಆಲಿಸಿ ಶೀಘ್ರವಾಗಿ ಅವರಿಗೆ ಅಗತ್ಯ ಅನುಕೂಲ ಕಲ್ಪಿಸಲು ಕ್ರಮವಹಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದ 12 ಜಿಲ್ಲೆಗಳಿಗೆ ಭೇಟಿ ನೀಡಿ ಅಲ್ಲಿನ ಜನರ ಸಮಸ್ಯೆಗಳನ್ನು ಆಲಿಸಿ, ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಜಂಟಿ ನಿರ್ದೇಶಕರ ಸಂಪರ್ಕದಲ್ಲಿದ್ದು ಹಂತ ಹಂತವಾಗಿ ಬಗೆಹರಿಸುತ್ತಿರುವುದಾಗಿ ತಿಳಿಸಿದರು. ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ದಾವಣಗೆರೆ ಕಾಲೋನಿಯ ಅಲೆಮಾರಿ ಜನಾಂಗಕ್ಕೆ ಹಿಂದೆ ಕಂದಾಯ ಮಂತ್ರಿಯಾಗಿದ್ದ ವಿ. ಶ್ರೀನಿವಾಸ ಪ್ರಸಾದ್ ಅವರ ಜೊತೆ ಚರ್ಚಿಸಿ ಪಟ್ಟಣದ ಸರ್ವೆ ನಂಬರ್ 104ರ ಜೆಡಿ ಕಟ್ಟೆ ಬಳಿ ಎರಡೂವರೆ ಎಕರೆ ಮಂಜೂರು ಮಾಡಿಸಲಾಗಿತ್ತು, ಆದರೆ ಹೆಳವರ ಹುಂಡಿಯ ಹೆಳವ ಸಮಾಜದವರಿಗೆ ಒಂದು ಎಕರೆ, ದಾವಣಗೆರೆ ಕಾಲೋನಿ ಸಮಾಜದವರಿಗೆ ಒಂದು ಎಕರೆ, ಉಳಿದ ಅರ್ಧ ಎಕರೆ ಸಮುದಾಯ ಭವನಗಳಿಗೆ ಎಂದು ಆದೇಶವಾಗಿತ್ತು, ಆದರೆ ಹೆಳವ ಸಮಾಜದವರು ದಾವಣಗೆರೆ ಕಾಲೋನಿಯ ಸಮಾಜದವರಿಗೆ ಅವಕಾಶವೇ ಕಲ್ಪಿಸಿಕೊಡಲಿಲ್ಲ, ಎಲ್ಲೆಂದರೆ ಅಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಆದ್ದರಿಂದ ಅವರಿಗೆ ಮಂಜೂರಾಗಿದ್ದ ಜಾಗವನ್ನು ತೆರವುಗೊಳಿಸಿ ಕೊಡುವಂತೆ ಶಿವಕುಮಾರ್ ಹೇಳಿದರು,

ಪುರಸಭೆಯ ಮುಖ್ಯಾಧಿಕಾರಿ ಬಿ ಕೆ ವಸಂತ ಕುಮಾರಿ ಮಾತನಾಡಿ, ಮಂಜೂರಾಗಿದ್ದ ಸ್ಥಳಕ್ಕೆ ಭೇಟಿ ನೀಡಿ ಹೆಳವ ಸಮಾಜದ ಮುಖಂಡರ ಜೊತೆ ಸಭೆ ಮಾಡಲಾಗಿದ್ದು, ಎಲ್ಲೆಂದರಲ್ಲಿ ಮನೆ ಕಟ್ಟಿರುವುದರಿಂದ ತೆರವುಗೊಳಿಸಲು ಕಷ್ಟಕರವಾಗಿದೆ ಎಂದರು, ಆದ್ದರಿಂದ ದಾವಣಗೆರೆ ಕಾಲೋನಿಯ ಅವರಿಗೆ ಪ್ರತ್ಯೇಕವಾಗಿ ಕೂಡ್ಲೂರು ಗ್ರಾಮದ ಸರ್ಕಾರಿ ಜಮೀನನ್ನು ಗುರುತಿಸಲಾಗಿದ್ದು, ದಾವಣಗೆರೆ ಕಾಲೋನಿಯ ಮುಖಂಡ ರಾಜು ಸೇರಿದಂತೆ ಹಲವರು ಸ್ಥಳಕ್ಕೆ ಭೇಟಿ ನೀಡಿ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಅವರಿಗೆ ಶೀಘ್ರವಾಗಿ ನಿವೇಶನ ಕೊಡಿಸುವ ಭರವಸೆ ನೀಡಿದರು.

ದಾವಣಗೆರೆ ಕಾಲೋನಿಯ ರಾಜು ಮಾತನಾಡಿ, ನಿವೇಶನ ಹಾಗೂ ಮನೆಗಳನ್ನು ನಿರ್ಮಿಸಿಕೊಟ್ಟು, ಸಾಲ ಸೌಲಭ್ಯ ವ್ಯವಸ್ಥೆಯನ್ನು ಕಲ್ಪಿಸಿಕೊಡುವಂತೆ ಮನವಿ ಮಾಡಿದರು. ಅಲೆಮಾರಿ ಅಭಿವೃದ್ಧಿ ನಿಗಮದ ವಿಶೇಷ ಕರ್ತವ್ಯ ಅಧಿಕಾರಿ ಆನಂದ್ ಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಂಗೇಗೌಡ, ವಾಲ್ಮೀಕಿ ನಿಗಮದ ಶಿವಕುಮಾರ್, ತಹಸಿಲ್ದಾರ್ ಸುರೇಶಆಚಾರ್, ಸಮಾಜ ಕಲ್ಯಾಣ ಅಧಿಕಾರಿ ರಾಮೇಗೌಡ, ಮುಖಂಡ ರವಿಕುಮಾರ್, ದಾವಣಗೆರೆ ಕಾಲೋನಿಯ ವೆಂಕಟೇಶ್, ಮೂರ್ತಿ, ಆಲಗೂಡು ನಾಗರಾಜು, ಕಿರುಗಸೂರು ರಜಿನಿ ಮತ್ತಿತರರಿದ್ದರು.

ಫೆಂಗಲ್ ಚಂಡಮಾರುತಕ್ಕೆ ನೆಲ ಕಚ್ಚಿದ ಭತ್ತದ ಬೆಳೆ



ಕಟಾವಿಗೆ ಬಂದಿದ್ದ ಭತ್ತ ನೆಲಕಚ್ಚಿರುವುದು.

ನಂಜನಗೂಡು, ಡಿ.4(ಬಿಎಲ್‌ಯು)– ಫೆಂಗಲ್ ಚಂಡಮಾರುತದ ಭಾರಿ ಮಳೆಗೆ ಮೈಸೂರಿನ ನಂಜನಗೂಡು ತಾಲೂಕಿನ ಹತ್ತಾರು ಗ್ರಾಮಗಳಲ್ಲಿ ಕಟಾವಿಗೆ ಬಂದಿದ್ದ ಭತ್ತ ನೆಲಕಚ್ಚಿದೆ.

ನಂಜನಗೂಡು ತಾಲೂಕಿನ ಕಬಿನಿ ಜಲಾಶಯದ ಹುಲ್ಲಹಳ್ಳಿ, ರಾಂಪುರ ನಾಲೆ ವ್ಯಾಪ್ತಿಯ ಸುತ್ತೂರು, ಹೊಸಕೋಟೆ, ಬಿಳುಗಲಿ, ಜಿ.ಮಾರಳ್ಳಿ, ಮೂಡಳ್ಳಿ, ಅಲತ್ತೂರು, ಸಾಲುಂಡಿ, ಹರಿಹರಪುರ, ತಾಯೂರು ಸೇರಿದಂತೆ ಇತರೆ ಗ್ರಾಮದ ರೈತರು ನಷ್ಟ ಅನುಭವಿಸಿದ್ದಾರೆ.

ಮುಂಗಾರು ಮಳೆಯಿಂದ ರೈತರು ಉತ್ತಮ ಇಳುವರಿಯ ಭತ್ತ ಬೆಳೆದಿದ್ದರು. ಆದರೆ ಕಳೆದ ನಾಲ್ಕು ದಿನಗಳಿಂದ ಸುರಿದ ಧಾರಾಕಾರ ಮಳೆಯಿಂದ ಕಟಾವಿಗೆ ಬಂದಿದ್ದ ಭತ್ತ ನೆಲೆ ಕಚ್ಚಿದೆ. ಇದರಿಂದ ರೈತರು ಸರ್ಕಾರದಿಂದ ಪರಿಹಾರಕ್ಕೆ ಆಗ್ರಹಿಸಿದ್ದಾರೆ.

ನಂ.ಗೂಡು ಸಮಗ್ರ ಅಭಿವೃದ್ಧಿಗೆ ಶ್ರಮಿಸುವೆ

ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದ ದರ್ಶನ್ ಭರವಸೆ



ವಿವಿಧ ಕಾಮಗಾರಿಗಳಿಗೆ ಶಾಸಕ ದರ್ಶನ್ ಗುದ್ದಲಿಪೂಜೆ ನೆರವೇರಿಸಿದರು.

ಮಲ್ಲುಂಡಿ, ಡಿ.4– ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಇಂದಿಲ್ಲಿ ಭರವಸೆ ನೀಡಿದ್ದಾರೆ.

ಸಮೀಪದ ದೇವರಾಯಶೆಟ್ಟಿಪುರ ಗ್ರಾಮದಲ್ಲಿ 20 ಲಕ್ಷ ರೂ ವೆಚ್ಚದ ಸಿಸಿ ರಸ್ತೆ, ಹೊಸವೀಡು 20 ಲಕ್ಷ ಸಿಸಿ ರಸ್ತೆ, ಹೆಡಿಯಾಲ ಗ್ರಾಮದಲ್ಲಿ 5 ಲಕ್ಷ ರೂ ಶಾಲಾ ಕೊಠಡಿ, ವಡೆಯನಪುರ 5 ಲಕ್ಷ ಕನಕ ಭವನ, ಬಂಕಳ್ಳಿ 5 ಲಕ್ಷ ರೂ. ಗಾಣಿಗ ಸಮುದಾಯ ಭವನ, ಮಡುವಿನಹಳ್ಳಿ 5 ಲಕ್ಷ ಉಪ್ಪಾರ ಸಮುದಾಯ ಭವನ, ಕಂದೇಗಾಲ 30 ಲಕ್ಷ ರೂ ವೆಚ್ಚದ ಸಿಸಿ ರಸ್ತೆ, ಹೊಸ ಕಡಜಟ್ಟಿ 30 ಲಕ್ಷ ರೂ ವೆಚ್ಚದ ಸಿಸಿ ರಸ್ತೆ, 20 ಲಕ್ಷ ಕನಕ ಭವನ, ಸಿದ್ದೇಗೌಡನಹುಂಡಿ 5 ಲಕ್ಷ ಕನಕ ಭವನ, ಮಡಕೆಹುಂಡಿ 10 ಲಕ್ಷ ರೂ. ವೆಚ್ಚದಲ್ಲಿ ಡಾ.ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಚುನಾವಣೆ ಸಂದರ್ಭದಲ್ಲಿ ಗ್ರಾಮೀಣ ಭಾಗಗಳಲ್ಲಿ ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆ, ರಸ್ತೆಗಳ ಅಭಿವೃದ್ಧಿ ಬಗ್ಗೆ ಮನವಿ ಮಾಡಿದರು. ಅದರಂತೆ ನಮ್ಮ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಕ್ಷೇತ್ರದ ಎಲ್ಲಾ ಸಮುದಾಯದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ನಮ್ಮ ಸರ್ಕಾರ ರಾಜ್ಯದಲ್ಲಿ ಉತ್ತಮ ಆಡಳಿತ ನೀಡುತ್ತಿದೆ. ಇನ್ನೂ ಮೂರೂವರೆ ವರ್ಷ ನಮ್ಮ ಸರ್ಕಾರ ಅಧಿಕಾರದಲ್ಲಿ ಇರಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮ್ಮ ಕ್ಷೇತ್ರದ ಅಭಿವೃದ್ಧಿಗೆ ವಿಶೇಷವಾಗಿ 25 ಕೋಟಿ ಅನುದಾನ ನೀಡಿದ್ದಾರೆ ಎಂದರು.

ಕ್ಷೇತ್ರದ ಗ್ರಾಮೀಣ ಭಾಗದಲ್ಲಿ ಈಗಾಗಲೇ ಹೆಡಿಯಾಲ ಭಾಗ ಗ್ರಾಮಗಳಿಗೆ 1.86 ಕೋಟಿ ಅನುದಾನ ನೀಡಿ ಅಭಿವೃದ್ಧಿಪಡಿಸಲಾಗುವುದು. ಯಾವುದೇ ಸಮಸ್ಯೆ ಇದ್ದರೂ ನೇರವಾಗಿ ನನ್ನ ಗಮನಕ್ಕೆ ತಂದರೆ ಹಂತ ಹಂತವಾಗಿ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ಮಾಡುತ್ತೇನೆ. ಗ್ರಾಮದಲ್ಲಿ ನಡೆಯುವ ಕಾಮಗಾರಿಗೆ ಗುಣಮಟ್ಟದ ಕಾಮಗಾರಿ ನಡೆಸಲು ಸಾರ್ವಜನಿಕರು ಸಹಕರಿಸಬೇಕು ಎಂದು ತಿಳಿಸಿದರು.

25 ಸಾವಿರ ಜನರು: ಡಿ.5ರಂದು ಹಾಸನದಲ್ಲಿ ನಡೆಯುವ ಸಮಾವೇಶಕ್ಕೆ ನಮ್ಮ ಕ್ಷೇತ್ರದಿಂದ 25 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ ಎಂದು ಇದೇ ವೇಳೆ ತಿಳಿಸಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯ ಕೆ. ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಗ್ರಾಪಂ ಅಧ್ಯಕ್ಷೆ ಶಿಲ್ಪಸುರೇಶ್, ಉಪಾಧ್ಯಕ್ಷ ಬಿ.ಟಿ.ಕುಮಾರ್, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್‌ಕುಮಾರ್, ಜಯರಾಂ, ಹೋಬಳಿ ಯುವ ಘಟಕದ ಅಧ್ಯಕ್ಷ ಆದರ್ಶ, ಮಾಜಿ ಅಧ್ಯಕ್ಷ ಸಿದ್ದರಾಜು, ಹೆಡಿಯಾಲ ಗ್ರಾಪಂ ಉಪಾಧ್ಯಕ್ಷ ನಾಗೇಶ್, ಗ್ರಾಪಂ ಸದಸ್ಯ ಗೋವಿಂದರಾಜು, ಅಸ್ರಫ್ ಅಲಿ, ಗ್ರಾಪಂ ಮಾಜಿ ಅಧ್ಯಕ್ಷ ನೆಹಮತ್, ಪಿಡಿಓ ನಾಗರಾಜು, ಗ್ರಾಪಂ ಸದಸ್ಯ ಪಾಂಡು, ಮುಖಂಡರುಗಳಾದ ಮಂಜು ಪಾಟೀಲ್, ಶಿವರಾಜಪ್ಪ, ಗ್ಯಾರಂಟಿ ಸಮಿತಿ ತಾಲೂಕು ಸದಸ್ಯ ಸತೀಶ್, ಮಹಾಲಿಂಗು, ದೊಡ್ಡಶೆಟ್ಟಿ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಂಜುನಾಥ್, ಪಟೇಲ್ ರಾಜಶೇಖರ್ ಮೂರ್ತಿ, ಪರಮೇಶ್, ಕೀರ್ತಿ, ಕಗ್ಗಲಿಹುಂಡಿ ಮಹದೇವು, ಕಡಜಟ್ಟಿ ಮಹೇಶ್, ಶಿವಪ್ಪ ದೇವರು, ಹುಲ್ಲಹಳ್ಳಿ ಮಾದಪ್ಪ, ಎಇಇ ಶರಣ್ ಸೇರಿದಂತೆ ಪ್ರಮುಖರು ಹಾಜರಿದ್ದರು.

ವಿಜೃಂಭಣೆಯಿಂದ ನಡೆದ ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನ

- ಅದ್ದೂರಿ ಮೆರವಣಿಗೆ ಮೂಲಕ ಸಾಗಿದ ಕನ್ನಡ ರಥ
- ರಥದೊಂದಿಗೆ ಹೆಜ್ಜೆ ಹಾಕಿದ ಅತಿಥಿಗಳು, ಮಕ್ಕಳು



ಜಿಲ್ಲಾ ಮಟ್ಟದ ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನವನ್ನು ದೀಪ ಹಚ್ಚುವ ಮೂಲಕ ಉದ್ಘಾಟಿಸಲಾಯಿತು.



ಹುಣಸೂರು, ಡಿ.4– ಹುಣಸೂರು ನಗರದ ಪ್ರತಿಷ್ಠಿತ ಖಾಸಗಿ ಶಿಕ್ಷಣ ಸಂಸ್ಥೆ ಟ್ಯಾಲೆಂಟ್ ವಿದ್ಯಾ ಸಂಸ್ಥೆ ಹಾಗೂ ಮಕ್ಕಳ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಜಿಲ್ಲಾ ಮಟ್ಟದ ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನವನ್ನು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಕೆ.ಮಹದೇವ್ ಮತ್ತು ಸಮ್ಮೇಳನಾಧ್ಯಕ್ಷೆ ಗಾನವಿ ಉದ್ಘಾಟಿಸಿದರು.

ನಗರದ ಸಂವಿಧಾನ ವೃತ್ತದಿಂದ ಕನ್ನಡ ರಥದ ಮೆರವಣಿಗೆ ಪ್ರಾರಂಭವಾಗಿ ಕೋಟೆ ಸರ್ಕಲ್ ಮಾರ್ಗವಾಗಿ ಸಾಗಿ ಕಾರ್ಖಾನೆ ರಸ್ತೆ ಮೂಲಕ ಕಲ್ಪತರು ವೃತ್ತದ ಹಾದಿಯಾಗಿ ಸಾವಿರಾರು ವಿದ್ಯಾರ್ಥಿಗಳು, ಜಾನಪದ ಕಲಾತಂಡಗಳಾದ ವೀರಗಾಸೆ, ಹುಲಿವೇಷದೊಂದಿಗೆ ವಿದ್ಯಾರ್ಥಿಗಳು ಕನ್ನಡದ ಜಯಘೋಷಗಳೊಂದಿಗೆ, ಹೆಣ್ಣು ಮಕ್ಕಳು ಕಳಸದೊಂದಿಗೆ ಟ್ಯಾಲೆಂಟ್ ವಿದ್ಯಾ ಸಂಸ್ಥೆ ಆವರಣಕ್ಕೆ ಆಗಮಿಸಿ ಅತಿಥಿಗಳೊಂದಿಗೆ ಕುವೆಂಪು ಕಲಾ ವೇದಿಕೆಯಲ್ಲಿ ದೀಪ ಹಚ್ಚುವ ಮೂಲಕ ಪ್ರಾರಂಭವಾಯಿತು.

ಸಭಾ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಉಡುಪಿ ಮೂಲದ ಖ್ಯಾತ ಭರತ ನಾಟ್ಯ ಕಲಾವಿದೆ ಕಾಂತಾರ ಖ್ಯಾತಿಯ ನಟಿ ಶ್ರೀಮತಿ ಮಾನಸಿ ಸುಧೀರ ಮುಖ್ಯ ಕೇಂದ್ರ ಬಿಂದುವಾಗಿ ನೆರೆದ ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯದ ನುಡಿಮುತ್ತುಗಳನ್ನಾಡಿ ಸಾಹಿತ್ಯಾಭಿಮಾನಿಗಳ ಮೆಚ್ಚುಗೆಗೆ ಪಾತ್ರರಾದರು.

ಸಭಾ ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅವರು ಧ್ವಜಾರೋಹಣ ನೆರವೇರಿಸಿದರೆ, ಅತಿಥಿಗಳಾದ ಹೆಚ್.ಕೆ.ಮಹದೇವ್, ಸರ್ವಾಧ್ಯಕ್ಷೆ ಗಾನವಿ, ಸಂಸ್ಥಾಪಕ ನಿರ್ದೇಶಕರಾದ ನವೀನ್ ರೈ, ಡಾ. ಶ್ರೀನಾಥ್, ಸಾಯಿನಾಥ ವಿ.ಪಿ, ಆನಂದ ಆರ್, ರೇಣುಕಾಪ್ರಸಾದ್ ಕೆ.ಎಸ್, ಸಾಹಿತಿ ಜೆ.ಮಹದೇವ್ ಸೇರಿದಂತೆ ಗಣ್ಯರು ಭಾಗವಹಿಸಿದ್ದರು.

ಸ್ವರಚಿತ ಕವನ ವಾಚನ ಕವಿಗೋಷ್ಠಿ, ಭರತ ನಾಟ್ಯ ಮತ್ತು ಜಾನಪದ ನೃತ್ಯ ಮತ್ತು ಜಾನಪದ ಗೀತ ಗಾಯನದ ಮೂಲಕ ನಗರದ ಹಲವು ಶಾಲೆಗಳ ಮಕ್ಕಳು ನೆರೆದಿದ್ದವರನ್ನು ರಂಜಿಸಿದರು.

ರಾಷ್ಟ್ರ ಪ್ರಶಸ್ತಿ ವಿಜೇತ ಗಿರೀಶ್ ಮತ್ತು ಕಲಾವಿದ ಕುಮಾರ್ ಅರಸೇಗೌಡರನ್ನು ಸನ್ಮಾನಿಸಲಾಯಿತು. ಶಾಲಾ ಸಂಸ್ಥಾಪಕ ನಿರ್ದೇಶಕ ನವೀನ್ ರೈ ಮಾತನಾಡಿ, ಅರ್ಥಪೂರ್ಣ ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲಾ ಕವಿ ಮನಸ್ಸು ಸಾಹಿತ್ಯಾಭಿಮಾನಿಗಳಿಗೆ ವಿದ್ಯಾರ್ಥಿಗಳಿಗೆ, ಅತಿಥಿಗಳಿಗೆ, ನೇರವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು.

ಯಶಸ್ವಿ ಕನ್ನಡ ಜಾತ್ರೆಯಲ್ಲಿ ಸಂಸ್ಥೆ ನಿರ್ದೇಶಕ ಡಾ. ಶ್ರೀನಾಥ್, ಮಂಜುನಾಥ್ ಆರ್.ಎನ್ ಶಾಲಾ ಪ್ರಾಂಶುಪಾಲರಾದ ಎಂ.ಟಿ. ಮಂಜುನಾಥ್, ಗುಲ್ನಾಜ್, ಜಗದೀಶ್, ಶಶಿಕಲಾ, ಮಂಜುನಾಥ್ ಎಂ.ಡಿ, ಸುಧಾಕರ್, ಪ್ರಸನ್ನ, ಮಹದೇವ್, ಕನ್ನಿಕಾ ಸೇರಿದಂತೆ ಎಲ್ಲಾ ಶಾಲಾ ಶಿಕ್ಷಕ, ಶಿಕ್ಷಕಿಯರು ಭಾಗವಹಿಸಿ ಕಾರ್ಯಕ್ರಮವನ್ನು ಸಂಭ್ರಮಿಸಿದರು.

ದಟ್ಟಗಳ್ಳಿಯ 48 ನಿವೇಶನ ಮಂಜೂರಾತಿ ಮುಡಾ ನಿರ್ಣಯ ಸರ್ಕಾರದಿಂದ ರದ್ದು

ಸಿಎಂ ಸಿದ್ದರಾಮಯ್ಯರಿಂದ ಸರ್ಕಾರದ 700 ಕೋಟಿ ಆಸ್ತಿ ಉಳಿತು

ಜೊತೆಗೆ ಮುಡಾ ಶುದ್ಧೀಕರಣವೂ ಆರಂಭವಾಯ್ತು: ಶಾಸಕ ಕೆ.ಹರೀಶ್‌ಗೌಡರಿಂದ ಅಭಿನಂದನೆ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ಶಾಸಕ ಕೆ.ಹರೀಶ್‌ಗೌಡ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ಡಿ.4(ಬಿಎಲ್‌ಯು)– ಮುಡಾದಿಂದ ಅಕ್ರಮವಾಗಿ ಮಂಜೂರಾಗಿದ್ದ ಮೈಸೂರಿನ ದಟ್ಟಗಳ್ಳಿಯ 48 ನಿವೇಶನಗಳ ಮಂಜೂರಾತಿ ರದ್ದು ಮಾಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ 700 ಕೋಟಿ ಮೌಲ್ಯದ ಸರ್ಕಾರದ ಆಸ್ತಿ ಉಳಿಸಿದ್ದು, ಈ ಮೂಲಕ ಮುಡಾ ಶುದ್ಧೀಕರಣ ಕಾರ್ಯ ಆರಂಭಿಸಿದ್ದಾರೆ ಎಂದು ಶಾಸಕ ಕೆ.ಹರೀಶ್‌ಗೌಡ, ಮುಖ್ಯಮಂತ್ರಿಗಳ ಅಭಿನಂದಿಸಿದ್ದಾರೆ.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 48 ನಿವೇಶನಗಳ ನೋಂದಣಿಗೂ ಮೊದಲೇ ಬಹಳಷ್ಟು ಮಂದಿ ಬೇನಾಮಿಯಾಗಿ ಅಲ್ಲಿನ ಸೈಟ್‌ಗಳ ಸೇಲ್ ಅಗ್ರಿಮೆಂಟ್ ಮಾಡಿಕೊಂಡಿದ್ದರು ಎಂದು ಆರೋಪಿಸಿದರು.

ಮಾರ್ಚ್ 23, 2023 ರಂದು ನಡೆದ ಮುಡಾ ಸಭೆಯಲ್ಲಿ ದಟ್ಟಗಳ್ಳಿಯ 27.34 ಎಕರೆಯನ್ನು ಚಾಮುಂಡೇಶ್ವರಿ ಸರ್ವೋದಯ ಸಹಕಾರ ಸಂಘಕ್ಕೆ ಮಂಜೂರು ಮಾಡಲಾಗಿತ್ತು.ಇದೆಲ್ಲವೂ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಹಾಗೂ ಎಸ್.ಟಿ.ಸೋಮಶೇಖರ್ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಕೈಗೊಂಡ ತೀರ್ಮಾನವಾಗಿತ್ತು ಎಂದು ಸ್ಪಷ್ಟಪಡಿಸಿದರು.

ತರುವಾಯ ನಾನು ಶಾಸಕನಾಗಿ ಆಯ್ಕೆಯಾದಾಗ ಸೆಪ್ಟಂಬರ್ 6, 2023 ರಂದು ನಡೆದ ಮುಡಾ ಸಭೆಯಲ್ಲಿ ಮಾರ್ಚ್ 23, 2023ರಂದು ಕೈಗೊಂಡಿದ್ದ ನಿರ್ಣಯ ಅಂಗೀಕರಿಸಬೇಕಿತ್ತು. ಆದರೆ ಅಂದು ನಮಗೆ ಹಿಂದಿನ ಸಭೆಯ ಯಾವುದೇ ನಡಾವಳಿಯ ವಿವರ ನೀಡಲಿಲ್ಲ. ಇದರಿಂದ ಇದರಲ್ಲಿ ಯಾವುದೇ ಲೋಪವಿಲ್ಲವೆಂದು ನಾವು ಅನುಮೋದನೆ ನೀಡಿದ್ದೆವು ಎಂದು ಹರೀಶ್‌ಗೌಡರು ತಿಳಿಸಿದರು.

ತರುವಾಯ ಮುಡಾದ ಸಭೆಯಲ್ಲಿ ಕೈಗೊಂಡಿದ್ದ 48 ನಿವೇಶನಗಳ ಮಂಜೂರಾತಿ ವಿವರವನ್ನು ಸಮಗ್ರವಾಗಿ ಓದಿದಾಗ ಕಾನೂನುಬಾಹಿರ ಅಂಶ ಇರುವುದು ಸ್ಪಷ್ಟವಾಯಿತು. ಈ ಬಗ್ಗೆ ಮುಡಾದ ಅಂದಿನ ಆಯುಕ್ತ ದಿನೇಶ್ ಕುಮಾರ್ ಭೇಟಿ ಮಾಡಿದಾಗ ನ್ಯಾಯಾಲಯದಲ್ಲೆ ಈ ಬಗ್ಗೆ ತೀರ್ಮಾನ ಆಗಿರುವ ಕಾರಣ ಈಗ ಯಾವುದೇ ಬದಲಾವಣೆ ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು ಎಂದರು.

ನಂತರ ನಾನು ಸೇರಿದಂತೆ ಹಲವು ಶಾಸಕರು ಮುಡಾ ಸಭೆ ಕರೆಯುವಂತೆ ಹಿಂದಿನ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಅವರಿಗೆ ಪತ್ರ ಬರೆದಿದ್ದೆವು. ಇದರ ಫಲವಾಗಿ ನಡೆದ ಸಭೆಯಲ್ಲಿ ದಟ್ಟಗಳ್ಳಿಯ 48 ನಿವೇಶನದ ವಿಚಾರದ ಬಗ್ಗೆ ಚರ್ಚೆಯಾಯಿತು. ಆದರೆ ಈ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡರೂ ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ದಿನೇಶ್‌ಕುಮಾರ್ ಎಚ್ಚರಿಸಿದರು. ನಾವು ಜೈಲಿಗೆ ಹೋದರೂ ಸರಿ ಇದರ ವಿರುದ್ಧ ಹೋರಾಟ ಮಾಡುವುದಾಗಿ ತಿಳಿಸಿದೆವು ಎಂದು ಹರೀಶ್‌ಗೌಡ ಹೇಳಿದರು.

ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಈ ಬಗ್ಗೆ ವಿವರ ನೀಡಿದ್ದೆವು. ಎಲ್ಲಾ ಮಾಹಿತಿ ಪಡೆದ ಸಿದ್ದರಾಮಯ್ಯನವರು, ಸರ್ಕಾರದ ಆಸ್ತಿ ಉಳಿಸಲು ಹೋರಾಟ ಮಾಡುವಂತೆ ಸಲಹೆ ನೀಡಿದರು. ಈ ಪ್ರಕರಣ ಮುನ್ನೆಲೆಗೆ ಬಂದ ನಂತರ ಬಿಜೆಪಿ ಮತ್ತು ಜೆಡಿಎಸ್‌ನವರು ಸಿದ್ದರಾಮಯ್ಯ ವಿರುದ್ಧ ಮುಡಾ ಅವ್ಯವಹಾರದ ಆರೋಪ ಹೊರಿಸಿದರು ಎಂದರು.

ಈಗ ಸಿಎಂ ಸಿದ್ದರಾಮಯ್ಯನವರು ಇಡೀ ಪ್ರಕರಣದ ಬಗ್ಗೆ ತನಿಖೆ ಮಾಡಿಸಿ 48 ನಿವೇಶನಗಳ ಮಂಜೂರಾತಿ ರದ್ದು ಮಾಡಿ, 700 ಕೋಟಿ ಮೌಲ್ಯದ ಸರ್ಕಾರದ ಆಸ್ತಿ ಉಳಿಸಿದ್ದಾರೆ. ಈ ಮೂಲಕ ಮುಡಾ ಶುದ್ಧೀಕರಣ ಮಾಡುವ ಕಾರ್ಯ ಕೈಗೊಂಡಿದ್ದಾರೆ ಎಂದು ತಿಳಿಸಿದರು.

ನಿವೇಶನ ಮಂಜೂರಾತಿ ರದ್ದಾದ ಜಾಗಕ್ಕೆ ಬೇಲಿ; ಮುಡಾ ಆಸ್ತಿ ಫಲಕ ಅಳವಡಿಕೆ

48 ನಿವೇಶನ ಮಂಜೂರಾತಿ ರದ್ದು ಮಾಡಿರುವ ಜಾಗಕ್ಕೆ ಬೇಲಿ ಹಾಕಿಸಿ, ಮುಡಾ ಫಲಕ ಅಳವಡಿಸಲಾಗುವುದು ಎಂದು ಶಾಸಕ ಹರೀಶ್‌ಗೌಡ ತಿಳಿಸಿದರು.

ಇದು ಚಾಮುಂಡೇಶ್ವರಿ ಸರ್ವೋದಯ ಸಹಕಾರ ಸಂಘಕ್ಕೂ ಸೇರಿಲ್ಲ, ವೀರಕುಮಾರ್ ಜೈನ್ ಎಂಬುವರಿಗೂ ಸೇರಿಲ್ಲ. ಇದು ಪಕ್ಕಾ ಮುಡಾ ಆಸ್ತಿಯಾಗಿದ್ದು, ಈ ಬಗ್ಗೆ ನ್ಯಾಯಾಲಯವೇ ತೀರ್ಪು ನೀಡಿದೆ ಎಂದು ಹೇಳಿದರು.

ಮುಡಾದಲ್ಲಿ ನಡೆದಿರುವ 50:50 ಅನುಪಾತದ ನಿವೇಶನ ಮಂಜೂರಾತಿ ಹಗರಣ ಹಿಂದಿನ ಆಯುಕ್ತರಾದ ನಟೇಶ್ ಹಾಗೂ ದಿನೇಶ್‌ಕುಮಾರ್ ಅವಧಿಯಲ್ಲಿ ಮಾತ್ರವಲ್ಲದೆ ಹಿಂದೆ ಕೂಡ ನಡೆದಿದೆ. ಈ ಬಗ್ಗೆ ಮೂರು ತನಿಖಾ ಸಂಸ್ಥೆಗಳಿಂದ ತನಿಖೆ ನಡೆಯುತ್ತಿದೆ. ಇವುಗಳನ್ನು ರದ್ದು ಮಾಡುವಂತೆ ನಾವು ಕೂಡ ಸರ್ಕಾರವನ್ನು ಆಗ್ರಹಿಸುತ್ತೇವೆಂದು ಹರೀಶ್‌ಗೌಡ ಸ್ಪಷ್ಟಪಡಿಸಿದರು.

ಅಕ್ರಮದಲ್ಲಿ ಭಾಗಿಯಾಗಿರುವ ದಿನೇಶ್ ಕುಮಾರ್ ವಿರುದ್ಧ ಇನ್ನು ಕೂಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡದಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಹರೀಶ್‌ಗೌಡರು, ದಿನೇಶ್‌ಕುಮಾರ್ ವಿರುದ್ಧ ಪ್ರಕರಣ ದಾಖಲಿಸುವ ಸಂಬಂಧ ಕಳೆದ ಮುಡಾ ಸಭೆಯಲ್ಲಿ ಚರ್ಚೆ ನಡೆದಿದೆ ಎಂದು ತಿಳಿಸಿದರು.

ಈಗಾಗಲೇ ಮೂರು ತನಿಖಾ ಸಂಸ್ಥೆಗಳಿಂದ ತನಿಖೆ ಪ್ರಗತಿಯಲ್ಲಿರುವ ಕಾರಣ ಪೊಲೀಸ್ ತನಿಖೆ ಅವಶ್ಯವಿಲ್ಲವೆಂದು ನಾನೇ ಮುಡಾ ಸಭೆಯಲ್ಲಿ ಹೇಳಿದ್ದೆ. ಆದರೂ ಪೊಲೀಸರಿಂದ ತನಿಖೆ ನಡೆಸಬೇಕು ಎಂದು ಈಗ ಆಗ್ರಹಿಸುತ್ತೇನೆ. ಮುಂದಿನ ಮುಡಾ ಸಭೆಯಲ್ಲಿ ಈ ಬಗ್ಗೆ ಧ್ವನಿ ಎತ್ತುತ್ತೇನೆ ಎಂದು ಹರೀಶ್‌ಗೌಡ ಹೇಳಿದರು.

ಆಧಾರರಹಿತ ಆರೋಪ: ಮೈಸೂರಿನ ಮುನೇಶ್ವರನಗರದ ನಿವೇಶನಗಳ ವಕ್ಫ್ ವಿವಾದ ಸಂಬಂಧ ಅಲ್ಲಿಗೆ ಭೇಟಿ ನೀಡಿದ್ದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಅಶೋಕ್ ಕಾಂಗ್ರೆಸ್ ಸರ್ಕಾರದ ವಿರುದ್ಧ ಆಧಾರರಹಿತ ಆರೋಪ ಮಾಡಿದ್ದಾರೆ. ಈ ಮೂಲಕ ಮೈಸೂರಿನ ಕೋಮುಸೌಹಾರ್ದ ಹದಗೆಡಿಸಿ ಶಾಂತಿ ಸುವ್ಯವಸ್ಥೆಗೆ ಧಕ್ಕೆ ತರಲು ಮುಂದಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಾಸನದಲ್ಲಿ ನಾಳೆ ನಡೆಯುವ ಜನಕಲ್ಯಾಣ ಸಮಾವೇಶಕ್ಕೆ ಮೈಸೂರಿನಿಂದ ಒಂದೂವರೆ ಲಕ್ಷ ಜನರು ಹೋಗುತ್ತಾರೆ. ರಾಜ್ಯ ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆ ಹಾಗೂ ಬಿಜೆಪಿ ಮತ್ತು ಜೆಡಿಎಸ್ ಕುತಂತ್ರ ರಾಜಕಾರಣವನ್ನು ಜನತೆಗೆ ತಿಳಿಸಲಾಗುವುದು ಎಂದು ಹರೀಶ್‌ಗೌಡರು ತಿಳಿಸಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಚಾಮರಾಜ ಕ್ಷೇತ್ರದ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸುಬ್ರಹ್ಮಣ್ಯೇಶ್ವರ ಸ್ವಾಮಿ ಜಾತ್ರೆಗೆ ಬಂದೋಬಸ್ತ್ ವ್ಯವಸ್ಥೆ

ಮೈಸೂರು, ಡಿ.4– ಮೈಸೂರು ತಾಲೂಕಿನ ಕಸಬಾ ಹೋಬಳಿಯ ಸಿದ್ದಲಿಂಗಪುರ ಗ್ರಾಮದಲ್ಲಿ ಡಿ.7ರಂದು ಶ್ರೀ ಸುಬ್ರಮಣ್ಯೇಶ್ವರಸ್ವಾಮಿಯ ಷಷ್ಠಿ ಜಾತ್ರೆ ನಡೆಯಲಿದ್ದು, ಈ ರಥೋತ್ಸವದಂದು ದೇವಸ್ಥಾನದ ಗರ್ಭಗುಡಿಯಲ್ಲಿ ನೂಕು–ನುಗ್ಗಲು ಉಂಟಾಗುವುದರಿಂದ ಭಕ್ತಾದಿಗಳನ್ನು ನಿಯಂತ್ರಿಸಲು ಹಾಗೂ ವಿಶೇಷ ದರ್ಶನಕ್ಕೆ ಭಕ್ತಾದಿಗಳು ಶೀಘ್ರ ದರ್ಶನ ಪಡೆಯಲು ಭಕ್ತಾದಿಗಳ ಸುರಕ್ಷತೆಯ ದೃಷ್ಟಿಯಿಂದ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಜಾತ್ರಾ ಮಹೋತ್ಸವಕ್ಕೆ ಕಂದಾಯ ಇಲಾಖಾ ನೌಕರರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ನೇಮಕಗೊಂಡಿರುವ ಕಂದಾಯ ಇಲಾಖಾ ಸಿಬ್ಬಂದಿ ವರ್ಗದವರು ಡಿ.6ರ ಮಧ್ಯಾಹ್ನ 3 ಗಂಟೆಯಿಂದ ಡಿ.7ರ ರಾತ್ರಿ 11 ಗಂಟೆಯವರೆಗೆ ದೇವಸ್ಥಾನದಲ್ಲಿ ಹಾಜರಿದ್ದು, ಕರ್ತವ್ಯ ನಿರ್ವಹಿಸುತ್ತಾರೆ. ಸದರಿ ದಿನದಂದು ಉಚಿತವಾಗಿ ಪ್ರಸಾದ ವಿನಿಯೋಗ ಮಾಡುವವರು ಮೈಸೂರಿನ ತಹಶೀಲ್ದಾರ್ ಕಚೇರಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಮೈಸೂರು ತಾಲೂಕು ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಸನದ ಜನಕಲ್ಯಾಣ ಸಿದ್ದರಾಮಯ್ಯ ಸ್ವಾಭಿಮಾನಿ ಸಮಾವೇಶಕ್ಕೆ ಮೈಸೂರಿಂದ ಲಕ್ಷ ಮಂದಿ ಭಾಗಿ

ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಂ ಮಾಹಿತಿ

ಮೈಸೂರು,ಡಿ.4(ಎಸ್‌ಪಿಎನ್)– ನಾಳೆ(ಗುರುವಾರ) ಹಾಸನದಲ್ಲಿ ಏರ್ಪಡಿಸಿರುವ ಜನಕಲ್ಯಾಣ ಸಿದ್ದರಾಮಯ್ಯ ಸ್ವಾಭಿಮಾನಿ ಸಮಾವೇಶಕ್ಕೆ ಮೈಸೂರು ಜಿಲ್ಲೆಯಿಂದ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ ಎಂದು ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾಹಿತಿ ನೀಡಿದ್ದಾರೆ.

ಮೈಸೂರು ನಗರದ ಜಲದರ್ಶಿನಿಯಲ್ಲಿ ಬುಧವಾರ ನಡೆದ ಅಹಿಂದ ಮುಖಂಡರು ಹಾಗೂ ಕಾಂಗ್ರೆಸ್ ನಾಯಕರ ಪೂರ್ವಸಿದ್ಧತಾ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿ, ಶೋಷಿತ ಸಮಾಜಗಳ ಸಾಮಾಜಿಕ ನ್ಯಾಯದ ಪರವಾಗಿ ದುಡಿಯುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈ ಬಲಪಡಿಸಲು ಹಾಗೂ ಅಹಿಂದ ಸೇರಿದಂತೆ ಇತರೆ ವರ್ಗಗಳ ಆಶೋತ್ತರಗಳಿಗೆ ಸ್ಪಂದಿಸುವ ಉದ್ದೇಶದಿಂದ ಜನಕಲ್ಯಾಣ ಸಿದ್ದರಾಮಯ್ಯ ಸಮಾವೇಶ ಆಯೋಜಿಸಲಾಗಿದೆ ಎಂದರು.

ಮೂರು ಲಕ್ಷಕ್ಕೂ ಅಧಿಕ ಮಂದಿ ಸೇರುವ ಈ ಸಮಾವೇಶದಲ್ಲಿ ಮೈಸೂರಿನಿಂದ ಶೋಷಿತ, ಅಹಿಂದ ಹಾಗೂ ಎಲ್ಲಾ ವರ್ಗದ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳಲಿದ್ದಾರೆ. ಜನರನ್ನು ಸಂಘಟಿಸುವ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ವಾಹನಗಳು ಹೊರಡಲಿವೆ. ತಾಲೂಕು ಮಟ್ಟದಲ್ಲಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಮುಖಂಡರು ಜನರನ್ನು ಕರೆದೊಯ್ಯಲು ಸಹಕರಿಸಲಿದ್ದಾರೆ. ಅದಕ್ಕೆ ಪೂರಕವಾದ ಎಲ್ಲಾ ರೀತಿಯ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.



ಹಿಂದುಳಿದ ವರ್ಗಗಳ ಮುಖಂಡರಿಂದ ಹಾಸನದ ಕೃಷ್ಣಾನಗರ ಮೈದಾನದಲ್ಲಿ ಜನಕಲ್ಯಾಣ ಸಿದ್ದರಾಮಯ್ಯ ಸ್ವಾಭಿಮಾನಿ ಸಮಾವೇಶದ ವೀಕ್ಷಿಸುತ್ತಿರುವ ದೃಶ್ಯ

ಇದು ಯಾವುದೇ ಪಕ್ಷ ಹಾಗೂ ಸಂಘಟನೆ ವಿರುದ್ಧ ನಡೆಸುತ್ತಿರುವ ಸಮಾವೇಶವಲ್ಲ. ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದತ್ತವಾಗಿ ನೀಡುತ್ತಿರುವ ಸಮಾನತೆಯನ್ನು ಸಾಕಾರಗೊಳಿಸಲು ಹಾಗೂ ಎಲ್ಲರಿಗೂ ಸಮಾನ ಅವಕಾಶ ದೊರಕಿಸಿಕೊಡುವ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷ ಹಾಗೂ ಇತರೆ ಸಂಘಟನೆಗಳ ಸಹಯೋಗದೊಂದಿಗೆ ಈ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು. ಸಮಾವೇಶದಲ್ಲಿ ಸಿದ್ದರಾಮಯ್ಯ ಅವರು ವಂಚಿತ ಸಮುದಾಯಗಳಿಗೆ ಪ್ರೋತ್ಸಾಹಿಸಲು ಹಮ್ಮಿಕೊಂಡಿರುವ ಯೋಜನೆಗಳು ಹಾಗೂ ಭವಿಷ್ಯದಲ್ಲಿ ಸರ್ಕಾರದಿಂದ ಕೈಗೊಳ್ಳುವ ಕಾರ್ಯಕ್ರಮಗಳ ಬಗ್ಗೆ ತಿಳಿಸುವುದಲ್ಲದೇ ಅಹಿಂದ ವರ್ಗದ ಬೆನ್ನೆಲುಬಾಗಿ ಸರ್ಕಾರ ನಿಲ್ಲಲಿದೆ ಎಂಬ ಸ್ಪಷ್ಟ ಸಂದೇಶ ನೀಡಲಿದ್ದಾರೆ ಎಂದರು. ಸಭೆಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್ ಜಿಲ್ಲಾ ಮಡಿವಾಳ ಸಂಘದ ಅಧ್ಯಕ್ಷ ರವಿನಂದನ್, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಶಿವಪ್ಪ ಕೋಟೆ, ಮಡಿವಾಳ ಸಂಘದ ಅಧ್ಯಕ್ಷ ಮೊಗಣ್ಣಚಾರ್, ದಿನೇಶ್ ಷಿಂಶ, ಸಿದ್ದು ಕೇಸರಿ, ಲೋಕೇಶ್ ಮಾದಾಪುರ, ದಲಿತ ಮುಖಂಡ ರಾಜಶೇಖರ್ ಸೇರಿದಂತೆ ಇತರರಿದ್ದರು.

ಅಲೆಮಾರಿಗಳ ಸಮಸ್ಯೆ ನಿವಾರಣೆಯಲ್ಲಿ ಅಧಿಕಾರಿಗಳ ನಿರ್ಲಕ್ಷ್ಯತೆ

- ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಬೇಸರ
- ಫಲಾನುಭವಿಗಳಿಗೆ ಸರ್ಕಾರದ ಯೋಜನೆ ತಲುಪಿಸುವಲ್ಲಿ ಮೈಸೂರಲ್ಲಿ ವೈಫಲ್ಯ

ಮೈಸೂರು, ಡಿ.4(ಎಂಕೆ)– ಜಿಲ್ಲೆಯ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಕುಟುಂಬಗಳು ಇಂದಿಗೂ ಮೂಲಸೌಕರ್ಯದಿಂದ ವಂಚಿತವಾಗಿದ್ದು, ಸರ್ಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ ಸ್ಥಳೀಯ ಅಧಿಕಾರಿಗಳ ನಿರ್ಲಕ್ಷ್ಯತೆ ಎದ್ದುಕಾಣುತ್ತಿದೆ ಎಂದು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ಸಂಜೆ ಸುದ್ದಿಗೋಷ್ಠಿ ನಡೆಸಿದ ಅವರು, ಕಳೆದ ಮೂರು ದಿನಗಳಿಂದ ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಟಿ.ನರಸೀಪುರ, ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ವಿವಿಧ ಗ್ರಾಮಗಳಲ್ಲಿ ವಾಸಿಸುತ್ತಿರುವ ಅಲೆಮಾರಿ ಸಮುದಾಯದವರ ಸಮಸ್ಯೆಗಳನ್ನು ಆಲಿಸಲಾಗಿದೆ. ಶೀಘ್ರವೇ ಸಮಸ್ಯೆಗಳನ್ನು ನಿವಾರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಲ್ಲದೆ ಅಲೆಮಾರಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಸರ್ಕಾರಕ್ಕೆ ವರದಿ ನೀಡಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಡಿ.2ರಂದು ಹುಣಸೂರು ತಾಲೂಕಿನ ಕೆಬ್ಬೆಕೊಪ್ಪಲು ಗ್ರಾಮದ ದೊಂಬರ ಕಾಲೋನಿಯಲ್ಲಿ 25 ದೊಂಬರ ಕುಟುಂಬಗಳು ಕಳೆದ 70 ವರ್ಷಗಳಿಂದ ವಾಸಿಸುತ್ತಿದ್ದು, ಈವರೆಗೆ ಅವರಿಗೆ ಸ್ವಂತ ಸೂರು ನೀಡಿಲ್ಲ. ಮನೆ ಕಟ್ಟಿಕೊಳ್ಳಲು ತಮ್ಮದು ಎಂಬ ಜಾಗವಿಲ್ಲ. ಸತ್ತವರನ್ನು ಹೂಳಲು ಸರ್ಕಾರಿ ಸ್ಮಶಾನಕ್ಕೆ ಸವರ್ಣೀಯರು ಬಿಡುತ್ತಿಲ್ಲ. ಶಿಕ್ಷಣದಿಂದ ವಂಚಿತರಾಗಿದ್ದಾರೆ. ಸಾಲಿಗ್ರಾಮ ತಾಲೂಕಿನ ರಾಂಪುರದಲ್ಲಿ ಹಂದಿಜೋಗಿ ಸಮುದಾಯ 80 ಕುಟುಂಬಗಳ ವಾಸ ಮಾಡುತ್ತಿದ್ದು, ಇಲ್ಲಿರುವವರಿಗೂ ಸ್ವಂತ ನೆಲೆ ಇಲ್ಲ. ಹುಣಸೂರು ತಾಲೂಕಿನ ಅಂಬೇಡ್ಕರ್ ಕಾಲೋನಿಯಲ್ಲಿ 33 ದೊಂಬರ ಕುಟುಂಬ ಹಾಗೂ 30 ಜೇನುಕುರುಬ ಕುಟುಂಬಗಳು ಇವೆ. ಆದರೆ, ಇಲ್ಲಿರುವ ಬಹುತೇಕ ಕುಟುಂಬಸ್ಥರಿಗೆ ಆಧಾರ್, ಮತದಾರರ ಚೀಟಿ ಸೇರಿದಂತೆ ಗುರುತಿನ ಚೀಟಿಗಳಿಲ್ಲ ಎಂದು ಬೇಸರ ಹೊರಹಾಕಿದರು.

ಹುಣಸೂರು ತಾಲೂಕಿನ ಮಂಗಳೂರು ಮಾಳದಲ್ಲಿ ಡೋಂಗ್ರಿ ಗೆರಾಸಿಯ ಸಮುದಾಯದವರು ನೆಲೆಸಿದ್ದು, ಯಾರೊಬ್ಬರಿಗೂ ನಿವೇಶನ ನೀಡಿಲ್ಲ. ಹಾಗೆಯೇ ಪಿರಿಯಾಪಟ್ಟಣ ತಾಲೂಕಿನಲ್ಲಿ 38 ಹಾಡಿಗಳಿದ್ದು, ಸುಮಾರು 6 ಸಾವಿರಕ್ಕೂ ಹೆಚ್ಚು ಮಂದಿಗೆ ಗುರುತಿನ ಚೀಟಿ ಸಿಕ್ಕಿಲ್ಲ. ಟಿ.ನರಸೀಪುರ ಟೌನ್ ದಾವಣಗೆರೆ ಕಾಲೋನಿ ನಿವಾಸಿಗಳಿಗೆ ಜಾಗ ಗುರ್ತಿಸಿದ್ದರೂ ನಿವೇಶನ ಹಂಚಿಕೆಯಾಗಿಲ್ಲ. ಹೆಚ್.ಡಿ.ಕೋಟೆ ತಾಲೂಕಿನ ಗೋಳೂರು ಹಾಡಿ, ಸರಗೂರಿನ ಯಶವಂತಪುರಕ್ಕೆ ಭೇಟಿ ನೀಡಿ ಅಲ್ಲಿನ ಬುಡಕಟ್ಟು ಸಮುದಾಯದವರ ಸಮಸ್ಯೆಗಳನ್ನು ಆಲಿಸಿರುವುದಾಗಿದೆ ಮಾಹಿತಿ ನೀಡಿದರು.

ಹಾಡಿಗಳಲ್ಲಿ ನೆಲೆಸಿರುವವರು ತಾವಿರುವಲ್ಲೇ ಉತ್ತಮವಾಗಿ ಮನೆಕಟ್ಟಿಕೊಳ್ಳಲು ಸಾಧ್ಯವಾಗಿಲ್ಲ. ಹಾಗಾಗಿ ಸಂಬಂಧಪಟ್ಟ ಸ್ಥಳೀಯ ಅಧಿಕಾರಿ ಮತ್ತು ಸಿಬ್ಬಂದಿಗೆ ಸಮಸ್ಯೆಗಳ ಪರಿಹಾರಕ್ಕೆ ಸ್ಪಂದಿಸಲು ಸೂಚಿಸಿರುವುದಲ್ಲದೇ ಪ್ರಗತಿಯ ವರದಿ ನೀಡುವಂತೆ ತಿಳಿಸಲಾಗಿದೆ. ಆಶ್ರಯ ಯೋಜನೆಯಡಿ ಸರ್ಕಾರಿ ಜಾಗಗಳನ್ನು ಗುರ್ತಿಸಿ ಅಲೆಮಾರಿಗಳ ನಿವೇಶನ ಹಂಚಿಕೆ ಜೊತೆಗೆ ಮನೆ ಕಟ್ಟಿಕೊಳ್ಳಲು ಆರ್ಥಿಕ ನೆರವಿಗಾಗಿ ನಿಗಮಕ್ಕೆ ಅರ್ಜಿ ಸಲ್ಲಿಸಲು ನೆರವಾಗುವಂತೆ ಸೂಚಿಸಿದ್ದೇನೆ. ಹಲವೆಡೆ ಪಡಿತರ ಸೌಲಭ್ಯದಿಂದ ವಂಚಿತರಾಗಿರುವುದು ಕಂಡು ಬಂದಿದೆ. ಎಲ್ಲರಿಗೂ ಗುರುತಿನ ಚೀಟಿ ನೀಡಲು ಶಿಬಿರ ಆಯೋಜಿಸುವಂತೆ ಹೇಳಲಾಗಿದೆ ಎಂದು ವಿವರಿಸಿದರು.

ತಾಂತ್ರಿಕ ಕಾರಣವೆಂಬ ನೆಪ: ನಂಜನಗೂಡು ತಾಲೂಕಿನ ಮಹದೇವನಗರದಲ್ಲಿ 20ಕ್ಕೂ ಹೆಚ್ಚು ದೊಂಬರ ಕುಟುಂಬ ನೆಲೆಸಿದ್ದು, ಅವರಿಗೆ ಮನೆ ಕಟ್ಟಿಕೊಡಲು, ಕೃಷಿ ಮಾಡಲು 55 ಎಕರೆ ಅರಣ್ಯ ಭೂಮಿಯನ್ನು ಡಿನೋಟಿಫೈ ಮಾಡಲಾಗಿದೆ. ಆದರೆ ಅಧಿಕಾರಿಗಳು ತಾಂತ್ರಿಕ ಕಾರಣ ನೆಪವೊಡ್ಡಿ ಈವರೆಗೂ ಅಲ್ಲಿನ ಜನರಿಗೆ ಹಕ್ಕುಪತ್ರ ನೀಡದಿರುವುದು ಬೆಳಕಿಗೆ ಬಂದಿದೆ ಎಂದರು.

ಅಲೆಮಾರಿ ಸಮುದಾಯಗಳ ಮೇಲಿನ ಅಸಡ್ಡೆ ಮನೋಭಾವದಿಂದ ಜಿಲ್ಲೆಯಲ್ಲಿ ನೂರಾರು ಎಸ್ಸಿ–ಎಸ್ಟಿ ಅಲೆಮಾರಿ ಕುಟುಂಬಗಳು ಸ್ವಂತ ಸೂರು, ಮೂಲಸೌಕರ್ಯಗಳಿಲ್ಲದೇ ಜೀವನ ನಡೆಸುತ್ತಿವೆ. ಸರ್ಕಾರ ಮತ್ತು ಫಲಾನುಭವಿಗಳ ನಡುವೆ ಅಧಿಕಾರಿಗಳು ಸೇತುವೆಯಾಗಿ ಕೆಲಸ ಮಾಡಬೇಕು. ಆದರೆ, ಅದು ಆಗುತ್ತಿಲ್ಲ. ಈ ಬಗ್ಗೆ ನಿರ್ಲಕ್ಷ್ಯ ತೋರುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಎಚ್ಚರಿಸಿದರು. ಅಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿ ಬಿ.ಎಸ್.ಆನಂದ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಎಸ್ಸಿ–ಎಸ್ಟಿ ಜಿಲ್ಲಾ ಅನುಷ್ಠಾನ ಸಮಿತಿ ಸದಸ್ಯ ರವಿಕುಮಾರ್ ಎನ್.ಕೊಡಗಹಳ್ಳಿ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಸುದ್ದಿಗೋಷ್ಠಿ ನಡೆಸಿದರು.

ಅಲೆಮಾರಿಗಳೆಂದರೆ ಇಷ್ಟೊಂದು ನಿರ್ಲಕ್ಷ್ಯತೆ; ಜಿಲ್ಲಾಧಿಕಾರಿಗಳ ನಡೆಗೆ ತೀವ್ರ ಅಸಮಾಧಾನ...!

ಕಳೆದ ಮೂರು ದಿನಗಳಿಂದ ನಾನು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದೇನೆ. ಎಸ್ಸಿ–ಎಸ್ಟಿ ಅಲೆಮಾರಿ ಅಭಿವೃದ್ಧಿ ನಿಗಮದ ಜಿಲ್ಲಾ ಅನುಷ್ಠಾನ ಸಮಿತಿ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿಗಳು ಸೌಜನ್ಯಕ್ಕಾದರು ಭೇಟಿಯಾಗುವುದಿರಲಿ, ಒಂದು ಫೋನ್ ಕರೆ ಸಹ ಮಾಡಿಲ್ಲ. ಅಲೆಮಾರಿಗಳೆಂದರೆ ಇಷ್ಟೊಂದು ನಿರ್ಲಕ್ಷ್ಯವೇ ಎಂದು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ, ಜಿಲ್ಲಾಧಿಕಾರಿಗಳ ನಡೆಯಿಂದ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ವಾರಕ್ಕೂ ಮುನ್ನವೇ ಪ್ರವಾಸ ವೇಳಾಪಟ್ಟಿ ಕಳುಹಿಸಿದೆ. ಪ್ರವಾಸದ ವೇಳೆ ಎಲ್ಲಾ ಅಧಿಕಾರಿ–ಸಿಬ್ಬಂದಿಗಳಿದ್ದರು. ಆದರೆ ಮುಖ್ಯವಾಗಿ ಇರಬೇಕಾದವರೇ ನಮ್ಮೊಂದಿಗೆ ಜೊತೆಗೆ ಬರುವುದಿರಲೀ ಪ್ರವಾಸ ಹೇಗೆ ನಡೆಯುತ್ತಿದ್ದೆ. ಏನಾದರೂ ತೊಂದರೆಗಳಾಗಿವೆಯೇ ಎಂದು ಕೇಳಿಲ್ಲ. ಅಲ್ಲದೆ ಅವರು ಹೇಳಿದ ಸಮಯದಲ್ಲಿಯೇ ಸಭೆ ನಡೆಸಲು ನಿರ್ಧರಿಸಿದ್ದರೂ ಬೇರೊಂದು ಕಾರಣ ನೀಡಿ ಗೈರಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ಈ ಸಂಬಂಧ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗುವುದು. ಸಾಮಾಜಿಕ ನ್ಯಾಯಕ್ಕಾಗಿ, ಅವಕಾಶ ವಂಚಿತ ಸಮುದಾಯಕ್ಕೆ ಕೆಲಸ ಮಾಡುತ್ತೇನೆ. ಮತ್ತೊಮ್ಮೆ ಮೈಸೂರಿಗೆ ಪ್ರವಾಸ ಕೈಗೊಂಡು ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನಿರಂತರವಾಗಿ ಸಂಪರ್ಕ ಸಾಧಿಸಲಾಗುವುದು ಎಂದು ಹೇಳಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಅಮರನ್(ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜಲಂಧರ(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪಾ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಲಂಧರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮೆಕ್ಯಾನಿಕ್ ರಾಕಿ (ತೆ)	4 ಪ್ರದರ್ಶನಗಳು
ಸಂಗಂ	
ಪುಷ್ಪಾ–2 (ತೆ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಘೀರ (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಂಗುವಾ (3ಡಿ) (ತ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ಅಮರನ್ (ತ): ಸಂ.4ಕ್ಕೆ, ಆನಂದ್ ಶ್ರೀಬಾಲ (ಮ): ರಾ.10.20ಕ್ಕೆ
ಸ್ಕ್ರೀನ್ 2	ಅಮರನ್ (ತ): ಬೆ.9.40ಕ್ಕೆ, ಮ.1ಕ್ಕೆ, ಬಘೀರ (ಕ): ಸಂ.4.15ಕ್ಕೆ, ಗ್ಲಾಡಿಯೇಟರ್ 2 (ಇಂ): ರಾ.7.20ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.35ಕ್ಕೆ, ರಾ.7.15ಕ್ಕೆ, ಬಘೀರ (ಕ): ಮ.1.10ಕ್ಕೆ, ಲಕ್ಕಿ ಭಾಸ್ಕರ್ (ಮ): ಸಂ.4.15ಕ್ಕೆ, ಮಟ್ಕಾ (ತೆ): ರಾ.9.55ಕ್ಕೆ
ಸ್ಕ್ರೀನ್ 4	ಭೈರತಿ ರಣಗಲ್ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಬಘೀರ (ಕ): ಬೆ.10ಕ್ಕೆ, ಮ.3.55ಕ್ಕೆ, ಕಂಗುವಾ (ಕ): ಮ.1ಕ್ಕೆ, ಕಂಗುವಾ (ತ): ಸಂ.6.55ಕ್ಕೆ, ಅಮರನ್ (ತ): ರಾ.9.50ಕ್ಕೆ.
ಸ್ಕ್ರೀನ್ 2	ಅಮರನ್ (ಕ): ಬೆ.10.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಭೈರತಿ ರಣಗಲ್ (ಕ): ಬೆ.10ಕ್ಕೆ, ಸಂ.6.30ಕ್ಕೆ, ಅಮರನ್ (ಕ): ಮ.12.40ಕ್ಕೆ, ಕಂಗುವಾ (3ಡಿ)(ತ): ಮ.3.55ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಕಂಗುವಾ (ತ): ಬೆ.10.30ಕ್ಕೆ, ಸಂ.5.20ಕ್ಕೆ, ಅಮರನ್ (ತ): ಮ.2.10ಕ್ಕೆ, ಅಮರನ್ (ಕ): ರಾ.8.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪತ್ನಿಯ ಕತ್ತು ಕೊಯ್ದು ಹತ್ಯೆಗೈದು ಪೊಲೀಸರಿಗೆ ಶರಣಾದ ಪತಿ

ಮೈಸೂರು, ಡಿ.4(ಆರ್‌ಕೆ)– ಸಾಂಸಾರಿಕ ಕಲಹದಿಂದಾಗಿ ಪತ್ನಿಯ ಕತ್ತು ಕೊಯ್ದು ಕೊಲೆಗೈದು ಪತಿ ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದಾನೆ. ಈ ಘಟನೆ ಇಂದು ಮೈಸೂರಿನ ಲಕ್ಷ್ಮೀಕಾಂತನಗರದಲ್ಲಿ ಸಂಭವಿಸಿದೆ.

ಮೈಸೂರಿನ ಹೆಬ್ಬಾಳು ಲಕ್ಷ್ಮೀಕಾಂತ ನಗರದ ನಿವಾಸಿ ಮನು ಅವರ ಪತ್ನಿ ಶ್ರೀಮತಿ ಶೃತಿ (28) ಕೊಲೆಯಾದ ಮಹಿಳೆ. ಕೊಲೆ ಮಾಡಿದ ಪತಿ ಮನು ಇಂದು ಬೆಳಗ್ಗೆ ಹೆಬ್ಬಾಳು ಪೊಲೀಸ್ ಠಾಣೆಯಲ್ಲಿ ಶರಣಾಗಿದ್ದಾನೆ. ವಿಷಯ ತಿಳಿಯುತ್ತಿದ್ದಂತೆಯೇ ಪ್ರಕರಣ ದಾಖಲಿಸಿದ ಠಾಣಾ ಇನ್ಸ್‌ಪೆಕ್ಟರ್ ಎ.ಮಲ್ಲೇಶ್, ಸಿಬ್ಬಂದಿಯೊಂದಿಗೆ ಘಟನಾ ಸ್ಥಳಕ್ಕೆ ಧಾವಿಸಿ, ಮಹಜರು ನಡೆಸಿದರು. ನಂತರ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿ, ಮರಣೋತ್ತರ ಪರೀಕ್ಷೆ ನಂತರ ಇಂದು ಸಂಜೆ ವಾರಸುದಾರರಿಗೆ ಹಸ್ತಾಂತರಿಸಿದರು.

ಐದು ವರ್ಷಗಳ ಹಿಂದೆ ಮೈಸೂರಿನ ಅಗ್ರಹಾರ ಸರ್ಕಲ್ ಬಳಿಯ ನಿವಾಸಿ ಶೃತಿ ಅವರನ್ನು, ಟೈಲ್ಸ್ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಮನು ಮದುವೆಯಾಗಿದ್ದ. ನಂತರ ಸಾಂಸಾರಿಕ ಕಲಹಗಳಿಂದಾಗಿ ಕುಟುಂಬದಲ್ಲಿ ಒಡಕು ಉಂಟಾಗಿತ್ತು. ಹಿರಿಯರು ಹಲವು ಬಾರಿ ಬುದ್ಧಿವಾದ ಹೇಳಿ ಇಬ್ಬರನ್ನು ಒಂದುಗೂಡಿಸಿದ್ದರು. ಆದರೂ ಆತ ತನ್ನ ಚಾಳಿ ಬಿಡದೆ ಪತ್ನಿಯನ್ನು ಪೀಡಿಸತೊಡಗಿದ್ದ ಎಂದು ಕುಟುಂಬದವರು ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಇನ್ಸ್‌ಪೆಕ್ಟರ್ ಮಲ್ಲೇಶ್ ಶರಣಾದ ಪತಿ ಮನುವನ್ನು ಬಂಧಿಸಿ, ವಿಚಾರಣೆ ನಡೆಸಿದ ಬಳಿಕ ಇಂದು ಸಂಜೆ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕ್ಷುಲ್ಲಕ ಕಾರಣಕ್ಕೆ ದುರಂತ ನಡೆದು ಹೋಗಿದೆ. ಮಂಗಳವಾರ ರಾತ್ರಿ ಎಂದಿನಂತೆ ಊಟ ಮಾಡಿ ಮಲಗಿದ್ದ ಶೃತಿಯನ್ನು ಇಂದು ಮುಂಜಾನೆ ಚಾಕುವಿನಿಂದ ಕತ್ತು ಕೊಯ್ದು ಬರ್ಬರವಾಗಿ ಹತ್ಯೆ ಮಾಡಲಾಗಿದೆ.



ಕೊಲೆಯಾದ ಶೃತಿ | ಕೊಲೆಗೈದ ಪತಿ ಮನು

ಮಹಿಳಾ ಸ್ವ–ಸಹಾಯ ಸಂಘಗಳಿಂದ ಅರ್ಜಿ ಆಹ್ವಾನ

ಮೈಸೂರು,ಡಿ.4– ಕೇಂದ್ರ ಪುರಸ್ಕೃತ ಅಮೃತ್ 2.0 ಅಭಿಯಾನದ ಅಮೃತ್ ಮಿತ್ರ ಕಾರ್ಯಕ್ರಮದ ತಾಂತ್ರಿಕೇತರ ಚಟುವಟಿಕೆಯಡಿ ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿನ ತಾಲೂಕು ಕಚೇರಿ ಮುಂಭಾಗ ಇರುವ ಪಾರ್ಕ್ ನಿರ್ವಹಣೆ ಮಾಡಲು ಡೇ–ನಲ್ಮ್ ಯೋಜನೆಯಡಿ ರಚಿತವಾದ ಅರ್ಹ ಮಹಿಳಾ ಸ್ವ–ಸಹಾಯ ಸಂಘಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಮಹಿಳಾ ಸ್ವ–ಸಹಾಯ ಸಂಘಗಳು ಡೇ–ನಲ್ಮ್ ಶಾಖೆಗೆ ಭೇಟಿ ನೀಡಿ ಅರ್ಜಿ ನಮೂನೆಯನ್ನು ಪಡೆದು ಡಿಸೆಂಬರ್ 16 ರೊಳಗೆ ಪ್ರಸ್ತಾವನೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಡೇ–ನಲ್ಮ್ ಶಾಖೆಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ತಿ.ನರಸೀಪುರ ಪುರಸಭೆಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.